



# ಸಂಚಯ

ಸಾಂಸ್ಕೃತಿಕ ಪತ್ರಿಕೆ

ಸಂಚಿಕೆ ೭೪

# ಸಂಚಯ ಗ್ಯಾಲರಿ



*ಕಲಾವಿದರು :*
ಡಾ. ಸ್ವೆತಾಸ್ಲೋವ್ ರೋರಿಕ್



*ಕೃತಿ :*
ರೊಯಾ ಭಾವಚಿತ್ರ,
ತೈಲವರ್ಣ ಚಿತ್ರ



*ಕೃತಿ :*
ವಸ್ತು ಚಿತ್ರಣ,
ಟೆಂಪೆರ

# ಸಂಚಯ

ತ್ರೈಮಾಸಿಕ ಸಾಂಸ್ಕೃತಿಕ ಪತ್ರಿಕೆ

ಈಗಷ್ಟೆ ಮುಗುಳ್ನಕ್ಕ ಸೂಜಿ ಮಲ್ಲಿಗೆಯ ಬೆಳ್ಳಿ ನಗೆಯೆ
ಹೂ ನಕ್ಕಿ ಹಸುರೆ ಹಲವು ಬಗೆ ಕುಸುರೆ ಬೇಗ ಉಸುರೆ
ಬಿಟ್ಟಂಥ ಕಣ್ಣಲ್ಲಿ ವ್ಯರ್ಥ ಬಿಂಬಿಸಿಬಿಟ್ಟು ಹೊರಗುಳಿವ ಜಗವೆ
ಹೇಗೆ ಒಳಗೊಳ್ಳುವುದು ನಿಮ್ಮ ನನ್ನೊಳಗೆ

**– ಹೆಚ್.ಎಸ್. ವೆಂಕಟೇಶಮೂರ್ತಿ**

**ಸಂಪುಟ : ೧೩**
**ಸಂಚಿಕೆ : ೩(೬೪)**
**ಜುಲೈ - ಆಗಸ್ಟ್ ೨೦೦೪**

---

ಸಂಪಾದಕ :
**ಡಿ.ವಿ. ಪ್ರಹ್ಲಾದ್**

---

**ಚಂದಾವಿವರ**
ವಾರ್ಷಿಕ ಚಂದಾ : ರೂ. ೧೦೦/-
ಎರಡು ವರ್ಷ : ರೂ. ೨೦೦/-
ಐದು ವರ್ಷ : ರೂ. ೫೦೦/-

---

ರೇಖಾಚಿತ್ರಗಳು :
ಋತ ಎಸ್. ಮತ್ತು ಸೃಜನ್

---

**ಸಂಪರ್ಕ ವಿಳಾಸ**
ನಂ. ೧೦೦, ೨ನೇ ಮುಖ್ಯರಸ್ತೆ,
೬ನೇ ಬ್ಲಾಕ್, ೩ನೇ ಹಂತ,
೩ನೇ ಘಟ್ಟ, ಬನಶಂಕರಿ
ಬೆಂಗಳೂರು - ೫೬೦ ೦೮೫
ಫೋನ್ ನಂ. ೦೮೦-೨೬೭೯೧೯೨೫



# ಹೊಳೆದದ್ದೆ ತಾರೆ ಉಳಿದದ್ದು ಆಕಾಶ

ಪ್ರಿಯ ಓದುಗರೆ,

ಬಹಳ ಕಾಯಿಸಿ ಸತಾಯಿಸಿದ್ದ ಇನ್ನೊಂದು ಹಸಿರು ತಂದ ಮಳೆಗಾಲ ಇನ್ನೇನು ಮುಗಿಯತೊಡಗಿದೆ. ಕನ್ನಡ ಭಾಷೆಯ ಪ್ರಾಚೀನತೆ ಕುರಿತು ಮತ್ತೊಮ್ಮೆ ಚರ್ಚೆ ನಡೆಯುತ್ತಿದೆ. ಅನೇಕ ಜನ ಕನ್ನಡವೂ ತಮಿಳಿನಷ್ಟೇ ಪ್ರಾಚೀನ ಭಾಷೆ ಅದಕ್ಕೂ ತಮಿಳಿಗೆ ಸಿಕ್ಕ 'ಕ್ಲಾಸಿಕಲ್ ಭಾಷೆ' ಎನ್ನುವ ಮನ್ನಣೆ ಸಿಗಲಿ ಅನ್ನುವ ವಾದ ಮಂಡಿಸತೊಡಗಿದ್ದಾರೆ. ಈಗ ತಮಿಳು ಭಾಷೆಗೆ ದೊರಕಿರುವ ಮನ್ನಣೆಗೆ ತಮಿಳುನಾಡಿನ ರಾಜಕೀಯ ಪಕ್ಷಗಳು ಕೇಂದ್ರ ಸರ್ಕಾರದ ಜೊತೆಗೆ ಹೊಂದಿರುವ ಸಂಬಂಧದ ಸ್ವರೂಪ ಬಹು ಮುಖ್ಯ ಕಾರಣ. ರಾಜಕಾರಣದ ಚದುರಂಗದಲ್ಲಿ ಕನ್ನಡಕ್ಕೆ ಮನ್ನಣೆಯ ಮಣೆ ದೊರಕಿಸಿಕೊಡುವಷ್ಟರ ಮಟ್ಟಿಗಿನ ಛಾತಿ, ವರ್ಚಸ್ಸು ತಾಕತ್ತು ನಮ್ಮ ರಾಜಕಾರಣಿಗಳಲ್ಲಿ ಇಲ್ಲ. ಇಂಥ ಕ್ಲಾಸಿಕಲ್ ಪಟ್ಟವನ್ನು ಸದ್ಯ ಜೀವಂತವಿಲ್ಲದ ಭಾಷೆಗಳಿಗೆ ಕೊಡುತ್ತಾರೆ ಎನ್ನುವ ಕೆ.ವಿ. ನಾರಾಯಣ ಅವರ ಅಭಿಪ್ರಾಯ ನಾವು ಮತ್ತೊಂದು ನೆಲೆಯಿಂದ ಆಲೋಚಿಸಬಹುದಾದ ವಿಚಾರ. ಕೆಲವರು ಕನ್ನಡಕ್ಕೆ ಇಂಥ ಮನ್ನಣೆ ಬೇಕಾಗಿಲ್ಲ ಎಂದಿದ್ದಾರೆ. ನದಿಯ ನೀರಿನ ಹಾಗೆ ಒಂದೇ ಕ್ಷಣಕ್ಕೆ ಪ್ರಾಚೀನವೂ ನಿತ್ಯ ನೂತನವೂ ಆದ ಭಾಷೆಗೆ ಹೊರ ತೋರಿಕೆಯ ಈ ಯಾವ ಮನ್ನಣೆಗಳೂ ಹೆಚ್ಚಿನ ವ್ಯತ್ಯಾಸವನ್ನೇನೂ ಮಾಡಲಾರವು.

ಮತ್ತೊಮ್ಮೆ ಸಂಚಯ ತಡವಾಗಿದೆ. ಬರೆಯುವುದು ನಮ್ಮ ಲೇಖಕರಿಗೆ ಯಾಕೆ ಮುಖ್ಯ ಅನ್ನಿಸುತ್ತಿಲ್ಲ ಅನ್ನುವುದೂ ಗಂಭೀರವಾಗಿ ಆಲೋಚಿಸಬೇಕಾದ ವಿಚಾರವಾಗಿದೆ. ಕಿರು ಸಾಹಿತ್ಯ ಪತ್ರಿಕೆಗಳಿಗೆ ಇಂಥ ಕುಂಟುಗಾಲಿನ ನಡಿಗೆ ಸಹಜ ಅನಿವಾರ್ಯ ಅನ್ನಿಸುವಷ್ಟಾಗಿ ಬಿಟ್ಟಿದೆ. ಸಾಹಿತ್ಯ ಪತ್ರಿಕೆಗಳ ಪಾತ್ರವನ್ನು ಅವುಗಳ ಪ್ರಾಮುಖ್ಯವನ್ನು ಬಾಯಿ ತುಂಬಾ ಹೊಗಳುವ ಲೇಖಕರು ಅವುಗಳಿಗೆ ಬರೆಯುವ ಮೂಲಕ ಸಕ್ರಿಯಗೊಳಿಸುವ ವಿಚಾರಕ್ಕೆ ಬಂದಾಗ ಇಲ್ಲದ ಸಬೂಬುಗಳನ್ನು ಹೇಳತೊಡಗುವುದು ವಿಚಿತ್ರ. ವಿವಿಧ ವಯಸ್ಸಿನ, ಮನೋಧರ್ಮಗಳ ಲೇಖಕರು ಬರೆಯದೇ ಬರೀ ಬಾಯುಪಚಾರದ ಮಾತುಗಳಲ್ಲಿ ಸಾಹಿತ್ಯ ಪತ್ರಿಕೆಗಳನ್ನು ಉಳಿಸಿಕೊಳ್ಳುವುದಾಗಲೀ ಬೆಳೆಸುವುದಾಗಲೀ ಅಸಾಧ್ಯ. ಕ್ಯಾಲೆಂಡರ್ ವರ್ಷವೊಂದಕ್ಕೆ ನಾಲ್ಕು ಸಂಚಿಕೆ ಕೊಡಬೇಕೆನ್ನುವ ನಮ್ಮ ಒಪ್ಪಂದಕ್ಕೆ ತೊಂದರೆ ಆಗದಂತೆ ಡಿಸೆಂಬರ್ ೩೧ರ ಒಳಗೆ ಮತ್ತೊಂದು ಸಂಚಯ ಸಿದ್ಧಗೊಳ್ಳಲಿದೆ. ನಮ್ಮ ಹಿರಿಯ ಕವಿ ರಾಮಚಂದ್ರ ಶರ್ಮರ ಸಾಹಿತ್ಯ ಕುರಿತು ವಿಶೇಷ ಸಂಚಿಕೆ. ಕೆಎಸ್‌ನ ಬಗೆಗೆ ವಿಶೇಷ ಸಂಚಿಕೆಗೆ ಇನ್ನೂ ಸ್ವಲ್ಪ ಸಮಯ-ತಯಾರಿ ಎರಡೂ ಬೇಕಿದೆ. ಜನಬಲ, ಹಣಬಲ ಎರಡೂ ಸಂಚಯಕ್ಕೆ ಬೇಕು. ಇನ್ನಷ್ಟು ಗೆಳೆಯರ ಚಂದಾ ಕೊಡಿಸಿ, ತಪ್ಪದೇ ನಿಮ್ಮ ಚಂದಾ ನವೀಕರಿಸಿ.

ಮತ್ತೇನು ಬರೆಯಲಿ? ಮತ್ತೆ ಮುಂದಿನ ಸಂಚಿಕೆಗೆ,

ನಿಮ್ಮ
**ಸಂಪಾದಕ**

---

**ಸೂಚನೆ :** ನಿಮಗೆ ಸಂಚಯದ ಸಂಚಿಕೆಗಳು ಸಕಾಲಕ್ಕೆ ತಲುಪದೇ ಇದ್ದಲ್ಲಿ ಸಂಪಾದಕರಿಗೆ ಪತ್ರ ಬರೆದು ತಿಳಿಸಿ ಅಥವಾ ಫೋನ್ ಮಾಡಿ.

# ಈ ಸಂಚಯದಲ್ಲಿ...







# ಡಾ. ಶಂಕರ ಮೊಕಾಶಿ ಪುಣೇಕರರ ಸಾಂಸ್ಕೃತಿಕ ಮಹತ್ವ

✦ ಜಿ.ಬಿ. ಹರೀಶ

ಶ್ರೇಷ್ಠ ವ್ಯಾಸಂಗ, ಸಂಶೋಧನೆ, ಅಧ್ಯಾಪನ ಮತ್ತು ರಸಿಕತೆಯಿಂದ ಕೂಡಿದ ಬರವಣಿಗೆ ಶಂಕರ ಮೊಕಾಶಿ ಪುಣೇಕರರದು. ೧೯೨೮ರಲ್ಲಿ ಧಾರವಾಡದಲ್ಲಿ ಜನಿಸಿದ ಮೊಕಾಶಿ ಅವರದು ಹೋರಾಟದ ಬದುಕು. ಅವರ ಹೆಸರಿನಲ್ಲೇ 'ಮೊಕಾಶಿ' ಮತ್ತು 'ಪುಣೇಕರ' ಮನೆತನಗಳು ಸೇರಿಹೋಗಿವೆ. ಹುಟ್ಟಿದ ಐದೇ ವರ್ಷಕ್ಕೆ ತಾಯಿಯನ್ನು ಕಳಕೊಂಡ ಇವರನ್ನು ಅಜ್ಜ-ಅಜ್ಜಿಯರೇ ಸಾಕಿದರು(ತಂದೆಯ ಹೆಸರು ರಾವಜಿರಾವ್ ಅಣ್ಣಿಗೇರಿ). "ನೀರು ತುಂಬಿಸಲು ನಿಂತ ತಾಯಿ ಅನ್ಯಮನಸ್ಕಳಾಗಿ ನಿಂತು ಕೊಡ ತುಂಬಿ ಹರಿಯುವುದನ್ನು ನೋಡದೇನೆ ಶೂನ್ಯಮನದಿಂದ ನಿಂತಿದ್ದೊಂದೇ ನನಗೆ ಅರಿವು" ಎಂದು ತಾಯಿಯ ಕುರಿತು ಆಡಿದ್ದಾರೆ ('ನನ್ನ ಆತ್ಮವೃತ್ತ') ಪುಣೇಕರರು. ಮ್ಯಾಟ್ರಿಕ್ ಪರೀಕ್ಷೆಗೆ ಕೂಡುವ ಸಮಯಕ್ಕೆ ಅಜ್ಜರಾಮಭಾವು ತೀರಿಕೊಂಡಿದ್ದರಿಂದ ಮನೆಗೆ ಬರುತ್ತಿದ್ದ ಅರವತ್ತು ರೂಪಾಯಿ ಪೆನ್ಶನ್ ಹಣ ನಿಂತುಹೋಗಿ, ಇವರ ಅಜ್ಜಿ ಕಷ್ಟದಿಂದ ಮನೆ ತೂಗಿಸಿದರು.

ಮೊಕಾಶಿಯವರ ವ್ಯಕ್ತಿತ್ವದಲ್ಲಿ ಕೊನೆತನಕ ಒಂದು ಬಿರುಕು ಉಳಿದುಕೊಂಡಿಬಿಟ್ಟಿತ್ತು. ಇದಕ್ಕೆ ಕಾರಣ ಅವರು ಐದು ವರ್ಷದವರಾಗುವ ತನಕ ಶಂಕರ ರಾಮರಾವ್ ಪುಣೇಕರ್ ಇದ್ದವರು ಶಾಲೆಯ ಹಾಜರಾತಿ ಪುಸ್ತಕದಲ್ಲಿ ಶಂಕರ

ರಾವಜೀರಾವ್ ಮೊಕಾಶಿ ಆಗಿಬಿಟ್ಟರು! ಅವರು ಈ ಮನೆತನದಿಂದ ಆ ಮನೆತನಕ್ಕೆ ದತ್ತು ಬಂದವರು. ಮೊಕಾಶಿಯವರು ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿ ಕಾಲೇಜಿಗೆ ಹೋಗುವ ಸಮಯಕ್ಕೆ ಅಂಗಡಿಯವರು ಇವರ ಕುಟುಂಬಕ್ಕೆ ಸಾಲ ಕೊಡಲೂ ನಿರಾಕರಿಸಿದರು. ಆಗ ಅಕ್ಕಪಕ್ಕದವರು ಕೊಟ್ಟ ಅಲಸಂದಿ ಕಾಳು ತಿಂದು ಹೇಸಿಗೆ ಬಂದು ಒಮ್ಮೆ ಇವರಿಗೆ ವಾಂತಿಯಾದ ನಂತರವೇ ಅಜ್ಜಿ ಬೇಳೆ ಹುಳಿ ಮಾಡತೊಡಗಿದ್ದು! ಮೊಕಾಶಿ ಮನೆತನದವರ ಈ ಬಡತನಕ್ಕೆ ಮರುಗಿ ರುಕ್ಮಾಂಗದ ರಾವ್ ದೇಶಪಾಂಡೆ ಎಂಬ ಶ್ರೀಮಂತರು ತಿಂಗಳಿಗೆ ಇಪ್ಪತ್ತು ರೂಪಾಯಿ ಹಣಸಹಾಯ ಮಾಡತೊಡಗಿದರು. (ನನ್ನ ಹಿರಿಯ ಸ್ನೇಹಿತರೊಬ್ಬರು ಹಳ್ಳಿಯ ಮನೆಯಲ್ಲಿ ತಿನ್ನಲೂ ಏನೂ ಇರದೆ ಅವರ ಅಜ್ಜ ಸಂಜೆ, ಕಾಡಿನಿಂದ ಕಾಡುನೇರಳೆ ಹಣ್ಣನ್ನು ರಾಶಿ ರಾಶಿ ತಂದಾಗ ಅದನ್ನೇ ತಿಂದು ನೀರು ಕುಡಿದು ಮಲಗಿದ ದಿನಗಳ ನೆನಪು ಬಿಚ್ಚಿಟ್ಟದ್ದು ಸ್ಮರಣೆಯಾಗುತ್ತಿದೆ). ೧೯೪೮ರಲ್ಲಿ ಮೊಕಾಶಿಯವರು ವಿವಾಹಿತರಾದರು. ಆಗ ಅವರಿಗೆ ಇಪ್ಪತ್ತು ವರ್ಷ.

ಮದುವೆಯ ವರ್ಷದಲ್ಲೇ ಗೃಹಸ್ಥ ಜೀವನದ ಮೊದಲ ಹಂತದಲ್ಲೇ ಸಾಹಿತ್ಯ ಕೃತಿಯ ಪ್ರಕಟಣೆ ಆರಂಭವಾಯಿತು. ಮುಂದೆ ನಾಡಿನ ಖ್ಯಾತ ವಿಮರ್ಶಕರಾದ ಕೀರ್ತನಾಥ ಕುರ್ತುಕೋಟಿ ಹಾಗೂ ಕಣೇಕಲ್ ಎಂಬ ಕಾಲೇಜು ಗೆಳೆಯರೊಡನೆ ಸೇರಿ, 'ಗಾನಕೇಳಿ' (೧೯೪೮) ಎಂಬ ಕವನ ಸಂಕಲನ ಪ್ರಕಟಪಡಿಸಿದರು. ಕಾಲೇಜಿನಲ್ಲಿ ಬಿ.ಎಂ. ಶ್ರೀಕಂಠಯ್ಯನವರ ಕೈಕೆಳಗೆ ಒಂದು ವರ್ಷ ವಿದ್ಯಾಭ್ಯಾಸ ಮಾಡಿದರು. 'ಶ್ರೀ' ಅವರ ಪ್ರೋತ್ಸಾಹದಿಂದ ಇಂಗ್ಲಿಷ್ ಸೆಮಿನಾರಿನ ಸೆಕ್ರೆಟರಿಯಾಗಿ ಒಂದು ಸೆಮಿನಾರಿನಲ್ಲಿ ಶೇಕ್ಸ್‌ಪಿಯರ್‌ನ 'Richard the Second' ಕುರಿತ ಶ್ರೀ ಅವರ ಭಾಷಣ ಅವರಲ್ಲಿ ಸಾಹಿತ್ಯಕ ಅಭ್ಯಾಸಕ್ಕೆ ಉತ್ತೇಜನ ನೀಡಿತು. ಮನೆಯಲ್ಲಿ ಕಾಳಿದಾಸನ ಕೃತಿಗಳು, ಗೀತೆಯ ಅಭ್ಯಾಸ ನಿರಂತರವಾಗಿ ನಡೆಸಿದ್ದರು. ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ — ಈ ಮೂರೂ ಭಾಷೆಗಳಲ್ಲಿ ಸಾಂಸ್ಕೃತಿಕ ಲೇಖಕರಾಗಿ ಬೇರೂರಲು ಸಾಕಷ್ಟು ತಯಾರಿ ಅವರ ತಾರುಣ್ಯದಲ್ಲೇ ಕಾಣುತ್ತದೆ.

★

'ಕಾಲಾದೇಶ ಪಾತ್ರ ನಮ್ಮ ದೇಹದ ಗಾತ್ರಾ
ಇರವಿ ಹರಿದಾಡತಾವ ಅರಿವಿನ ಮ್ಯಾಲಾ
ಬರವಣಿಗೆ ತುಂಬತಾವ ಸಾಲ'

– ವರಕವಿ ಬೇಂದ್ರೆಯವರ ಈ ಕವಿತೆಯ ಸಾಲಿನಂತೆ ಮೊಕಾಶಿಯವರಿಗೆ 'ಶ್ರೀ'ಯವರ ನಂತರ ಕರ್ನಾಟಕ ಕಾಲೇಜಿನ ಪ್ರೊ. ಅರ್ಮಂಡೊ ಮೆನೆಝಿಸ್ ಅವರ ಸಂಪರ್ಕಉಂಟಾಗಿ ನಂತರ ಇಬ್ಬರೂ ಸೇರಿ, ಬೇಂದ್ರೆಯವರ ಕವನಗಳನ್ನು ಇಂಗ್ಲಿಷಿಗೆ ಅನುವಾದಿಸಿದರು. ಅವರಿಗೆ ಇಂಗ್ಲಿಷಿನ ವೃತ್ತ, ಛಂದಸ್ಸುಗಳ 'ಪಕ್ಕಾ' ಜ್ಞಾನ ಉಂಟಾಗಿದ್ದು ಮೆನೆಝಿಸ್ ಅವರಿಂದಲೇ. ಮೊಕಾಶಿಯವರ ಆರಂಭದ ಸಾಹಿತ್ಯಕ ಪ್ರಭಾವ, ದಿಶೆ ಕುರಿತು ಮುಗಿಸುವ ಮೊದಲು ಒಂದು ಮಾತು. ಅವರು ಬೆಳೆದ ವಾತಾವರಣದಲ್ಲಿ ಭಾರತೀಯ ಸಂಸ್ಕೃತಿ, ರಾಷ್ಟ್ರೀಯತೆ, ಸ್ವಾಭಿಮಾನ, ಸ್ವದೇಶೀ ಚಿಂತನೆಯ ದಟ್ಟ ಪ್ರಭಾವವಿತ್ತು. ರೂಢಿಗತವಾದ ಈ ಸತ್ವಕ್ಕೆ ಪಾಶ್ಚಾತ್ಯ ಶಿಕ್ಷಣದ ಮೂಲಕ ಅನೇಕ ವಾದ, ಸಿದ್ಧಾಂತಗಳು ವಿರುದ್ಧವಾಗಿ ಕೆಲಸ ಮಾಡುತ್ತಿದ್ದವು. ಮೊಕಾಶಿಯವರಲ್ಲಿನ ಪೂರ್ವ-ಪಶ್ಚಿಮಗಳ 'ಕಲ್ಚರಲ್ ಡೈನಮಿಕ್ಸ್' ಅಭ್ಯಾಸ ಮಾಡಲು ಅವರ ಬಾಲ್ಯ- ತಾರುಣ್ಯ ಜೀವನ ಪರಿಸರದ, ಅಭ್ಯಾಸ ಅವಶ್ಯಕ ಎಂದಷ್ಟೇ ಸದ್ಯಕ್ಕೆ ಹೇಳಬಹುದು.

★

ಮೊಕಾಶಿ ಸಾಂಸ್ಕೃತಿಕ ವಿಮರ್ಶಕರಾಗಿದ್ದರೂ ಈಗಿನ ಕೆಲವರಂತೆ ವಿಮರ್ಶೆಯನ್ನು ಉಸಿರು ಗಟ್ಟಿಸುವ ತರ್ಕಯಂತ್ರ(ಜಾರ್ಗನ್)ದಲ್ಲಿ ಹುದುಗಿಸಿಟ್ಟವರಲ್ಲ. ವಿಮರ್ಶೆ ಎಂದರೆ ಯೂರೋಪಿನ ಅಥವಾ ಭಾರತೀಯ ಕಾವ್ಯ ಮೀಮಾಂಸೆಯ ಯಾವುದೋ ಒಂದು ವಾದ-ಚಿಂತನಾ ತಿರುಗಣಿಗೆ ಬಂದು ಬೀಳಲೇಬೇಕೆಂಬ ಹಠ ಅವರಿಗಿರಲಿಲ್ಲ. ಸಂಸ್ಕೃತಿಯನ್ನು ಪದರುಪದರಾಗಿ ವಿಶ್ಲೇಷಿಸಲು ಬೇಕಾದ ವಿಶ್ಲೇಷಣಾ ಸಾಮರ್ಥ್ಯವಂತೂ ಇದ್ದೇ ಇತ್ತು. ಅದರ ಜೊತೆಯಲ್ಲಿ ಸಂಸ್ಕೃತಿ ಸಂಸ್ಕೃತಿಗಳನ್ನೇ (ಇದರಲ್ಲಿ Culture is a way of life ಎಂಬ ದೃಷ್ಟಿಯೂ ಬಂತು) ಎದುರು ಬದರು ನಿಲ್ಲಿಸಿ ನಿಕಷಕ್ಕೊಡ್ಡುವ ಎದೆಗಾರಿಕೆಯೂ ಹೇರಳವಾಗಿದೆ. ಧಾರಳವಾದ ಬಿಚ್ಚುಮಾತಿನ, ಕೋಪ-ರೋಷ-ವಾದ-ವಿತಂಡ-ನಿಷಿತ ಚಿಂತನೆ, ಭಾರತೀಯ ಸಂಸ್ಕೃತಿಯ ಆಳವಾದ ಅಧ್ಯಯನದಿಂದ ಉಂಟಾದ ಶ್ರದ್ಧೆ ಇವೆಲ್ಲ ಅವರ ಸಂಸ್ಕೃತಿ ಚಿಂತನೆಯ ಹಲವು ಮಗ್ಗುಲುಗಳು.

ಆರು ದಶಕಗಳ ಕಾಲ ನಿರಂತರವಾಗಿ ಕ್ರಿಯಾಶೀಲರಾಗಿದ್ದ ಮೊಕಾಶಿಯವರು ಭಾರತೀಯ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಗಟ್ಟಿಯಾಗಿ ನಿಂತವರು. ವಿದ್ಯೆ ಎಂದರೆ 'ಉಪಾಸನೆ' ಎಂದೇ ನಂಬಿದ್ದವರು. ತಮ್ಮ ಆಸಕ್ತಿಗೆ ತಕ್ಕಂತೆ ಕರ್ನಾಟಕದ ತತ್ಕಾಲೀನ ಸಂಸ್ಕೃತಿ (೧೯೦೦ ರಿಂದ ೨೦೦೪), ಲಿಪಿಶಾಸ್ತ್ರ ವ್ಯಾಕರಣ, ನಾಥ-ಅವಧೂತ ಪಂಥ, ಗುರು-ಶಿಷ್ಯ ಪರಂಪರೆ, ಸಂಸ್ಕೃತಿ, ಧರ್ಮ ಮತ್ತು ನೀತಿಯ ನಡುವಿನ ಆಳವಾದ ಬಿರುಕುಬಿಟ್ಟ ಸಂಬಂಧ, ಕನ್ನಡ ನವೋದಯ ಮತ್ತು ನವ್ಯ ಪಂಥಗಳ ನಡುವಿನ ಕೃತಕ ಭೇದ ಕುರಿತ ಚಿಂತನೆ ಮೊದಲಾದ ಕೆಲವು ಕ್ಷೇತ್ರಗಳಲ್ಲಿ ವ್ಯಾಸಂಗ – ಲೇಖನ ವ್ಯವಸಾಯ ನಡೆಸಿಯೇ ಇದ್ದರು. ಇದಲ್ಲದೆ ಸಂಗೀತದಲ್ಲಿ ಸ್ವಯಂ ಪರಿಶ್ರಮವಿದ್ದ ಅವರು ೧೯೬೫ರಿಂದ ೧೯೭೦ರ ತನಕ 'ಟೈಮ್ಸ್ ಆಫ್ ಇಂಡಿಯಾ'ದ ಏಕೈಕ ಸಂಗೀತ ವಿಮರ್ಶಕರಾಗಿ ನಾಸಿರುದ್ದೀನ ಖಾನ, ಭೀಮಸೇನ ಜೋಷಿ, ಗುಲಾಮ ಮುಸ್ತಫಾ ಖಾನ್, ಹರಿಪ್ರಸಾದ ಚೌರಾಸಿಯಾ, ಕಿಶೋರಿ ಅಮೋಲಕರ, ಜಸರಾಜ, ಕುಮಾರ ಗಂಧರ್ವ ಮೊದಲಾದ ಘಟಾನುಘಟಿಗಳ ಕುರಿತು ವಿಮರ್ಶೆ ಬರೆದು, ಕೆಲವೊಮ್ಮೆ ಪ್ರಶಂಸೆ, ಹಲವು ಬಾರಿ ವಾದ-ವಿವಾದಗಳಿಗೆ ಈಡಾದರು. ಕನ್ನಡದಲ್ಲಿ ಈ ತಲೆಮಾರಿನ ಸಾಹಿತಿಗಳಲ್ಲಿ ಸಂಗೀತ ರಸಿಕರ ಸಂಖ್ಯೆ ವಿರಳಾತಿವಿರಳವಾಗುತ್ತಿರುವುದು ನಾಡಿನ ದೌರ್ಭಾಗ್ಯ (ಹಿಂದಿನ ತಲೆಮಾರಿನಲ್ಲಿ ಎಸ್.ಎಲ್. ಭೈರಪ್ಪ ಸ್ವತಃ ಮೊಕಾಶಿ, ಕುರ್ತುಕೋಟಿಯಂಥವರಿದ್ದರು. ಸ್ವಾತಂತ್ರ್ಯಪ್ರಾಪ್ತಿ ಸಮಯದ ಹಿಂದು ಮುಂದಿನ ಕಾಲವಂತೂ ಕೇಳುವುದೇ ಬೇಡ. ಡಿ.ವಿ.ಜಿ, ವಿ.ಸೀ, ರಾಳ್ಲಪಳ್ಳಿ, ಬಿ. ಪುಟ್ಟ ಸ್ವಾಮಯ್ಯ, ಕಾರಂತ್ – ಹೀಗೆ ಶಾಲಾ ಕಾಲೇಜು ಶಿಕ್ಷಣ ಇರುವವರು, ಇಲ್ಲದವರು ಎಂಬ ಭೇದವಿಲ್ಲದೆ ಸಂಗೀತ ಪ್ರೇಮಿಗಳಿದ್ದರು).

ಮೊಕಾಶಿಯವರ ಸಂಕ್ಷಿಪ್ತ ಪರಿಚಯವನ್ನು ಇಲ್ಲಿಗೆ ಮೊಟಕುಗೊಳಿಸಿ, ಅವರು ಕನ್ನಡದ ಸಾಂಸ್ಕೃತಿಕ ವಿಮರ್ಶಾಕ್ಷೇತ್ರಕ್ಕೆ ಕೊಟ್ಟ ಕೊಡುಗೆಯನ್ನು ಮಾತ್ರ ಸ್ವಲ್ಪಮಟ್ಟಿಗೆ ಗಮನಿಸುವಾ. ಅದಕ್ಕೆ ಹಿನ್ನೆಲೆಯಾಗಿ ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ-ಸಂಸ್ಕೃತಿ ಕುರಿತಂತೆ ಕೆಲವು ಮಾತುಗಳು :

೧. ಕನ್ನಡ ಸಾಹಿತ್ಯ ಚಳವಳಿಗಳು ಪಾಶ್ಚಾತ್ಯ ಸಾಹಿತ್ಯದ ಒಂದಲ್ಲ ಒಂದು ಪ್ರಭಾವದಿಂದ ಮತ್ತು ಅದರೊಡನೆ ತಿಕ್ಕಾಟದಿಂದ ರೂಪುಗೊಂಡವು.

೨. ಸಾಹಿತ್ಯ ವಿಮರ್ಶೆ ನವೋದಯದಲ್ಲಿ ರಸ ವಿಮರ್ಶೆಯಾಗಿ, ನವ್ಯರಲ್ಲಿ ಆಕೃತಿ,

ರೂಪ, ಬಂಧನ ಪ್ರಶ್ನೆಯಾಗಿ, ದಲಿತ -ಬಂಡಾಯದಲ್ಲಿ ಅಧೀನ ಮತ್ತು ಪ್ರಧಾನ ಸಂಸ್ಕೃತಿಗಳು ನಿರಂತರ ತಲೆಕೆಳಗಾಗುವ ಪ್ರಕ್ರಿಯೆಯಾಗಿ ಮೂಡಿಬಂದಿತು. 'ಬಹುಸಂಸ್ಕೃತಿ' ಮತ್ತು 'ಬಹು ಜನಾಂಗಗಳ ಸಂಸ್ಕೃತಿ'ಯ ಗುರುತಿಸುವಿಕೆ ಇಪ್ಪತ್ತನೆಯ ಶತಮಾನದ ಕಡೆಯ ಎರಡು ದಶಕಗಳಲ್ಲಿ ನಡೆಯಿತು.

೩. ಯಾವುದೇ ಸಾಹಿತ್ಯ ಚಳುವಳಿಯ ಪ್ರಣಾಳಿಕೆಗಳಿಗೆ ಮಾತ್ರ ಬಾಧ್ಯರಾಗದೆ ತಮ್ಮದೇ ಆದ ತ್ರಯಸ್ಥ ಮಾನದಂಡಗಳನ್ನಿರಿಸಿಕೊಂಡು ಇಡೀ ಪರಂಪರೆಯನ್ನು ವಿಮರ್ಶೆಗೊಳಪಡಿಸುವ ವಿಮರ್ಶಕರು ಇದುವರೆಗೂ ಕಂಡುಬಂದಿಲ್ಲ.

ಈಗ ಮೊಕಾಶಿಯವರ ಕೊಡುಗೆಯತ್ತ ಹೊರಳೋಣ. ಪಾಶ್ಚಾತ್ಯ ಸಾಹಿತ್ಯ ಸಂಪ್ರದಾಯದಲ್ಲಿ ಪ್ಲೇಟೋವಿನ 'ಆದರ್ಶವಾದ' ಮತ್ತು ಅರಿಸ್ಟಾಟಲನ 'ವಾಸ್ತವವಾದ'ದ ಆಧಾರದ ಮೇಲೆ ಶತಮಾನದುದ್ದಕ್ಕೂ ಪರಿವರ್ತನೆ, ಮಂಡನೆ-ಖಂಡನೆಗಳಾಗಿರುವುದನ್ನು ಅನೇಕರು ಗುರುತಿಸಿದ್ದಾರೆ. ಮೊಕಾಶಿಯವರು 'ಯುರೋಪಿಯನ್ ವಿಮರ್ಶೆಯ ಇತಿಹಾಸ' (೧೯೭೭) ರಚಿಸಿ ಪ್ಲೇಟೋ ಕಾಲದಿಂದ ಮಾರ್ಕ್ಸಿಸ್ಟ್ ವಿಮರ್ಶೆಯ ರೂಪುರೇಷೆಯ ತನಕ ನಡೆದು ಬಂದ ವಾದಗಳನ್ನು ಸಂಕ್ಷೇಪವಾಗಿ ಹೇಳಿದ್ದಾರೆ. ಪಾಶ್ಚಾತ್ಯರ ವಾದಗಳನ್ನೆಲ್ಲ ಆದಷ್ಟು ಅಡಕವಾಗಿ ಹೇಳುವುದರಲ್ಲಿ ಮೊಕಾಶಿ ಏನೇನು ಫಜೀತಿ ಮಾಡಿಕೊಂಡಿದ್ದಾರೆ ಎಂಬುದನ್ನು ವಿದ್ವಾಂಸರು ತೋರಿಸಿದ್ದಾರೆ ('ಗಂಧ ಕೊರಡು'ವಿನಲ್ಲಿ ಜಿ.ಬಿ. ಸಜ್ಜನರ ಲೇಖನ), ಆದರೆ ಭಾರತೀಯ ಸಂಸ್ಕೃತಿಯ ಮುಖ್ಯ ಕಲ್ಪನೆಗಳನ್ನು ಪಾಶ್ಚಾತ್ಯರ ಹಲವು ಪಾರಿಭಾಷಿಕ ಪದಗಳೊಡನೆ ತುಲನೆ ಮಾಡುವ ಪ್ರವೃತ್ತಿ ಮೊಕಾಶಿಯವರದೇ ವಿಶಿಷ್ಟತೆ. ಉದಾ: 'ರೊಮ್ಯಾಂಟಿಕ್' ಶಬ್ದ ಕುರಿತು ಹೇಳುವಾಗ, ಭಾರತಕ್ಕೆ ಈ ಶಬ್ದ ಅಗತ್ಯವಿಲ್ಲ, ಏಕೆಂದರೆ ಪಾಶ್ಚಾತ್ಯರಲ್ಲಿ ಅಂತರ್ಮುಖಿ-ಬಹಿರ್ಮುಖಿ, ದೇವ-ಮಾನವ, ಭೌತಿಕ-ಮಾನಸಿಕ ಇಂಥ ದ್ವಂದ್ವಗಳು ಇತ್ತೀಚಿನವರೆಗೆ ಪ್ರಚಲಿತವಿದ್ದವು. ಫ್ರಾಯ್ಡ್ ಬಂದ ಮೇಲೆ ಅವರಲ್ಲಿ ಮಾನಸಿಕ ಸ್ತರಗಳ ಕಲ್ಪನೆ ಬಂದದ್ದು ಎನ್ನುತ್ತಾರೆ.

ಇಲ್ಲೊಂದು ಅಪಾಯವಿದೆ. ಭಾರತೀಯ ಸಂಸ್ಕೃತಿ ಎಂದರೆ ಏಕಾಕಾರಿ, ವೈದಿಕ ಮತ ಮೂಲದ್ದು ಮಾತ್ರವೇ ಎಂಬ ಧೋರಣೆ ಅಖಿಲ ಭಾರತ ವ್ಯಾಪ್ತಿಯ ಚಿಂತಕರಲ್ಲಿದೆ. ಮೊಕಾಶಿಯವರಲ್ಲಿ ಈ ದುರ್ಬುದ್ಧಿ ಇಲ್ಲ. ಅವರಿಗೆ ಭಾರತೀಯ ಸಂಸ್ಕೃತಿ ಎಂದರೆ Pluralism ಸ್ವರೂಪದ್ದು. ಅದಕ್ಕೆಂದೇ ಕಟ್ಟಾ ವೈದಿಕ (ಅಂದರೆ ವೇದದ ಚಿಂತನೆಗೆ, ಅದರಲ್ಲೂ ಶ್ರೀ ಅರೋಬಿಂದೋ ಸಂಪ್ರದಾಯದ ವ್ಯಾಖ್ಯಾನಕ್ಕೆ ಹತ್ತಿರವಾದ) ಚಿಂತಕರಾದ ಮೊಕಾಶಿಯವರಿಗೆ ನಾಥ ಪಂಥ- ಅವಧೂತ ಪರಂಪರೆಗಳ ವಿಸ್ತೃತ ವ್ಯಾಖ್ಯಾನ ಸಾಧ್ಯವಾಗುತ್ತದೆ.

ಎರಡನೆಯದು ಬೇಂದ್ರೆಯವರ ಕವಿತೆಗಳ ಅಧ್ಯಯನ. ದ.ರಾ. ಬೇಂದ್ರೆಯವರು ಕನ್ನಡದ ಅವಧೂತ ಕವಿ. ನಿಂತ ನೆಲದಲ್ಲಿ ಬೇರೆ ಬೇರೆ 'ಮೂಡ್'ಗಳನ್ನು ಶಬ್ದದಲ್ಲಿ ಬಂಧಿಸಬಲ್ಲ ಸಮರ್ಥರು. ಪ್ರಕಟವಾದ ಅವರ ಕವಿತೆಗಳೆಲ್ಲ ಒಂದೇ ಕಾಲಾನುಕ್ರಮದಲ್ಲಿಲ್ಲ. ನಮ್ಮ ವಿಮರ್ಶಕರ ಅಯೋಗ್ಯತನದಿಂದ ಅವನ್ನು ಇತಿಹಾಸದಲ್ಲಿ — ಮೊದಲು ಮೌರ್ಯವಂಶ, ನಂತರ ಗುಪ್ತವಂಶ ಎಂದು ಓದುವಂತೆ ಓದಲಾಯಿತು. ಇದರಿಂದ ಬೇಂದ್ರೆಯ 'ಅರಳುಮರಳು' ತನಕದ ಕವಿತೆಯನ್ನು ಸೃಜನಶೀಲವೆಂದೂ, ನಂತರದ್ದನ್ನು, ಕೇವಲ ಕವಿಯಾಗಿ ತನ್ನ ಉಳಿವಿಕೆ ಸಾರಲು ರಚಿಸಿದ ಅನುಕರಣಶೀಲ ಸಾಹಿತ್ಯವೆಂದೂ ವಿಮರ್ಶಕರು ಅಪ್ಪಣೆ ಕೊಡಿಸಿದ್ದರು. ಸ್ವತಃ ಬೇಂದ್ರೆಯಿಂದಲೂ ಅವರದೇ ಸಾಹಿತ್ಯದ ಓದಿಗೆ ತೊಡಕುಗಳು ಹುಟ್ಟಿಕೊಂಡವು ಎಂಬುದನ್ನು ಮೊಕಾಶಿ ಗುರುತಿಸಿದ್ದಾರೆ :

"ದುರ್ದೈವದಿಂದ ಬೇಂದ್ರೆಯವರೇ ತಮ್ಮ ಇತ್ತೀಚಿನ ಕೆಲವು ಸಂಗ್ರಹಗಳಲ್ಲಿ ತಾವು ಬಹು ಹಿಂದೆ ಬರೆದ ಕವನಗಳನ್ನೂ ಇತ್ತೀಚೆಗೆ ಬರೆದ ಕವನಗಳನ್ನೂ ಮುನ್ಸೂಚನೆಯಿಲ್ಲದೇ ಒಟ್ಟುಗೂಡಿಸಿ ಅಭ್ಯಾಸಿಯ ಕೆಲಸವನ್ನು ಹೆಚ್ಚು ಕಠಿಣಗೊಳಿಸಿದ್ದಾರೆ" (ಬೇಂದ್ರೆ ಕಾವ್ಯಮೀಮಾಂಸೆ, ಎರಡನೇ ಮುದ್ರಣ. ೧೯೮೯, ಪು. ೧೦೨). ಬೇಂದ್ರೆಯವರ ಕವಿತೆಗಳ ಬಿಡಿ ಓದು ನಡೆಯುತ್ತಿದ್ದಾಗ, ಅವರದೇ ವೈವಿಧ್ಯಮಯವಾದ ಕವಿತೆಗಳ ಮೂಲಕ ಮತ್ತು ಭಾರತೀಯ - ಕನ್ನಡ ರಸಿಕ ಸಂಪ್ರದಾಯ ಜೀವಂತವಿದೆ ಎಂಬ ನಂಬಿಕೆಯ ಆಧಾರದ ಮೇಲೆ ಮೊಕಾಶಿಯವರು 'ಬೇಂದ್ರೆ ಕಾವ್ಯಮೀಮಾಂಸೆ'(೧೯೬೨) ಪ್ರಕಟಿಸಿದರು. ಒಬ್ಬನೇ ಕವಿಯ ಅಖಂಡ ಕವನ ರಾಶಿಯ ಒಳಗೆ ನೇಯ್ದಿರುವ ಸೂಕ್ಷ್ಮವಾದ ಚಿಂತನೆ, ಭಾವನೆ, ಉದ್ಗಾರ, ತತ್ವ, ಹಾಸ್ಯ, ವಿದಗ್ಧರಸಿಕತೆ ಇವುಗಳನ್ನು ಜೋಡಿಸಿ, ಕವಿಯ ವೈಯಕ್ತಿಕ ಕಾವ್ಯ ಮೀಮಾಂಸೆ ನಿರ್ಮಿಸುವುದರ ಮಾದರಿ ಮೊತ್ತಮೊದಲು ತೋರಿಸಿಕೊಟ್ಟ ಕೀರ್ತಿ ಮೊಕಾಶಿಯವರಿಗೇ ಸಲ್ಲುತ್ತದೆ. ಈ ಕೃತಿ ರತ್ನದ ಹೆಗ್ಗಳಿಕೆ ಕುರಿತು ಹಾ.ಮಾ.ನಾ. ಮೊದಲಾದವರು ಹೇಳಿದ್ದರೂ ಹೇಳಬೇಕಾದ್ದು ಇನ್ನೂ ಇದೆ. ಅಡಿಗರು ನವ್ಯ ಕವಿತೆಯನ್ನು ರಚಿಸುವಾಗ ಬೇಂದ್ರೆ ಕವಿತೆಗಳನ್ನು ಹೇಗೆ ತೀರಾ ಸರಳೀಕೃತವಾಗಿ (ತಿಳಿದಿದ್ದೂ!) ನೋಡಿದ್ದರು ಎಂಬುದನ್ನು ತೋರಿಸುವ ಪ್ರಯಾಸ ಮೊಕಾಶಿಯವರದು.

ಬೇಂದ್ರೆಯವರ ಕವಿತೆಗಳನ್ನು ಕುರ್ತುಕೋಟಿ ('ಭೃಂಗದ ಬೆನ್ನೇರಿ', 'ಬಾರೋ ಸಾಧನಕೇರಿಗೆ') ಆಮೂರರ ('ಭುವನದ ಭಾಗ್ಯ') ಮೊದಲಾದ ಘನ ವಿಮರ್ಶಕರು ವಿಮರ್ಶಿಸಿದ್ದರೂ ಮೊಕಾಶಿಯವರ ಬರವಣಿಗೆ ತೀವ್ರತೆ, ಕಂಡದ್ದನ್ನು ಚುರುಕಾಗಿ ಮುಟ್ಟಿಸುವುದು, ಅಪೂರ್ವಶಿವದ (well being) ಅನುಭವವನ್ನು ಸಂಸ್ಕೃತಿಯ ಧಾತುವಾಗಿ ವಿವರಿಸುವುದರಿಂದ ಅದು ಮುಂದಕ್ಕೂ ಪ್ರಸ್ತುತವೇ. ಬೇಂದ್ರೆ ಕವಿತೆ ಓದಲು ಆರಂಭಿಸುವವರಿಗೂ, ಯೇಟ್ಸ್ -ಬೇಂದ್ರೆ, ನೆಲೆ, ಬೆಲೆ ಅರಿಯಬೇಕೆಂದವರಿಗೂ, ಬೇಂದ್ರೆ ಕವಿತೆ ಅರ್ಥವಾಗಿದೆ ಎನ್ನುವವರಿಗೂ ಈ ಕೃತಿ 'ಸರ್ವರುಜಾಪಹಾರಿ'.

"ಕವಿಯ ಉದ್ದೇಶವನ್ನೇ ತಿಳಿದುಕೊಳ್ಳದೆ ಕಾವ್ಯ ಓದುವುದು, ನವ್ಯ ವಿಮರ್ಶೆಯ ತಾತ್ವಿಕ ಚಟ. ಕೃತಿಯನ್ನಷ್ಟೇ ಓದಿದರೆ ಸಾಲದು, ಕೃತಿಯೊಂದೇ ಸಾಮಗ್ರಿಯಲ್ಲ, ನವ್ಯರು ಕವಿಯ ಉದ್ದೇಶದ ಬಗ್ಗೆ ಬರೆಯುವುದು ಅಪ್ರಸ್ತುತವೆಂದು ಬಗೆಯುತ್ತಾರೆ. ಇಂಥ ಬಂಧನಗಳಿಗೆ ವಿದಾಯ ಹೇಳುವುದು ತೌಲನಿಕ ಅಧ್ಯಯನದ ಉದ್ದೇಶ." ಎಂದು ವಿವರಿಸಿದ್ದಾರೆ. ಅವರ 'ನಟನಾರಾಯಣಿ' ಕಾದಂಬರಿಯಲ್ಲೂ ಇದರ ಸೂಚನೆಗಳಿವೆ.

ಕನ್ನಡ ವಿಮರ್ಶೆಯು ಕ್ರಮಿಸುತ್ತಿರುವ ಹಾದಿಯನ್ನು ಕುರಿತಂತೆ ಮೊಕಾಶಿಯವರಂತೆ ಗಂಭೀರವಾಗಿ ಚಿಂತಿಸಿದ ವಿಮರ್ಶಕರು ವಿರಳ. ನವ್ಯಸಾಹಿತ್ಯ ಮತ್ತು ವಿಮರ್ಶೆಯ ದಿನಗಳಲ್ಲಿ ಪ್ರಾಯೋಗಿಕ ವಿಮರ್ಶೆಯಿಂದ ಉಂಟಾದ ಲಾಭದೊಡನೆ ಅದು ಕವಿಯ ಅಸ್ತಿತ್ವವನ್ನೇ ನಿರಾಕರಿಸಿದ್ದನ್ನು ಕಂಡ ಮೊಕಾಶಿ ಅದಕ್ಕೆ ವಿರೋಧವಾಗಿ ಸಾಂಸ್ಕೃತಿಕ ತಳಹದಿ ಇರುವ ತೌಲನಿಕ ಅಧ್ಯಯನ ವಿಮರ್ಶೆ ಕೈಗೊಂಡರು. ನವ್ಯ ಕವಿತೆ, ಕಾದಂಬರಿಯ ವಿರೋಧಿಯೆಂದು ಮೇಲ್ನೋಟಕ್ಕೆ ಭಾಸವಾದರೂ ಅವರು ಅಂತರಂಗದಲ್ಲಿ ಪೂರ್ವ-ಪಶ್ಚಿಮದ ಸಾಹಿತ್ಯ ಎಂದು ಸೀಳು ಹುಟ್ಟಿಸಿಕೊಂಡವರಲ್ಲ. ವ್ಯಾಸ, ವಾಲ್ಮೀಕಿ, ದಾಸ್ತೋವಸ್ಕಿ, ಟಾಲ್‌ಸ್ಟಾಯ್ ಮೊದಲಾದವರು ಬರೆದ 'ಶಾಶ್ವತ ಸಾಹಿತ್ಯ'ದತ್ತ ಸದಾ ಅವರ ಒಲವು. ಜಗತ್ತಿನ ಶ್ರೇಷ್ಠ ಸಾಹಿತ್ಯ ಕೃತಿಗಳ ಮಾನದಂಡ, ಯಾವುದೇ ಸಾಹಿತ್ಯಯುಗದ ಬಗ್ಗೆ ಬರೆಯುವಾಗಲೂ ಅವರ ಮಾನಸಿಕ ಭಿತ್ತಿಯಾಗಿ ಇದ್ದೇ ಇರುತ್ತದೆ.

ಮೊಕಾಶಿಯವರು ಬಿಡಿ ಲೇಖನಗಳಲ್ಲದೇ ಎರಡು ವಿಮರ್ಶಾ ಸಂಕಲನಗಳನ್ನು ಕನ್ನಡದಲ್ಲಿ ಪ್ರಕಟಪಡಿಸಿದ್ದಾರೆ. ೧೯೮೧ರಲ್ಲಿ ಬಂದ 'ಸಾಹಿತ್ಯ ಮತ್ತು ಅಭಿರುಚಿ'ಯಲ್ಲಿ ಹತ್ತು ಲೇಖನಗಳಿವೆ.

ಇದರಲ್ಲಿ ಕಾವ್ಯ, ಕವಿಯ ವ್ಯಕ್ತಿತ್ವ, ಸ್ವಾತಂತ್ರ್ಯ ಪೂರ್ವದ ಹೊಸಗನ್ನಡ ಸಾಹಿತ್ಯ ಬೇಂದ್ರೆಯವರ 'ಓ ತಾಯಿ ಮಾಯಿ' ಕುರಿತ ವಿಮರ್ಶೆಯ ಲೇಖನಗಳಿವೆ. ಅಲ್ಲದೆ ಜಡಭರತರ 'ಮೂಕಬಲಿ' ನಾಟಕ ಹಾಗೂ 'ಪ್ರೇಕ್ಷಕ ಮತ್ತು ಕಲಾಭಿರುಚಿ' ಎಂಬ ಅತ್ಯುತ್ತಮ ವಿಮರ್ಶೆಗಳಿವೆ. ಇದರೊಂದಿಗೆ 'ಕಾರಂತರ ಕಾದಂಬರಿಗಳಲ್ಲಿ ಕನಸುಗಾರಿಕೆ' ಮತ್ತು 'ಕನ್ನಡ ಕಾವ್ಯದಲ್ಲಿ ನವ್ಯತೆ' ಲೇಖನಗಳಿವೆ. ಮೊಕಾಶಿಯವರ ಯಾವುದೇ ವಿಮರ್ಶೆ ಓದಿದರೂ ಬೆರಳಿಟ್ಟಲ್ಲಿ ಮಿಡಿಯುವಂಥ ಅಸಾಧಾರಣ ವಿದ್ವತ್ತು ಮತ್ತು ಹೇಳುವುದು ಸಹವಿಮರ್ಶಕರಿಗೆ ಮಾತ್ರವಲ್ಲದೆ ಓದುಗರಿಗೂ ಅರ್ಥವಾಗುವ ಸರಳ ಶೈಲಿ ಉಸಿರಾಡುತ್ತದೆ. ಈ ಪುಸ್ತಕದಲ್ಲಿ ತೋರುವ ಮೊಕಾಶಿಯವರ ವಿಮರ್ಶಾ ನಿಲವುಗಳು ಹೀಗಿವೆ :

೧. ಲೇಖಕರು ವಿಮರ್ಶಕರಾಗಿ ಬರೆಯಲಾರರು. ಏಕೆಂದರೆ ಆ ಕಾಲಕ್ಕೆ ಪ್ರಚಲಿತವಿರುವ ವಿಮರ್ಶೆಯ ಫಾರ್ಮುಲಾ ಹೊರಟುಹೋದರೆ ಆಗ ಆ ಕೃತಿಯೂ ಬಿದ್ದುಹೋಗುತ್ತದೆ.

೨. ಕಾವ್ಯದಲ್ಲಿ ಬಳಸುವ 'ನಾನು' ವ್ಯಕ್ತಿತ್ವದ ಅಭಿವ್ಯಕ್ತಿಯ ರೋಗವಾಗಲಾರದು (ನವ್ಯರಂತೆ). ವ್ಯಕ್ತಿತ್ವವನ್ನು ಬಚ್ಚಿಡುವುದರಲ್ಲಿ ಸಂತೋಷಪಡುವ ಹೋಮರ, ದಾಸ್ತವಸ್ಕಿ, ಛಿತ್ತಿ ನೆನಪಿಸಿಕೊಳ್ಳಿ. ಕವಿ ಸ್ವಚ್ಛಂದವಾಗಿ ಕಾವ್ಯ ರಚಿಸಬೇಕೇ ಹೊರತು, ನವ್ಯರಂತೆ 'ತಮ್ಮ ಕಾವ್ಯ ಪಂಪನ, ರನ್ನನ, ಹರಿಹರನ, ಕುಮಾರವ್ಯಾಸನ ಕಾವ್ಯದ ಎದುರು ಧ್ರುವವೆಂಬತೆ ' ಬರೆದರೆ ಕಾವ್ಯಕ್ಕಿಂತಲೂ ಅಥೆಂಟಿಸಿಟಿಯ ಹುಡುಕಾಟವೇ ಉಸುಕಿನ ಮರಳಾಗುತ್ತದೆ.

೩. ಹೊಸಗನ್ನಡ ಕಾವ್ಯದಲ್ಲಿ ಇರುವ ಸಂಪ್ರದಾಯವೆಂದರೆ ನವೋದಯವೊಂದೇ. ನವ್ಯವು ಅದರದ್ದೇ ಒಂದು ಕೊಂಬೆ. ಏಕೆಂದರೆ 'ಬೇಂದ್ರೆ-ಗೋಕಾಕರ ಸಂಸ್ಕಾರವಿಲ್ಲದೆ ಅಡಿಗರು ಬರುತ್ತಿರಲಿಲ್ಲವೆಂಬುದು ಮಹತ್ವದ ಮಾತಲ್ಲ; ಅಡಿಗರು ಬಂದ ನಂತರ, ಬೇಂದ್ರೆ-ಗೋಕಾಕ - ನರಸಿಂಹಸ್ವಾಮಿಗಳಾದರೂ ತಾವು ಮೊದಲು ರಚಿಸಿದಂಥ ಕಾವ್ಯವನ್ನೇ ಮುಂದುವರಿಸಲಿಲ್ಲವೆಂಬುದು ಮಹತ್ವದ ಮಾತು' (ಪು. ೩೧)

೪. ಬ್ರಿಟಿಷರ ಕಾಲದಲ್ಲಿ ಮಾನವ ಕೇಂದ್ರಿತ ವ್ಯಕ್ತಿ ಪ್ರಧಾನ ಸಾಹಿತ್ಯ ಬಂದದ್ದರಿಂದ ಹಳೆ-ಹೊಸ ಸಾಹಿತ್ಯದ ನಡುವೆ ಕಂದರ ಉಂಟಾಗಿದೆ. ಈಗ ಹುಟ್ಟುತ್ತಿರುವ ಸಾಹಿತ್ಯವೂ ಹೊಸತು, ವಿಮರ್ಶೆಯೂ ಹೊಸತು. ಸಾಹಿತ್ಯ ಮತ್ತು ವಿಮರ್ಶೆಯ ಸಂಬಂಧವನ್ನು ರೂಪಿಸುವ ಹೊಣೆಗಾರಿಕೆ ವಿಮರ್ಶೆಗಿದೆ.

೫. ಬುದ್ಧಿಜೀವಿಗಳು ಹವ್ಯಾಸಿ ರಂಗಭೂಮಿಯತ್ತಲೇ ಗಮನ ಹರಿಸದೆ ಸಮಾಜದ ವಿವಿಧ ಸ್ತರದ ರಸಿಕರಿಗೆ ಸಮೀಪವಿರುವ ವೃತ್ತಿ ರಂಗಭೂಮಿಯ ಬಗ್ಗೆ ಪ್ರಬುದ್ಧ ವಿಮರ್ಶೆಗಳನ್ನು ಬರೆದು, ಸುಶಿಕ್ಷಿತ ಜನರನ್ನು ಕಂಪನಿ ನಾಟಕಗಳತ್ತ ಸೆಳೆಯುವಂತಾಗಬೇಕು. ವಿನಾಕಾರಣ ಹವ್ಯಾಸಿ ರಂಗಭೂಮಿಯನ್ನು ಮಾತ್ರ ಉತ್ತೇಜಿಸಿ, ವೃತ್ತಿರಂಗ ನಟನೆಯನ್ನು ಮೂಲೆಗುಂಪಾಗಿಸಬಾರದು.

೬. ವಿಮರ್ಶೆಯು ಪ್ರಥಮ ದರ್ಜೆಯ ಕೃತಿಗಳನ್ನು ಹೊಗಳಿ, ಅಲ್ಲಿಂದ ನೇರವಾಗಿ ಪಾಶ್ಚಾತ್ಯದ ವಿವಿಧ ಓದುಗರ ಶೀಟಿ ಶೀರುಸಿಕೊಳ್ಳಲು ತೃತೀಯ, ಚತುರ್ಥ ದರ್ಜೆ ಕೃತಿಗಳತ್ತ ಹಾರದೆ, ದ್ವಿತೀಯ ದರ್ಜೆಯ ಶ್ರೇಷ್ಠ ಕೃತಿಗಳಿಗೆ ಬೇಕಾದಂಥ ವಾತಾವರಣವನ್ನು ಸೃಷ್ಟಿಸಬಾರದೇಕೆ?

ಇವರಲ್ಲಿ ೧ ಮತ್ತು ೬ನೆಯ ಅಂಶಗಳನ್ನು ಕನ್ನಡದ ಲೇಖಕರು, ವಿಮರ್ಶಕರು ಇಂದು ಎಷ್ಟು ಬೇಗ ಗಂಭೀರವಾಗಿ ತೆಗೆದುಕೊಳ್ಳುತ್ತಾರೋ ಅಷ್ಟು ಬೇಗ ಕನ್ನಡ ಸಾಹಿತ್ಯದ ಪ್ರವಾಹದ ಗತಿ ಆರೋಗ್ಯಪೂರ್ಣವಾಗುತ್ತದೆ.

೧೯೯೫ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರವು ಡಾ. ಮೊಕಾಶಿ ಅವರ ಹದಿಮೂರು ಲೇಖನಗಳಿರುವ 'ಅಪೂರ್ವ ವರ್ತಮಾನಕಾಲ' ಎಂಬ ವಿಮರ್ಶಾ ಅಧ್ಯಯನ ಕೃತಿ ಪ್ರಕಟಿಸಿದೆ. (ಅವರು ಭಾಷೆ, ರಸ, ಪ್ರಜ್ಞೆ, ಸ್ತ್ರೀ ಸಾಹಿತ್ಯ ಕುರಿತಂತೆ ಮಂಡಿಸಿರುವ ಪ್ರಬಂಧಗಳು ಇನ್ನೂ ಗ್ರಂಥ ರೂಪದಲ್ಲಿ ಅಚ್ಚು ಕಾಣಬೇಕಿದೆ.) ಈ ಗ್ರಂಥ ಕನ್ನಡದ ನವೋದಯ ಮತ್ತು ಆಧ್ಯಾತ್ಮಿಕ ನೆಲೆಯ ಜ್ಞಾನ ಪರಂಪರೆ ಕುರಿತು ಬೆಳಕು ಚೆಲ್ಲುತ್ತದೆ. ಕನ್ನಡದ ದೇಸೀ ಸತ್ವ ಪರಂಪರೆಯ ಹಿನ್ನೆಲೆಯಲ್ಲಿ ಮತ್ತು ಭಾರತೀಯತೆಯ ಬೆಳಕಿನಲ್ಲಿ ವಿಮರ್ಶೆ ನಡೆಸುವ ಮೊಕಾಶಿಯವರ ಈ ಕೃತಿ ಫಸ್ ಆದ ಒಳನೋಟ ಕೊಡುತ್ತದೆ. ನವೋದಯದ ಮೊದಲ ಮತ್ತು ಎರಡನೆಯ ತಲೆಮಾರಿನ ಲೇಖಕರಾದ ಗೋವಿಂದ ಪೈ, ಟಿ.ಪಿ. ಕೈಲಾಸಂ, ಕುವೆಂಪು, ಮಾಸ್ತಿಯವರ ಕೃತಿ ಮತ್ತು ಅವುಗಳ ಸಾಂಸ್ಕೃತಿಕ ಹಿನ್ನೆಲೆ ಕುರಿತ ಲೇಖನಗಳು ಒಂದು ಕಡೆಯಾದರೆ; ನವ್ಯದ ಒಂದು ಮಾದರಿಯ ಪ್ರವರ್ತಕರಾದ ವಿ.ಕೃ. ಗೋಕಾಕ, ಕವಿಗಳಾದ ಕಣವಿ, ಗಂಗಾಧರ ಚಿತ್ತಾಲರ ಕೃತಿಗಳ ಸಾಂಸ್ಕೃತಿಕ ವಿಮರ್ಶೆಯ ಲೇಖನಗಳು ಮತ್ತೊಂದು ಕಡೆಗೆ ಇವರಲ್ಲಿವೆ. 'ಕನ್ನಡದಲ್ಲಿ ಅಸ್ತಿತ್ವವಾದ ಸಾಹಿತ್ಯ', 'ಶೂನ್ಯ ಸಂಪಾದನೆ', 'ಭೂಸನೂರ ಮಠರ ಒಂದು ಅಧ್ಯಯನ' ತಾತ್ವಿಕ ಒಳನೋಟ ಇರುವ ಹೊಸ ರೀತಿಯ ಸಾಂಸ್ಕೃತಿಕ ವಿಮರ್ಶೆಗಳು.

ಇಲ್ಲಿ ಪ್ರತ್ಯೇಕವಾಗಿ ಹೆಸರಿಸಬೇಕಾದ ಲೇಖನ ಬಿ. ಪುಟ್ಟಸ್ವಾಮಯ್ಯನವರ 'ಕ್ರಾಂತಿ ಕಲ್ಯಾಣ'. ಕನ್ನಡದ ಬುದ್ಧಿಜೀವಿಗಳು 'ಕ್ರಾಂತಿ ಕಲ್ಯಾಣ' ಕಾದಂಬರಿ ಮಾಲೆಗೆ ಕೊಡಬೇಕಾದ ಚರ್ಚಾಗೌರವ ಕೊನೆಗೂ ನೀಡಲಿಲ್ಲವೆಂಬ ಅಳಲು ಮೊಕಾಶಿಯವರದು(ಮೊಕಾಶಿಯವರು ಬಿ. ಪುಟ್ಟಸ್ವಾಮಯ್ಯನವರ ಜೀವನ, ಸಾಧನೆ ಕುರಿತಂತೆ ಪ್ರತ್ಯೇಕ ಪುಸ್ತಕವನ್ನೇ ಬರೆದಿದ್ದಾರೆ). ಮೊಕಾಶಿಯವರು ನವ್ಯದ 'Author is dead' ಮಾದರಿಯ ವಿಮರ್ಶೆಯನ್ನಾಗಲಿ, ಪಾರಿಭಾಷಿಕ ಪದಗಳಿಂದಲೇ ಭಾಷಿಕ ಸರ್ಕಸ್ಸು ನಡೆಸುವ ಗೊಂದಲದ ವಿಮರ್ಶೆಯನ್ನಾಗಲೀ ವಿಶ್ವಾಸಿಸಲಿಲ್ಲ. ಕೃತಿಯ ಓದಿಗೆ ಪೂರಕವಾಗಿ ವಿಮರ್ಶೆಯಿರಬೇಕು. ವಿಮರ್ಶಕರು ಕಾದಂಬರಿಯಿರಲಿ, ಕಾವ್ಯವಿರಲಿ, ಇನ್ನೊಂದಿರಲಿ – ಆಮದು ಮಾಡಿಕೊಂಡ ಸಿದ್ಧಾಂತಗಳನ್ನು ಮಕ್ಕಿಕಾಮಕ್ಕಿಯಾಗಿ ಕನ್ನಡ ಪರಿಸರದ ಕೃತಿಗಳ ಮೇಲೆ ಅನ್ವಯಿಸಿದರೆ ಸಂಸ್ಕೃತಿಗೇ ಮಾಡಿದ ಅಪಚಾರ, ಅನ್ಯಾಯವಾಗುತ್ತದೆ ಎಂಬುದು ಅವರ ದೃಢ ವಿಶ್ವಾಸ.

ಈ ಲೇಖನದಲ್ಲಿ ಮೊಕಾಶಿ, ಮೊದಲು ಬಿ. ಪುಟ್ಟಸ್ವಾಮಯ್ಯನವರ ಕಾಲದ ಹೈಸ್ಕೂಲು ಶಿಕ್ಷಣದ ಬಗ್ಗೆ ಬರೆದು, ನಂತರ ಇಂದಿನ ಡೈರೆಕ್ಟ್ ಮೆಥೆಡ್ ಶಿಕ್ಷಣ ಪದ್ಧತಿ ವಿಮರ್ಶಿಸುತ್ತಾರೆ. ಈ ಕಾದಂಬರಿಕಾರರ ವೃತ್ತಿ, ಕಂಪೆನಿ ನಾಟಕಗಳಿಗೆ ಅವರು ನಾಟಕ ಬರೆದುದನ್ನು ಹೇಳಿದ ನಂತರ ಐತಿಹಾಸಿಕ ಕಾದಂಬರಿಗಳತ್ತ ಹೊರಳುತ್ತಾರೆ. ಭಾರತದ ಇತಿಹಾಸವನ್ನು ಹೆಗೆಲ್, ಮಾರ್ಕ್ಸ್‌ರ Dialectics ಮೂಲಕ ನೋಡುವ ಕ್ರಮವನ್ನು ವಿರೋಧಿಸುತ್ತ, ಜಾರ್ಜ್ ಲುಕ್ಯಾಕ್ ಹೇಳುವ Historical realism. ಸಿದ್ಧಾಂತವನ್ನು ಭಾರತದ ಜಾತಿ-ಉಪಜಾತಿ ಪರಂಪರೆಯ ಅರ್ಥೈಕೆಯ ಬೆಳಕಿನಲ್ಲಿ ತೀಕ್ಷ್ಣ ವಿಮರ್ಶೆಗೆ ಒಡ್ಡುತ್ತಾರೆ. ಪಾಶ್ಚಾತ್ಯ ಮತ್ತು ಭಾರತೀಯ (ಕನ್ನಡವೂ ಸೇರುವ) ಚಿಂತನೆ ಒಂದೊಂದೂ ಕ್ಷೇತ್ರದಲ್ಲೂ ಎಲ್ಲಿ ಎಷ್ಟು ದೂರ/ಹತ್ತಿರ ನಿಲ್ಲುತ್ತದೆ, ಪಾಶ್ಚಾತ್ಯ ಚಿಂತನೆ ಭಾರತೀಯ ಚಿಂತನೆಗೆ ಹೇಗೆ ಮಾರಕವಾಗುತ್ತಿದೆ ಎಂಬುದನ್ನು ವಿವರಿಸುವುದೇ ಮೊಕಾಶಿ ಚಿಂತನೆಯ ಮಧ್ಯಬಿಂದು. ಬಿ. ಪುಟ್ಟಸ್ವಾಮಯ್ಯನವರ ಕಾದಂಬರಿಯ ಬಗ್ಗೆ ಬರೆಯುತ್ತ ಸ್ವಂತದ ಕಲ್ಪನಾಶಕ್ತಿ ಕುರಿತು ಹೀಗೆ ಉಲ್ಲೇಖಿಸಿದ್ದಾರೆ —

''ನಮಗೆ ಅಲೆಗ್ಸಾಂಡರ್, ಸೀಝರ್, ನೆಪೋಲಿಯನ್ನರ ಬಗ್ಗೆ ಎಷ್ಟು ಗೊತ್ತಿದೆಯೋ ಅಷ್ಟೊಂದು ವಿವರಗಳು ಹುಕ್ಕ-ಕೃಷ್ಣದೇವರಾಯ – ರಾಣಾ ಪ್ರತಾಪಸಿಂಹ - ಅಕಬರ- ಶಿವಾಜಿಗಳ ಬಗ್ಗೆ ಗೊತ್ತಿರುವುದಿಲ್ಲ. ನಮ್ಮ ಪುರಾಣಗಳ ರಾಮಚಂದ್ರ-ಕೃಷ್ಣರ ಬಗ್ಗೆ ಗೊತ್ತಿದ್ದಷ್ಟು ವಿವರಗಳೂ ಇವರ ಬಗ್ಗೆ ಗೊತ್ತಿರುವುದಿಲ್ಲ. ಅದಕ್ಕಾಗಿ, ಬಸವೇಶ್ವರ, ದುರ್ವಿನೀತ, ಮುಷ್ಕರ ದೇವ - ಅಲ್ಲಮ ಪ್ರಭು, ಕೃಷ್ಣದೇವರಾಯ ಇವರ ಬೆನ್ನಮೇಲೆಯೇ ಪುಟ್ಟಸ್ವಾಮಯ್ಯ ಮೊಳಕೈ ಊರಿದುದು ಈ ತತ್ವಕ್ಕೆ ಅಪರಾಧವೆನಿಸುವುದಿಲ್ಲ.'' ಹೀಗೆ ಒಬ್ಬ ಲೇಖಕನ ಬರವಣಿಗೆಯ ಆಘಾತದಿಂದ ಶಕ್ತಿ ಕುರಿತು ಚಿಂತಿಸುವಾಗಲೂ ಮೊಕಾಶಿಯವರ ಮನಸ್ಸು ಕನ್ನಡ ಬೌದ್ಧಿಕ ಜೀವನವು ಎದುರಿಸುತ್ತಿರುವ ಪಶ್ಚಿಮದ ಕಲ್ಪನೆಗಳ ಪ್ರಭಾವದಿಂದ ಹೊರಬರುವುದು ಹೇಗೆ ಎಂದು ಚಿಂತಿಸುತ್ತಿರುತ್ತದೆ.

'ವಸಾಹತುಶಾಹಿ', 'ವಸಾಹತೋತ್ತರ ಚಿಂತನೆ' ಮೊದಲಾದ ಪದಗಳು ಚಲಾವಣೆಗೆ ಬರುವುದಕ್ಕೂ ಮೊದಲೇ ಕನ್ನಡ - ಭಾರತದ ನೆಲೆಯಲ್ಲಿ ಸಂಸ್ಕೃತಿಯ ಕುರಿತು ಚಿಂತನೆ ನಡೆಸಿದ ಕನ್ನಡ ಮೊದಲ ದೇಸೀ ಚಿಂತಕರೆಂದರೆ ಮೊಕಾಶಿ ಪುಣೇಕರ್. ಅವರು ಬರೆದ ನಂತರ ಸಂಸ್ಕೃತಿ ಕುರಿತ ಸಾಕಷ್ಟು ಚಿಂತನೆಗಳು ಕನ್ನಡದಲ್ಲಿ ಬಂದಿವೆ, ಬರುತ್ತಿವೆ. ಭಾರತದ ಹರಿಜನರು ಮಾಡಿರುವ ಚಿಂತನೆಗಳು, ಮಾಧ್ಯಮಿಕ, ಹೈಸ್ಕೂಲು ಶಿಕ್ಷಣ ಪಡೆದ ನವೋದಯ ವಿದ್ವಾಂಸರ ವಿದ್ವತ್ತಿನ ಎತ್ತರ, ಶಕ್ತಿವಿಶಿಷ್ಟಾದ್ವೈತ ದರ್ಶನದಲ್ಲಿ ಬರುವ 'ಜ್ಞಾನವು ಎಸಳು ಎಸಳಾಗಿರುತ್ತದೆ' ಎಂಬುದರ ಅರ್ಥೈಸುವಿಕೆ, ಕುವೆಂಪು, ಮಾಸ್ತಿಯವರ ಸಾಹಿತ್ಯವನ್ನು ಒಟ್ಟಾಗಿ ವಿಮರ್ಶಿಸುವಲ್ಲಿ ತೋರಿಸುವ ಸಂಯಮ, ಗೋಕಾಕರು ಕನ್ನಡದಲ್ಲಿ ಕುವೆಂಪು – ಬೇಂದ್ರೆಯವರು ಬರೆಯಲು ಹೊರಳಿದಾಗ ಅವರು ಇಂಗ್ಲಿಷಿನಲ್ಲೇ ಬರೆದಿದ್ದರೆ ಮುಟ್ಟಬಹುದಾಗಿದ್ದ ಔನ್ನತ್ಯವನ್ನು ಬಿಡಿಸಿ ತೋರಿಸುವ ವಿವೇಕ ಇವೆಲ್ಲ ದೇಸೀ ನೆಲೆಗಟ್ಟಿನ ಸಾಂಸ್ಕೃತಿಕ ತೌಲನಿಕ ಅಧ್ಯಯನದ ಕಸುವು, ಮೊನಚು, ಮೇಳೈಸುವುದು ಮೊಕಾಶಿಯವರ ಚಿಂತನೆಯ ವೈಶಿಷ್ಟ್ಯ.

ಕನ್ನಡದಲ್ಲಿ ಆಯಾ ಸಾಹಿತ್ಯ ಚಳವಳಿಯ ಒಳಗೇ ಇರುವ ಕಿರುದಾರಿಗಳ ಅವಲೋಕನವೇ ಇನ್ನೂ ಮೊದಲಾಗಿಲ್ಲ. ಆದ್ದರಿಂದಲೇ ಕಾರಂತರ ನವೋದಯ, ಕುವೆಂಪು ನವೋದಯ ಇವೆರಡರ ಭಿನ್ನತೆ ಕೂಡ ಪರಿಕಿಸದಷ್ಟು ವಿಮರ್ಶೆ ಮೊಂಡಾಗಿದೆ. ಕನ್ನಡದ ಬಾಳಿಗೆ ಅದರದ್ದೇ ಆದ ನಂಬಿಕೆ, ಸೌರಭ, ಮಾರ್ದವತೆ, ಎಲ್ಲ ಇದೆ ಎಂಬ ಮುಂಗಲಕ್ಕೆ ತುಡಿಯುವ ಮನಃಸ್ಥಿತಿ ಮೊಕಾಶಿಯವರ ವಿಮರ್ಶೆಯಲ್ಲಿದೆ. ಕನ್ನಡದ ನೆಲದಲ್ಲಿ ಹುಟ್ಟಿ ಬಾಳಿ, ಬರೆದು, ಲೋಕಾಂತಾರಿತರಾದ ಮೊಕಾಶಿಯವರ ವಿದಗ್ಧ ರಸಿಕತೆಯ ಸಂಸ್ಕೃತಿ ಜನ್ಯ ವಿಮರ್ಶೆ, ಉಳಿದವರ ವಿಮರ್ಶೆಗಳಲ್ಲಿ ಕಾಣುವ 'ಸೋಗಿ'ನಿಂದ ಪಾರಾಗಿ ತುಂಬಾ ಫ್ರಾಂಕ್ ಆಗಿರುವುದರಿಂದಲೇ ಅದಕ್ಕೆ ಲವಲವಿಕೆಯಿದೆ. ಸಾಹಿತ್ಯ ವಲಯ ಕಾದಂಬರಿ, ಕ್ಲಾಸಿಕ್‌ಗಳು, ದೇಸೀ ಪರಂಪರೆ, ನವೋದಯ, ಸ್ವದೇಶೀಕರಣ(De-colonization) ಕುರಿತು ಇಪ್ಪತ್ತೊಂದನೆಯ ಶತಮಾನದಲ್ಲಿ ಮರುಚಿಂತನೆ ಮಾಡುವ ಅಗತ್ಯವಿದೆ. ಆಗ ನಾವು ಗಂಭೀರವಾಗಿ ಓದಿ, ಮನನ ಮಾಡಿ, ಮಾರ್ಗದರ್ಶನ ಪಡೆಯಬೇಕಾದ ಸೃಜನಶೀಲ ಚೇತನ ಮೊಕಾಶಿಯವರದು. ಬಿ. ಪುಟ್ಟಸ್ವಾಮಯ್ಯ, ಕುವೆಂಪು, ಯೇಟ್ಸ್, ಬೇಂದ್ರೆ, ಬಿಂಧೂಲಿಪಿ ಕುರಿತು ದೀರ್ಘಚಿಂತನೆ ಮಾಡಿರುವ ಮೊಕಾಶಿಯವರನ್ನು ಗಂಭೀರವಾಗಿ ಪರಿಗಣಿಸದಿರುವಷ್ಟು ಕನ್ನಡ ಸಾಹಿತಿ-ವಿಮರ್ಶಕ ವಿದ್ವಾಂಸರು ಸಂಕುಚಿತ ದೃಷ್ಟಿಯವರಲ್ಲವಷ್ಟೆ?

ನಂ. ೪೫, ೩ನೇ ಮೈನ್, ೨ನೇ ಅಡ್ಡರಸ್ತೆ,
ಶ್ರೀನಿವಾಸ ನಗರ, ಬೆಂಗಳೂರು - ೫೬೦ ೦೫೦



# ಮಾಂಸ ಸೇವನೆ
ಮತ್ತು
# ವೀರಶೈವ ತತ್ವಗಳು

## ಒಂದು ವಿವಾದದ ಸಾಧ್ಯ-ಅಸಾಧ್ಯತೆಗಳು

✦ ಡನ್‌ಕಿನ್ ಜಳಕಿ

ಶ್ರೀ ಮುರುಘ ರಾಜೇಂದ್ರ ಬೃಹನ್ಮಠದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು ಮಾಂಸಾಹಾರಿಗಳಿಗೆ ಲಿಂಗಾಯತ ಧರ್ಮಕ್ಕೆ ಆಹ್ವಾನಿಸಿ ನೀಡಿದರೆನ್ನಲಾದ ಹೇಳಿಕೆಯೊಂದಿಗೆ ಆರಂಭವಾದ ವಿವಾದ/ವಾಗ್ವಾದ ನಡೆಯಿತು. ಈ ವಾಗ್ವಾದದಲ್ಲಿ ಅಸಂಖ್ಯಾತ ಜನರು ನೇರವಾಗಿ ಭಾಗವಹಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವಿವಿಧ ಮಾಧ್ಯಮಗಳ ಮೂಲಕ ಮಂಡಿಸಿದ್ದಾರೆ. ಇತಿಹಾಸದ ಹೆಚ್ಚು ನಿಖರವಾಗಿ ಕಾಣದ, ಕಾಲದ ಮುಸುಕಿನಲ್ಲಿ ಹುದುಗಿರುವ ಒಂದು ಪ್ರಶ್ನೆಯ ಬಗ್ಗೆ ಈ ರೀತಿಯ ಒಂದು ವಿವಾದ ಹೇಗೆ ಮೂಡಬಹುದು ಎಂಬ ವಿಷಯದ ಕುರಿತು ಈ ಲೇಖನ....

ಈ ಕೆಳಗಿನ ಮೂರು ಪ್ರಶ್ನೆಗಳನ್ನು ಮುಂದಿಟ್ಟುಕೊಂಡು, ಅವುಗಳಿಗೆ ಉತ್ತರ ಹುಡುಕುವ ರೀತಿಯಲ್ಲಿ ಈ ಲೇಖನವನ್ನು ಬರೆದಿದ್ದೇನೆ.

೧. ಬಸವಣ್ಣನ ಕಾಲದಲ್ಲಿ ವೀರಶೈವರಲ್ಲಿ ಮಾಂಸ ಸೇವನೆ ನಿಷೇಧವಾಗಿತ್ತೆ?
೨. ವಚನಗಳಲ್ಲಿ ಮಾಂಸಾಹಾರದ ಬಗ್ಗೆ ಏನು ಹೇಳಲಾಗಿದೆ?
೩. ಇಂದಿನ ವೀರಶೈವರು ಮತ್ತು ಮಾಂಸಾಹಾರ ಸೇವನೆ.

೧

ಮೊದಲ ಪ್ರಶ್ನೆಗೆ ಉತ್ತರ ಹುಡುಕಲು ನಮಗೆ ಲಭ್ಯವಿರುವ ಮಾಹಿತಿಯ ಮೂಲಗಳು ಒಂದು ನಿರ್ದಿಷ್ಟ ಬಗೆಯವು: ಸಾಹಿತ್ಯ, ಅದರಲ್ಲಿ ವೀರಶೈವ, ಜೈನ ಮತ್ತು ಜನಪದ ಸಾಹಿತ್ಯ; ಶಾಸನಗಳು, ಹಾಗೂ ಮಿಥ್‌ಗಳು. ಮೊಟ್ಟಮೊದಲು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ ಇದು : ಈ ಸಾಹಿತ್ಯವನ್ನು ಇಟ್ಟುಕೊಂಡು ಅಂದಿನ ಜನಜೀವನದ ಒಂದು ಸಾಮಾನ್ಯ ವಿಚಾರದ ಬಗ್ಗೆ ಎಷ್ಟರಮಟ್ಟಿಗೆ ತಿಳಿದುಕೊಳ್ಳಬಹುದು? ಶಾಸನಗಳನ್ನು ಹೊರತುಪಡಿಸಿದರೆ, ಉಳಿದವುಗಳು ಜನಜೀವನದ ಶೈಲಿಯನ್ನು (ವಿಮರ್ಶಿಸಿ/ಮೆಚ್ಚಿಕೊಂಡು ಅಥವಾ ಐತಿಹಾಸಿಕವಾಗಿ) ದಾಖಲಿಸಿದಂಥ ಸಾಹಿತ್ಯ ಪ್ರಕಾರಗಳಲ್ಲ. ಅಂದಿನ ಜೈನ ಕೃತಿಗಳು ಆ ಕಾಲದ ಸಾಮಾನ್ಯ ಜನಜೀವನದ ಬಗ್ಗೆ ಅದರಲ್ಲೂ ವೀರಶೈವ ಜನಜೀವನದ ಬಗ್ಗೆ ಬರೆದದ್ದಂತೂ ಇಲ್ಲವೆನ್ನುವಷ್ಟು ಕಡಿಮೆ. ಹಾಗೆ ನಮಗೆ ಉಳಿಯುವ ಮೂರು ಪ್ರಮುಖ ಮಾಹಿತಿಯ ಮೂಲಗಳೆಂದರೆ ಶಾಸನಗಳು, ಮಿಥ್‌ಗಳು ಮತ್ತು ವಚನಗಳು.

**ಶಾಸನಗಳು:** 'ಶಾಸನಗಳಲ್ಲಿ ಶಿವಶರಣರು' (ಶತಮಾನದ ಸಂಶೋಧನೆ, ೮೪-೯೪) ಎಂಬ ತಮ್ಮ ಲೇಖನದಲ್ಲಿ ಎಂ.ಎಂ. ಕಲಬುರ್ಗಿಯವರು ಹೇಳುವಂತೆ ಶರಣರೇ ಬರೆಯಿಸಿದ ಶಾಸನಗಳು ಲಭ್ಯವಿಲ್ಲ ಅಥವಾ ಅವರು ಬರೆಯಿಸಿಯೇ ಇಲ್ಲ. ಅವರ ಅನುಯಾಯಿಗಳು ಬರೆಯಿಸಿರಬಹುದಾದ ಶಾಸನಗಳು ಇದ್ದು ಅವುಗಳ ಸಂಖ್ಯೆ ತೀರಾ ಕಡಿಮೆ ಎಂದು ಅಭಿಪ್ರಾಯ ಪಡುತ್ತಾರೆ. ಅದಕ್ಕೆ ಮೇಲಾಗಿ ಈ ಶಾಸನಗಳಲ್ಲಿ ಅಂದಿನ ಆಹಾರ ಪದ್ಧತಿ ಇರಲಿ, ಸಾಮಾನ್ಯ ಜನಜೀವನದ ಯಾವುದೇ ಒಂದು ಚಿತ್ರಣವಿರುವಂತೆಯೂ ಕಾಣುವುದಿಲ್ಲ. ವ್ಯಕ್ತಿ ಚಿತ್ರಣವೇ ಇವುಗಳಲ್ಲಿನ ಮುಖ್ಯ ವಿಷಯ. ಇಂದು ನಾವು 'ಇತಿಹಾಸ ಪ್ರಜ್ಞೆ' ಎಂದು ಯಾವುದನ್ನು ಕರೆಯುತ್ತೇವೆಯೋ ಅದು ವಸಾಹತುಶಾಹಿಯ ಕೊಡುಗೆ (ಅಥವಾ ಶಾಪ) ಎಂಬುದು ದಶಕಗಳ ಸಂಶೋಧನೆಯಿಂದ ದೃಢಪಟ್ಟಿರುವ ವಿಚಾರ. ಈ ಇತಿಹಾಸ ಪ್ರಜ್ಞೆಯ ಹೊರತಾಗಿಯೂ ಇಂದಿನ ಇತಿಹಾಸ ಸಾಹಿತ್ಯಕ್ಕೆ ಶಾಸನಗಳು ಬಹಳ ಹತ್ತಿರವಾಗುವುದು, ಕಾಲ ನಿರ್ಣಯದಲ್ಲಿ ಇದು ವಹಿಸುವ ಮಹತ್ವದ ಪಾತ್ರದಿಂದಾಗಿ. ಇದರ ಹೊರತಾಗಿ ಇವುಗಳು ಮಾಂಸಸೇವನೆಯಂಥ ವಿಷಯಗಳನ್ನು ನಿರ್ಣಯ ಮಾಡುವಲ್ಲಿ ಸಹಾಯ ಮಾಡುವುದು/ ಮಾಡಿರುವುದು ಅಷ್ಟಕ್ಕಷ್ಟೆ.

'ಶಾಸನಗಳಲ್ಲಿ ಹೊಲೆಯರು' ಎಂಬ ತಮ್ಮ ಉಪನ್ಯಾಸದಲ್ಲಿ ಚಿದಾನಂದ ಮೂರ್ತಿಯವರು ಸಹ (ಬಸವಣ್ಣ: ಕರ್ನಾಟಕ: ಭಾರತ, ೨೦೦-೨೬೪) ಹೆಚ್ಚು ಕಡಿಮೆ ಇದೇ ಅಭಿಪ್ರಾಯವನ್ನು ಕೊಡುತ್ತಾರೆ: 'ಶಿಲಾಶಾಸನಗಳು ಪ್ರಾಚೀನ ಕರ್ನಾಟಕದ ಜನಜೀವನವನ್ನು ಅರಿಯಲು ಅತ್ಯುತ್ತಮ ಆಕರಗಳಾದರೂ ಅವು ಕೊಡುವ ಬದುಕಿನ ವಿವರಗಳು ಹಿರಿದ್ದೂ ಮೇಲ್ವರ್ಗದ ಜಾತಿಯ ಜನರಿಗೆ ಸಂಬಂಧಪಟ್ಟವು (ಪು. ೨೦೦). ಇದೇ ಉಪನ್ಯಾಸದಲ್ಲಿ ಕೆಳವರ್ಗದ ಜಾತಿಯ ಜನರ ಆಹಾರ ಪದ್ಧತಿಯ ಬಗ್ಗೆ ಮಾತನಾಡುತ್ತ ಮುಂದೆ ಅವರು ಕೇವಲ ಸಾಹಿತ್ಯದಿಂದ ಆರಿಸಲಾದ ದಾಖಲೆಗಳನ್ನಷ್ಟೇ ಒದಗಿಸುತ್ತಾರೆ.

**ಮಿಥ್‌ಗಳು** : ಮಿಥ್‌ಗಳ ಅಧ್ಯಯನದಲ್ಲಿ ಎದುರಾಗುವ ಬಹುದೊಡ್ಡ ಸಮಸ್ಯೆಯೆಂದರೆ, ಅವುಗಳ ಕಾಲ ನಿರ್ಣಯ. ಆದರೆ ಈ ಕಾರಣದಿಂದ ನಾವು ೧೨-೧೩ನೇ ಶತಮಾನದ ಸಾಹಿತ್ಯದಲ್ಲಿ ದಾಖಲಾಗಿರುವ ಮಿಥ್‌ಗಳನ್ನು ಮಾತ್ರ ನೋಡಿ, ಇಪ್ಪತ್ತನೆಯ ಶತಮಾನದಲ್ಲಿ ದಾಖಲಾಗಿರುವ ಅಥವಾ ಇನ್ನೂ ನಾಲಗೆಯ ಮೇಲೆ ಉಳಿದಿರುವ ಮಿಥ್‌ಗಳನ್ನು ಬಿಟ್ಟುಕೊಡಲು ಆಗುವುದಿಲ್ಲ. ಯೂರೋಪ್

ಮಾದರಿ ಇತಿಹಾಸ ಮತ್ತು ಇತಿಹಾಸಕಾರರು ಈ ರೀತಿಯ ಸಂಶೋಧನೆಯ ದಾರಿ ಹಿಡಿಯುವುದು ಕಾಣಬಹುದು. ರಹಮತ್ ತರೀಕೆರೆಯವರು ಹೇಳುವಂತೆ, 'ಮೋಡಗಳಂತೆ ಬದಲಾಗುತ್ತಲೇ ಇರುವ ಈ ಮಿಥ್‌ಗಳ ಮೂಲಕ ಸೂಫಿ ಸಂತರ ಅಧ್ಯಯನ ಮಾಡುವಾಗ, ನಿಚಿತತೆಯನ್ನು ಬೇಡುವ ಚರಿತ್ರಕಾರರು, ಅದರಲ್ಲೂ ಯೂರೋಪಿನವರು ಪಡಬಾರದ ಪಾಡು ಪಡುತ್ತಾರೆ.' (ಕರ್ನಾಟಕದ ಸೂಫಿಗಳು - ೨). ಮಿಥ್‌ಗಳ ಗೊಡವೆಗೆ ಹೋಗದೆಯೆ, ವಚನಗಳು/ವಚನಕಾರರು ಮಾಡಿದ ಕಾರ್ಯಗಳೇನು? ಬೋಧಿಸಿದ (ಉದಾ: ಮಾಂಸ ಸೇವನೆಯ ಬಗ್ಗೆ) ತತ್ವಗಳೇನು? ಎಂಬ ಪ್ರಶ್ನೆಗಳೊಂದಿಗೆ ಲಿಖಿತ ದಾಖಲೆಯನ್ನು ಕಟ್ಟಿಕೊಂಡು ನಡೆಸುವ ಕ್ಲಾಸಿಕಲ್ ಮಾದರಿಯ ವಿಚಾರಣೆಯೂ ಅಷ್ಟೇನೂ ವಿಶ್ವಾಸಾರ್ಹವಲ್ಲ. ರಹಮತ್ ತರೀಕೆರೆಯವರು ಈ ರೀತಿಯ ಸಂಶೋಧನೆಯ ಬಗ್ಗೆಯೂ ಸಂಶಯ ವ್ಯಕ್ತಪಡಿಸುತ್ತಾರೆ. (ಅದೇ. ಪುಸ್ತಕದ ಆರಂಭದಲ್ಲಿ, ಪು. ಸಂ. ನಮೂದಿಸಿಲ್ಲ):

'ಈ ಕ್ಲಾಸಿಕಲ್ ವಿಧಾನದಲ್ಲಿ ಬಹಳ ಪ್ರಯೋಜನವಿಲ್ಲ ... (ಇಲ್ಲಿ) ಚರಿತ್ರೆಯ ಸೃಷ್ಟಿಕರ್ತರಾದ ಜನ ಹೊರಗುಳಿಯುತ್ತಾರೆ. ಸೂಫಿಗಳ (ವಚನಕಾರರ) ಚರಿತ್ರೆಯನ್ನು, ಜನಚರಿತ್ರೆಯ ಭಾಗವಾಗಿ ನೋಡಬೇಕಾದರೆ, ಸತ್ತು ಮಣ್ಣಾಗಿರುವ ಈ ಸಂತರನ್ನು ಪುನರ್ಜನ್ಮ ಕೊಟ್ಟು ಯಾವ ಆಕಾರಗಳಲ್ಲಿ ಜನ ಬದುಕಿಸಿಕೊಂಡಿದ್ದಾರೆ, ಹೀಗೆ ಬದುಕಿರುವ ಸಂತರು ಜನರ ಬದುಕಿನಲ್ಲಿ ಯಾವ ಪಾತ್ರ ವಹಿಸುತ್ತಿದ್ದಾರೆ ಎಂದು ಪರಿಶೀಲಿಸುವುದು ಮುಖ್ಯ. ಆಗ ಸಮಕಾಲೀನ ವಿದ್ಯಮಾನಗಳನ್ನು ನೆಚ್ಚಬೇಕಾಗುತ್ತದೆ, ಇದು ದಾಖಲೆಗಳ ನಿರಾಕರಣೆಯ ಮಾತಲ್ಲ. ಹಬ್ಬಿಹರಡಿರುವ ಮರವನ್ನು ಕಾಣುವಾಗ ಬೇರುಗಳನ್ನು ಗಮನಿಸುವಂತೆ, ಚರಿತ್ರೆಯತ್ತ ಹೊರಳಿನೋಡುವ ಕೆಲಸ ಇದ್ದೇ ಇರುತ್ತದೆ. ಆದರೆ ಈ ಹೊರಳು ನೋಟ ತಾನು ನಿಂತಿರುವ ನೆಲವನ್ನು ಮುಂದಣದಾರಿಯನ್ನು ಕಡೆಗಣಿಸಿಕೊಂಡು ನಿಲ್ಲದಂತೆ ಚಲನಶೀಲವಾಗುತ್ತದೆ.'

ಇವೆಲ್ಲ ತೊಡಕುಗಳ ನಡುವೆಯೂ, ಮಾಂಸಾಹಾರದ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ಲಭ್ಯವಿರುವುದು ಮಿಥ್‌ಗಳಲ್ಲೇ. ಗಮನಿಸಬೇಕಾದ ಒಂದು ವಿಷಯವೆಂದರೆ ಮಿಥ್‌ಗಳು ನಮಗೆ ಶುದ್ಧ ಕಥಾರೂಪಕ್ಕಿಂತ ಜನಪದ ಸಾಹಿತ್ಯದ (ಲಾವಣಿ ಇತ್ಯಾದಿಗಳಲ್ಲಿ) ಅಥವಾ ವಚನಗಳ ರೂಪದಲ್ಲಿ ದೊರಕುವುದರಿಂದ ಸಂಶೋಧನೆಗೆ ಇವುಗಳು ಸುಲಭವಾಗಿ ಲಭ್ಯವಾಗುವುದೇ ಇಲ್ಲ. ಮಿಥ್‌ಗಳ ಪರಿಷ್ಕರಣೆ, ಸಂಶೋಧನೆಯ ಮೊದಲ ಅವಶ್ಯಕತೆಯಾಗುವುದೇ ಅಲ್ಲದೆ ಹಾಗೆ ಪರಿಷ್ಕರಿಸಿದ ಮಿಥ್‌ಗಳು ತಮ್ಮ ಸಾಂಸ್ಕೃತಿಕ ಸಂದರ್ಭದ ಹೊರಗೆ ಕಾಣಿಸಿಕೊಂಡು ತಪ್ಪು ನಿರ್ಣಯಗಳಿಗೆ ಎಡೆ ಮಾಡಿಕೊಡುವ ಅವಕಾಶಗಳೂ ಉಂಟು.

ಮಾಂಸಾಹಾರದ ಬಗ್ಗೆ ಮಾತನಾಡುವ ಒಂದು ಮಿಥ್ ಅನ್ನು ನೋಡೋಣ. ಜನಪದ ಬಸವ ಪುರಾಣದಿಂದ ತರೀಕೆರೆಯವರು (ಪು. ೧೭೮-೧೭೯) ಆರಿಸುವ ಈ ಮಿಥ್ ನೋಡಿ: ತನ್ನ ಮುಸಲ್ಮಾನ ಭಕ್ತ ಪೀರಣ್ಣನ ಮಾಂಸ ಮಾರುವ ಕಾಯಕವನ್ನು ಬಿಡಿಸಲು ಯೋಚಿಸುವ ಶಿವ, ಬಸವಣ್ಣನನ್ನೇ ಹೋರಿ ಮಾಡಿ ತುರುಕರ ಪೀರಣ್ಣ, ಹೊಲೇರ ಹೊನ್ನಯ್ಯ, ಮತ್ತು ಮಾದುಗರ ಚೆನ್ನಯ್ಯರಿಗೆ ಮಾರಾಟ ಮಾಡುತ್ತಾನೆ. ಅವರು ಹೋರಿಯನ್ನು ಕೊಯ್ದು ನೋಡಿದರೆ ಅಲ್ಲೆಲ್ಲಾ ಬಸವನ ಅಂಗಾಂಗಗಳೆ! ಅಷ್ಟರಲ್ಲಿ ಸ್ವತಃ ಬಸವಣ್ಣನೇ ಅವರ ಮನೆಗೆ ಊಟಕ್ಕೆ ಹಾಜರ್. ಪೀರಣ್ಣನಾದರೂ ಏನು ಮಾಡಿಯಾನು? ಆತ ತನ್ನ ಮಗನನ್ನೇ ಕೊಂದು ಸಾರು ಮಾಡಿ ಊಟಕ್ಕೆ ಬಡಿಸುತ್ತಾನೆ. ಆದರೆ ಇಟ್ಟ ಊಟವೆಲ್ಲಾ ನೂರೊಂದು ಪುಷ್ಪವಾಗುತ್ತದೆ. ಪೀರಣ್ಣನ ಭಕ್ತಿಗೆ ಮೆಚ್ಚಿದ ಶಿವ ಅವನಿಗೆ ದಿನಕ್ಕೆ ಮೂರು ಹೊತ್ತು ಶಿವನನ್ನು ಕೂಗು ಎಂದು ಹರಸುತ್ತಾನೆ.

ತರಿಕೆರೆಯವರ ಪ್ರಕಾರ ಇದು ಮಾಂಸ ತಿನ್ನುವ ಸಮುದಾಯವೊಂದನ್ನು ಪರಿವರ್ತನೆ ಮಾಡುವ ಸನ್ನಿವೇಶವನ್ನು ಚಿತ್ರಿಸುತ್ತದೆ. ಈ ರೀತಿಯಲ್ಲಿ ನಾವು ಮಿಥ್ ಅನ್ನು ಓದಿದರೆ, ನನಗನಿಸುವಂತೆ, ಹಲವಾರು ಪ್ರಶ್ನೆಗಳು ಉತ್ತರಿಸಲಾಗದೆ ಹಾಗೇ ಉಳಿದುಬಿಡುತ್ತವೆ. ಉದಾ: ಶೀರಣ್ಣನ ಮಾಂಸಾಹಾರ ಪದ್ಧತಿಯನ್ನು ಬಿಡಿಸುವ ಚಿತ್ರಣ ಈ ಮಿಥ್ ಕೊಡುತ್ತಿದೆ ಎಂದಾದರೆ, ಬಸವಣ್ಣನು ಮಾಂಸದ ಅಡುಗೆ ತಿನ್ನಲು ಬಂದ ಎಂಬುದನ್ನು ಹೇಗೆ ಒಪ್ಪಿಕೊಳ್ಳುವುದು? ಅಂದರೆ ಮಾಂಸಾಹಾರ ತಪ್ಪು ಎಂಬ ಭಾವನೆ ಇದ್ದ ಬಸವಣ್ಣ ಮಾಂಸಾಹಾರ ಊಟ ಮಾಡಲು ಹೋದ (ಈ ಪ್ರಸಂಗದ ಕೊನೆ ಏನೇ ಇರಲಿ) ಎಂಬುದನ್ನು ಹೇಗೆ ಅರ್ಥೈಸುವುದು?

೨

**ವಚನಗಳು:** ಮೊದಲು ನಾವು ನೆನಪಿಟ್ಟುಕೊಳ್ಳಬೇಕಾಗಿದ್ದು, ವಚನಗಳು ಐತಿಹಾಸಿಕ ಆಕರಗಳಲ್ಲ. ಅವುಗಳು ಒಂದು ಆಲೋಚನಾ ಪಂಥದ ತಾತ್ವಿಕ ಸಿದ್ಧಾಂತಗಳು; ಅಥವಾ ಇನ್ನೊಂದು ಪಂಥದ ವಿಮರ್ಶೆ, ವಿಶ್ಲೇಷಣೆಗಳು ಮಾತ್ರ. ಈ ಮಿತಿಗಳ ನಡುವೆಯೂ ನಿರ್ದಿಷ್ಟವಾಗಿ ಜನರ ಮಾಂಸಾಹಾರದ ಬಗ್ಗೆ ಮಾತನಾಡುವ ವಚನಗಳ ಸಂಖ್ಯೆ ತೀರಾ ಕಡಿಮೆ. ಎಂ. ಚಿದಾನಂದ ಮೂರ್ತಿಯವರು ಉದ್ಧರಿಸುವ ಈ ಕೆಳಗಿನ ಎರಡು ಉದಾಹರಣೆಗಳು ಬಹುಶಃ ನಮಗೆ ಲಭ್ಯವಿರುವ ಎರಡು ಮುಖ್ಯ ಉದಾಹರಣೆಗಳು.

'ಕುರಿ ಕೋಳಿ ಕಿರುಮೀನು ತಿಂಬುವರ ಊರೊಳಗೆ ಇರು ಎಂಬರು. ಅಮೃತಾನ್ನವ ಕರೆವ ಗೋವ ತಿಂಬುವರ ಊರಿನಿಂದ ಹೊರಗಿರು ಎಂಬರು' ಅಂಬಿಗರ ಚೌಡಯ್ಯ

'ಕುರಿ ಕೋಳಿ ಕಿರುಮೀನು ತಿಂಬುವರಿಗೆಲ್ಲ ಕುಲಜ ಕುಲಜರೆಂದೆಂಬರು ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳುಜಾತಿಯೆಂಬರು' ಕಾಳವ್ವೆ.

ಸೂಕ್ಷ್ಮವಾಗಿ ಗಮನಿಸಿದರೆ, ಈ ಎರಡು ವಚನಗಳು ಬಹಳಷ್ಟು ನಮಗೆ ಎಲ್ಲರೂ ಮಾಂಸಾಹಾರ ತಿನ್ನುವ ಸಮಾಜದ ಒಂದು ಚಿತ್ರಣವನ್ನು ಕೊಡುತ್ತದೆ. ಹಾಗಾದರೆ ವಚನಕಾರರು ಒಂದು ಇಡೀ ಮಾಂಸಾಹಾರಿ ಸಂಸ್ಕೃತಿಯನ್ನೇ ಬದಲಿಸ ಹೊರಟವರೆ? ಇದಕ್ಕೆ ಪೂರಕವಾಗಿ ಎನ್ನುವಂತೆ ಚಿದಾನಂದ ಮೂರ್ತಿಯವರು ಮಧ್ಯಕಾಲೀನ ಸಮಾಜದಲ್ಲಿ ಬ್ರಾಹ್ಮಣರೂ ಮಾಂಸ ತಿನ್ನುತ್ತಿದ್ದರು ಎಂಬುದಕ್ಕೆ ಬಂದಷ್ಟು ಗಟ್ಟಿಯಾದ ಪುರಾವೆಗಳನ್ನು ಸಾಹಿತ್ಯದಿಂದ ಹುಡುಕಿ ತೆಗೆಯುತ್ತಾರೆ (ಬಸವಣ್ಣ: ಕರ್ನಾಟಕ: ಭಾರತ. ೨೧೫-೨೧೬). ವಚನಗಳ ದಾಖಲಾತಿ ಮತ್ತು ಸಂಗ್ರಹ ಮೊದಲು ನಡೆದದ್ದು ಮುಸ್ಲಿಮರ ವಿರುದ್ಧ ಹೋರಾಡಿ ಸಾಮ್ರಾಜ್ಯ ಕಟ್ಟಿದ ವಿಜಯನಗರ ರಾಜರ (ಇತಿಹಾಸಕಾರರ ಪ್ರಕಾರ ಇದು ಒಂದು 'ಹಿಂದು' ಸಾಮ್ರಾಜ್ಯವಾಗಿತ್ತು) ಅಧೀನದಲ್ಲಿ ಎಂಬುದು ಗಮನಿಸಿದರೆ, ನಮ್ಮ ಮುಂದೆ ಆ ಸಾಮ್ರಾಜ್ಯದ ಜರಡಿಗೆ ಸಿಕ್ಕು ಉಳಿದಿರಬಹುದಾದ, ಅವುಗಳ ಪರಿಷ್ಕರಣವಾದ ರೀತಿಯ ಬಗ್ಗೆ ಬಹುದೊಡ್ಡ ಪ್ರಶ್ನೆ ಏಳುತ್ತದೆ. ಪರಿಸ್ಥಿತಿ ಹೀಗಿರುವಾಗ ತರೀಕೆರೆಯವರು ಹೇಳುವಂತೆ ಒಂದು ಸಂಶೋಧನೆಯು ಬರೀ ಐತಿಹಾಸಿಕ ಆಕರಗಳನ್ನಲ್ಲದೆ ಪುರಾಣ, ಲಾವಣಿ, ಹಬ್ಬ ಆಚರಣೆಗಳ ಸಮೇತ ಇಡೀ ಸಂಸ್ಕೃತಿಯನ್ನೇ ಅಭ್ಯಸಿಸಬೇಕಾಗಿರುವುದು ಎಷ್ಟು ಮುಖ್ಯವೆಂಬುದು ಮನದಟ್ಟಾಗುತ್ತದೆ.

ಈ ಎಲ್ಲ ಅವಶ್ಯಕತೆಗಳನ್ನು ಪೂರೈಸಿದ ನಂತರವೂ, ಉಳಿದ/ಲಭ್ಯವಿರುವ ಸಾಹಿತ್ಯದ ಆಧಾರದ ಮೇಲೆ ಯಾವುದೇ ಒಂದು ಅಭಿಪ್ರಾಯಕ್ಕೆ ಬರುವುದು ಎಷ್ಟು ಕಷ್ಟ ಎಂಬುದನ್ನು ನೋಡೋಣ. ಈಗ, ಮೇಲೆ ತಿಳಿಸಿದ ಮಿಥ್ ಅನ್ನು ವಚನಗಳ ಸಾಲುಗಳೊಂದಿಗೆ ಹೋಲಿಸಿ/ ಒಟ್ಟಾಗಿ ಮತ್ತೊಮ್ಮೆ ಪರೀಕ್ಷಿಸುವುದಾದರೆ ತರೀಕೆರೆಯವರ ಅಥವಾ ಮೂರ್ತಿಯವರ ಅಭಿಪ್ರಾಯವನ್ನು ನಾವು ಅನುಮಾನಿಸಬೇಕಾಗುತ್ತದೆ. ತರೀಕೆರೆಯವರ ಪ್ರಕಾರ ಮೇಲೆ ಕಾಣಿಸಿದ ಮಿಥ್, ಮಾಂಸ ತಿನ್ನುವ ಸಮುದಾಯವೊಂದನ್ನು ಪರಿವರ್ತನೆ ಮಾಡುವ ಉದ್ದೇಶದಲ್ಲಿ ಹುಟ್ಟಿರಬಹುದು (೧೭೯). ಮೂರ್ತಿಯವರು ಒದಗಿಸುವ ವಚನಗಳ ಸಾಲುಗಳನ್ನು ಈ ಮೇಲೆ ತಿಳಿಸಿದ ರೀತಿಯಲ್ಲಿ ಓದಿದರೆ ಇಡೀ ಸಂಸ್ಕೃತಿಯೇ ಮಾಂಸಾಹಾರ ಸಂಸ್ಕೃತಿಯಾಗಿ ಕಾಣಿಸುತ್ತದೆ. ಹಾಗಾದರೆ ವಚನ ಚಳುವಳಿ ಯಾವ ಸಂಸ್ಕೃತಿಯಿಂದ/ ಸಂಸ್ಕೃತಿಯನ್ನು ಬಳಸಿಕೊಂಡು ಹುಟ್ಟಿತು? ತನ್ನದೇ ಸಂಸ್ಕೃತಿ (ಮಾಂಸಾಹಾರ ಸಂಸ್ಕೃತಿ)ಯನ್ನು ಅದು ಪ್ರಶ್ನಿಸಿತ್ತೇ? ಹಾಗಾದರೆ, ಮಾಂಸಾಹಾರದ ವಿರುದ್ಧ ಇವರ ವಾದಗಳಾದರೂ ಏನು?

'ಕೊಲುವವನೇ ಮಾದಿಗ' ಎಂಬ ಬಸವಣ್ಣನವರ ನುಡಿಯನ್ನು ಈ ವಾಗ್ವಾದದಲ್ಲಿ (ಮಾಂಸಾಹಾರದ ವಿರುದ್ಧ ಅವರು ಮಾತನಾಡಿದ್ದರು ಎಂದು ಸೂಚಿಸಲು) ಬಳಸುತ್ತಿರುವುದನ್ನು ನಾವು ನೋಡಬಹುದು. ಆದರೆ ಹೀಗೆ ಬಳಸುವುದು ನಾವು ವಚನ ಚಳವಳಿಯನ್ನು ಇನ್ನೂ ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂಬುದನ್ನು ತೋರಿಸುತ್ತದೆ ಎಂಬುದು ನನ್ನ ಬಲವಾದ ನಂಬಿಕೆ. ನನ್ನ ಮಾತನ್ನು ಅರ್ಥಮಾಡಿಕೊಳ್ಳಲು ಹೀಗೊಂದು ಯೋಚನಾ- ಪ್ರಯೋಗ ಮಾಡಿ ನೋಡಿ : ಮುಂದಿನ ಆಗಸ್ಟ್ ೧೫ರಂದು ನಮ್ಮ ದೇಶದ ಪ್ರಧಾನಮಂತ್ರಿಯವರು ಕೆಂಪುಕೋಟೆಯಿಂದ ಭಾಷಣ ಮಾಡುತ್ತ ('ಕೊಲುವವನೆ ಮಾದಿಗ' ಎನ್ನುವ ಧಾಟಿಯಲ್ಲಿ) ಲಂಚಕೋರರೆಲ್ಲ ಮಾದಿಗರು ಎಂದರೆ ಏನಾದೀತು ಊಹಿಸಿ!! ಈ ಮಾತು, ಭ್ರಷ್ಟಾಚಾರದ ವಿರುದ್ಧ ಹೇಳಿದ್ದು ಎನಿಸುತ್ತದೋ ಅಥವಾ ಮಾದಿಗ ಸಮುದಾಯದ ವಿರುದ್ಧವೆನಿಸುತ್ತದೋ? ಮಾದಿಗರ ವಿರುದ್ಧ ಎಂದು ನಿಮಗನ್ನಿಸಿದರೆ, 'ಕೊಲುವವನೇ ಮಾದಿಗ' ಎನ್ನುವ ವಚನವನ್ನು ಹೇಗೆ ಅರ್ಥೈಸುತ್ತೀರಿ? ನನ್ನ ಪ್ರಕಾರ ಸಮಸ್ಯೆ ಇರುವುದು ಬಸವಣ್ಣನವರ ವಚನದಲ್ಲಲ್ಲ, ಬದಲಿಗೆ ನಾವು ಅದನ್ನು ಯುರೋಪಿನ ಓರಿಯಂಟಲ್ ಮಾದರಿಯಲ್ಲಿ ಅರ್ಥ ಮಾಡಿಕೊಂಡಿರುವುದೇ ಇದಕ್ಕೆ ಕಾರಣ.

## ೨


ಎಷ್ಟೆಲ್ಲ ಚಳವಳಿಗಳು, ಯುದ್ಧಗಳು, ರಾಜಕೀಯ ಬದಲಾವಣೆಗಳು ಬಂದುಹೋದವು. ಜನಸಾಮಾನ್ಯರು ಮತ್ತು ಅವರ ಜೀವನ ಹೆಚ್ಚಿನ ಬದಲಾವಣೆ ಕಂಡಿಲ್ಲವೇನೋ ಅನಿಸುತ್ತದೆ. 'ರಾಮ ರಾಜ್ಯವಾಳಿದರೂ, ರಾಗಿ ಬೀಸುವುದು ತಪ್ಪುವುದಿಲ್ಲ' ಎಂಬ ಗಾದೆ ಬಹುಶಃ ಈ ಸತ್ಯಕ್ಕಿಂತ ಹೆಚ್ಚಿನದೇನು ಹೇಳುತ್ತಿಲ್ಲ. ಅದೇ ಬೀದಿ ಜಗಳಗಳು, ರಾಜಿ-ಸಂಧಾನಗಳು, ಬೆವರಿಳಿಸಿ ದುಡಿಮೆ, ಹಣವಿಲ್ಲದಿದ್ದರೂ ಹಬ್ಬ-ಹರಿದಿನ, ಕುಡಿತ, ಹೊಡೆದಾಟ... ಜೀವನ ಹಗಲಿರುಳಿನಂತೆ, ಎಲ್ಲವನ್ನೂ ತನ್ನ ಬೆನ್ನಿಗೆ ಹಾಕಿ, ತನ್ನದೇ ಧಾಟಿಯಲ್ಲಿ ನಡೆಯುತ್ತಲೇ ಇರುತ್ತದೆ. ಪ್ರಧಾನ ಮಂತ್ರಿಗಳಾಗಲಿ, ಮಠಾಧೀಶರಾಗಲಿ ಸ್ವಾಗತಿಸಿದ ಮಾತ್ರಕ್ಕೆ ಅವರು ಮಾಂಸಾಹಾರವನ್ನು ಆರಂಭಿಸುವುದೂ ಇಲ್ಲ, ವಿರೋಧಿಸಿದ ಮಾತ್ರಕ್ಕೆ ಬಾಡಿನೂಟವನ್ನು ಬಿಟ್ಟುಕೊಡುವುದೂ ಇಲ್ಲ. ಅಂಗಳದಲ್ಲಿ ಆಗದಿದ್ದರೆ ಹಿತ್ತಲಿನಲ್ಲಾದರೂ ಸರಿ,

ಬೇಕೆನಿಸಿದಾಗ ಬಾಡಿನೂಟ ಬೇಯಿಸಿಕೊಳ್ಳಲು ಅವರಿಗೇನೂ ಅಭ್ಯಂತರವಿಲ್ಲ. ಹುಂಜಕ್ಕೆ ಕೇಳಿ ಮಸಾಲೆ ಅರಿವುದು ಅವರ ಜಾಯಮಾನದಲ್ಲೇ ಬಂದಿರಲಿಕ್ಕಿಲ್ಲ.

ಎಷ್ಟು ಮಂದಿ ಈ ಎಲ್ಲ ಸೂಕ್ಷ್ಮತೆಗಳನ್ನು, ವಿಷಯಗಳನ್ನು ಪ್ರಶ್ನೆಗಳನ್ನು ಅರ್ಥಮಾಡಿಕೊಂಡು 'ಮಾಂಸ ಸೇವನೆ-ವೀರಶೈವ ತತ್ವಗಳು' ವಿವಾದದಲ್ಲಿ ಪಾಲ್ಗೊಂಡಿದ್ದಾರೆ?! ಮತ್ತೊಮ್ಮೆ ಅವರ ಹೇಳಿಕೆಗಳನ್ನು ಓದಿ, ನಮ್ಮನ್ನೇ ನಾವು ಈ ಪ್ರಶ್ನೆಯನ್ನು ಕೇಳಿಕೊಳ್ಳಬೇಕು.

ಮುಕ್ತಾಯಕ್ಕೆ ಮುನ್ನ:


ನಾವು ಇಲ್ಲಿ ಎತ್ತಿರುವ ಪ್ರಶ್ನೆಗಳಿಗೆ ಆತುರಾತುರವಾಗಿ ಉತ್ತರ ಕೊಟ್ಟುಕೊಳ್ಳುವುದು ಬೇಡ. ಪ್ರಶ್ನೆಗಳು ಹಾಗೆ ಇರಲಿ, ನಮ್ಮನ್ನು ಮತ್ತಷ್ಟು ಕಾಡಲಿ. ಹೊಸ ಹೊಸ ಸಂಶೋಧನೆಗಳತ್ತ ನಮ್ಮನ್ನು ಸೆಳೆಯಲಿ.



ಸಂಶೋಧನಾ ವಿದ್ಯಾರ್ಥಿ
ಸಂಸ್ಕೃತಿ ಸಮಾಜ ಅಧ್ಯಯನ ಕೇಂದ್ರ (ಸಿಎಸ್‌ಸಿಎಸ್)
ಜಯನಗರ, ೩ನೇ ಬ್ಲಾಕ, ಬೆಂಗಳೂರು - ೫೬೦ ೦೧೧

## ಚಂದಾದಾರರಲ್ಲಿ ಒಂದು ಮಾತು

- ಎಂ.ಓ. ಮೂಲಕ ಚಂದಾ ಕಳುಹಿಸುವವರು ಕೌಂಟರ್ ಫಾಯಿಲ್‌ನಲ್ಲಿ ತಪ್ಪದೇ ನಿಮ್ಮ ಹೆಸರು, ವಿಳಾಸ ಬರೆಯಿರಿ. ಹೊರ ಊರಿನ **ಚೆಕ್** ಕಳುಹಿಸುವವರು ರೂ. ೨೦/- ಹೆಚ್ಚಿಗೆ ಕಳುಹಿಸಿ. '***ಸಂಚಯ***'ದ ಹೆಸರಿಗೆ ನಿಮ್ಮ ಚೆಕ್, ಡಿ.ಡಿ. ಕಳುಹಿಸಬಹುದು.
- ನಿಮ್ಮ ವಿಳಾಸ ಬದಲಾದಲ್ಲಿ ದಯವಿಟ್ಟು ಒಂದು ಕಾರ್ಡು ಹಾಕಿ. ನಮ್ಮ ಸಮಯ, ಶ್ರಮ ಸುರಿದು ರೂಪಿಸಿದ ಪತ್ರಿಕೆಯ ಪ್ರತಿಗಳು ವ್ಯರ್ಥ ವಾಪಸ್ಸಾಗುವುದು, ಬೇಡದ ಜಾಗಗಳಲ್ಲಿ ಕೊಳೆಯುವುದು ಬೇಡ.
- ಪುಸ್ತಕ ವಿಮರ್ಶೆ/ಪರಿಚಯಕ್ಕೆ ಎರಡು ಪ್ರತಿಗಳನ್ನು ಕಳುಹಿಸಿ.
- ನಿಮ್ಮ ಸ್ನೇಹಿತರನ್ನು, ಗೆಳೆಯರನ್ನು ಆಸಕ್ತಿ ಇರುವವರನ್ನು ಸಂಚಯಕ್ಕೆ ಚಂದಾದಾರರನ್ನಾಗಿ 'ಸಂಚಯ ಸ್ನೇಹವಲಯ' ವಿಸ್ತರಿಸಿ.
- ನಿಮ್ಮ ಬರಹಗಳು ಮತ್ತು ಸಂಚಯ ಕುರಿತ ಅನಿಸಿಕೆ ಅಭಿಪ್ರಾಯಗಳಿಗೆ ಸ್ವಾಗತವಿದೆ.



## ಪುತಿನ ಅವರ
# 'ಗೋಕುಲ ನಿರ್ಗಮನ' 'ಶ್ರೀಹರಿ ಚರಿತೆ' ಹಿನ್ನೆಲೆಯಲ್ಲಿ ಶ್ರೀಕೃಷ್ಣ
### ಕೆಲವು ಟಿಪ್ಪಣಿಗಳು

✦ ಚಿ. ಶ್ರೀನಿವಾಸರಾಜು

**ಪು**ತಿನ ಕನ್ನಡ ನವೋದಯ ಕಾವ್ಯದ ಸಾಧಕರಲ್ಲಿ ಒಬ್ಬರು. ಒಂದು ನಿರ್ದಿಷ್ಟ ಮನೋಧರ್ಮ ಮತ್ತು ಪೂರ್ವ ಸಿದ್ಧತೆಗಳನ್ನು ಹೊಂದಿರುವ ಸಹೃದಯನು ಇವರ ಕಾವ್ಯದಲ್ಲಿ ಅನನ್ಯವಾದ ಚೆಲುವನ್ನು ಕಾಣಬಹುದು.

**'ಮಾತನು ಬಿಡಿಸಿ, ಅರ್ಥವನು ಚರ್ವಿಸುತ ಭಾವವ ಸವಿದು, ರಸದೊಳು ತಣಿಯಲಾಶಿಸುವ ಸಹೃದಯರಿಗಾತಿಥೇಯಂ ಶ್ರೀಹರಿಚರಿತೆಯಹುದಹುದು, ರಸಿಕಸಿದನವಗಾಹಿಪೊಡೆ, ತಣ್ಣನಂ ಬೆಚ್ಚನೆದೆ, ನಿರ್ಮಲಮನಂ, ಮೈತ್ರೀಪ್ಲುತಂ ಸವಿಸಿಪುದವಗೆ ಅನುರಾಗ ದೀಪ್ತವಹುದಾತನ ಹೃದಯ'**

ಈ ಮಾತುಗಳೇ ಅವರ ಕಾವ್ಯದ ಅಧ್ಯಯನ ರೀತಿಯನ್ನು ಸೂಚಿಸುತ್ತವೆ. ಆದರೆ ಇಪ್ಪತ್ತೊಂದನೆಯ ಶತಮಾನದಲ್ಲಿ ಮಹಾಕಾವ್ಯ ವಾಚನವನ್ನು ಕೇಳುವ ಶ್ರದ್ಧೆಯಾಗಲೀ, ಕುಳಿತು ಓದುವ ತಾಳ್ಮೆಯಾಗಲಿ ಇಲ್ಲ. ಆದರೂ ಮಹಾಕಾವ್ಯಗಳು ರಚಿತವಾಗುತ್ತವೆ. ಕೆಲವು ಮಹಾಕಾವ್ಯಗಳು ಹಳೆಯ ಕಥೆಯನ್ನು ಹೊಸದಾಗಿ ಅರ್ಥೈಸುವ ಪ್ರಯತ್ನ ಮಾಡಿದರೆ, ಬೇರೆ ಕೆಲವು ಅಂದಿನ ಕಥೆಯ ಮೂಲಕ ಇಂದಿನ ಬದುಕಿನ ತೊಡಕುಗಳನ್ನು ಬಿಡಿಸಲು ಯತ್ನಿಸಿವೆ.

ಪು.ತಿ.ನ. ಅವರ 'ಶ್ರೀಹರಿಚರಿತೆ' ಮೂವತ್ತ ಮೂರು ಉಲ್ಲಾಸಗಳಲ್ಲಿ ಸುಮಾರು ಐದು ಸಾವಿರ ಪಂಕ್ತಿಗಳು ಇರುವ

ದೀರ್ಘಕಾವ್ಯ. ಭಾಗವತದ ದಶಮಸ್ಕಂಧದ ಪ್ರಾರಂಭದ ಭಾಗ ಮಾತ್ರ 'ಶ್ರೀಹರಿಚರಿತೆ'ಯ ಕಾವ್ಯವಸ್ತುವಾಗಿದೆ. ಕೃಷ್ಣನ ಇಡೀ ಬದುಕು ಚಿತ್ರಿತವಾಗಿಲ್ಲ. ಕೃಷ್ಣನ ಬಾಲಲೀಲೆಗಳು ಹಾಗೂ ಯೌವನದ ದಿನಗಳ ಬದುಕಿನ ಘಟನೆಗಳಿಗೆ ಸಂಬಂಧಿಸಿದ ಸನ್ನಿವೇಶಗಳು ಇಲ್ಲಿವೆ.

ಪು.ತಿ.ನ. ಮೊದಲಿನಿಂದಲೂ ಶ್ರೀಕೃಷ್ಣನ ವ್ಯಕ್ತಿತ್ವಕ್ಕೆ ಮಾರುಹೋದ ಭಾಗವತ ಪರಂಪರೆಯ ಜಿಜ್ಞಾಸು ಮನಸ್ಸಿನ ಕವಿ. ಅವರು 'ಶ್ರೀಹರಿಚರಿತೆ'ಯನ್ನು ಬರೆದಿರುವುದು ಪುಣ್ಯ ಸಂಪಾದನೆಗಲ್ಲ, ಪಾರಾಯಣಕ್ಕೂ ಅಲ್ಲ. ಅವರು ಬರೆದಿರುವುದು ಆಧುನಿಕ ವೈಜ್ಞಾನಿಕಯುಗದ ಕಾವ್ಯಾಸಕ್ತ ಸಹೃದಯರಿಗಾಗಿ. ಇವರ ಕಾವ್ಯದಲ್ಲಿ ಸಂಪ್ರದಾಯದ ನಿರಾಕರಣೆಯನ್ನು ಕಾಣುವುದಿಲ್ಲ, ಬದಲು ಮರುಹೊಂದಾಣಿಕೆಯನ್ನು ಕಾಣುತ್ತೇವೆ. ತಮ್ಮ ಕಾವ್ಯಕ್ಕೆ ವಸ್ತುವಿನ ಆಯ್ಕೆಯಲ್ಲಿ, ನಿರ್ವಹಿಸುವ ರೀತಿಯಲ್ಲಿ ಈ ನಿಲುವು ಸ್ಪಷ್ಟವಾಗುತ್ತದೆ. 'ಪುರಾಣ' ಕೂಡ ಸಮಕಾಲೀನ ಬದುಕನ್ನು ಕುರಿತು ವ್ಯಾಖ್ಯಾನಿಸಲು, ಚಿಂತಿಸಲು ಒಂದು ಮಾರ್ಗವೆಂದು ನಂಬಿ 'ಶ್ರೀಹರಿಚರಿತೆ'ಯನ್ನು ರಚನೆ ಮಾಡಿದ್ದಾರೆ.

'... ಲೌಕಿಕ ದೃಷ್ಟಿಯಿಂದ ಪ್ರಧಾನವಾಗಿ ನನ್ನ 'ಶ್ರೀಹರಿಚರಿತೆ' ವ್ಯಾಪ್ತವಾಗಿದೆ. ವ್ಯಕ್ತಿ ಮತ್ತು ಸಮಷ್ಟಿ ಪ್ರತಿನಿಧಿಯ ಸಂಬಂಧ ಇಲ್ಲಿನ ಕಾಳಿಂಗಮರ್ಧನ, ಗೋವರ್ಧನೋದ್ಧರಣ, ಶಕ್ರದಮನ, ಗೋವಿಂದ ಪಟ್ಟಾಭಿಷೇಕ, ನವಗೋಕುಲ ನಿರ್ಮಾಣ, ವೇಣು ವಿಸರ್ಜನ ಮುಂತಾದ ಕಥಾ ಪ್ರಸಂಗಗಳಲ್ಲಿ ಸಾಂಕೇತಿಕವಾಗಿ ಹೊಳವುಗೊಂಡಿದೆ. ಸಹೃದಯರು ಈ ನೆಲೆಯಿಂದ ನೋಡಿಯಾರು ಎಂದು ನನ್ನ ಆಶಯ...' ಎಂದು ಅವರ ಮುನ್ನುಡಿಯಲ್ಲೇ ದಾಖಲಾಗಿದೆ. ಪು.ತಿ.ನ. ಅವರು ಆಯ್ದುಕೊಳ್ಳುವ ಆಧುನಿಕ ವಿಚಾರಗಳು, ಪ್ರಾಚೀನ ಚಿಂತನೆಗಳ ಸಮರ್ಥನೆಗೆಂದು ಬಳಕೆಯಾಗುತ್ತದೆ. ಖಂಡನೆಗಲ್ಲ.

ಹಿಂದಿನ ಪುರಾಣ ಕಾವ್ಯಗಳಲ್ಲಿ ರಾಧೆಯ ಉತ್ಕಟ ಕೃಷ್ಣ ಪ್ರೇಮ ಮತ್ತು ಕೃಷ್ಣನ ರಾಧಾಪ್ರೇಮ ಚರ್ವಿತಚರ್ವಣವಾಗಿ ಅತಿರಂಜಿತವಾಗಿರುವಾಗ, ಪು.ತಿ.ನ. ಇಲ್ಲಿ ಅದನ್ನು ಶೋಧಿಸಿ, ಶುದ್ಧ ಪ್ರೇಮ ಸಮ್ಮಿಲನವಾಗಿ ಚಿತ್ರಿಸುತ್ತ, ದೇಹದೇಹಗಳ ಪ್ರಾಕೃತಿಕ ಆಯಸ್ಕಾಂತಿಯ ಆಕರ್ಷಣವನ್ನು ನವಿರಾಗಿ ಬಿಡಿಸುತ್ತಾರೆ. 'ಭಾಂಡೀರ ದರ್ಶನ' ಮತ್ತು 'ರಾಧಾಕೃಷ್ಣ ಸಂಗತಿ' – ಈ ಎರಡೂ ಕನ್ನಡದ ಕೃಷ್ಣ ಕತೆಯೊಳಗೆ ಮೊದಲ ಬಾರಿಗೆ ಸೇರಿಕೊಂಡ ಅಂಶಗಳಾಗಿವೆ.

'ಶ್ರೀಹರಿಚರಿತೆ'ಯ ಕಥನ ಕ್ರಿಯೆ ವರ್ತುಲ ವರ್ತುಲವಾಗಿ ಚಲಿಸಿ ಕವಿಯ ಮನೋಧರ್ಮವನ್ನು ಸೂಚಿಸುತ್ತದೆ. ಕಾವ್ಯದಲ್ಲಿ ಕಂಡುಬರುವ ಸೊಗಸಾದ ಅನುಭವಗಳು, ವರ್ಣನೆಗಳು ಚಿಂತನದ ಮಡುಗಳಾಗಿವೆ.

ಶ್ರೀಕೃಷ್ಣನ ಪೂರ್ಣ ವ್ಯಕ್ತಿತ್ವದ ಅನಂತ ಮುಖಗಳಲ್ಲಿ ಕೆಲವನ್ನು ಮಾತ್ರ ಹಿಡಿದಿಡಲು ಸಾಧ್ಯವಾಯಿತು ಎನ್ನುತ್ತಾರೆ ಪು.ತಿ.ನ. ಸುಮಾರು ೧೯೪೫ರಲ್ಲಿ ರಚಿಸಿದ 'ಗೋಕುಲ ನಿರ್ಗಮನ' ಗೀತರೂಪಕದ ಘಟನಾಪೂರ್ವ ಚಿತ್ರಗಳಿಂದ ಕೂಡಿದ ವಿವರವಾದ, ವಿಸ್ತೃತವಾದ ಕಾವ್ಯರೂಪವಾಗಿದೆ. 'ಶ್ರೀಹರಿಚರಿತೆ' ಶ್ರೀಕೃಷ್ಣನ ಚರಿತೆಯು ಕೃಷ್ಣ ಆಧುನಿಕ ಮಾನವನ ಆಶಯಗಳನ್ನು ಪ್ರತಿನಿಧಿಸುವುದಿಲ್ಲ. ಕವಿ ಕೃಷ್ಣನನ್ನು ಎಷ್ಟೇ ಪ್ರಶಂಸಿಸಿದರೂ ಅವನು ನಮಗೆ ದೂರ ಸರಿದವನು, ಗೌರವಾನ್ವಿತನು ಆಗುತ್ತಾನೆ. ನಮ್ಮೊಳಗಿನ ತಳಮಳಗಳಿಗೆ, ಸಾಧ್ಯತೆಗಳಿಗೆ ನೀಡಿದ ಪುರಾಣರೂಪವಾಗಿ ತೋರುವುದಿಲ್ಲ. ಕೃಷ್ಣ ಇಲ್ಲಿ ಪ್ರಜಾ ಹಿತೈಷಿಯಾದರೂ ಸರ್ವಾಧಿಕಾರಿ. ಇದಕ್ಕೆ ಒಂದು ನಿದರ್ಶನವೆಂದರೆ – ಗೋವಳರು ನವನಿರ್ಮಾಣದಲ್ಲಿರುವಾಗ, ಅವರು ತಮಗಲ್ಲ ಹಟ್ಟಿಗಳನ್ನು ಕಟ್ಟಿಕೊಂಡು ನಂದಗೋಪನಿಗೆ 'ಕರುಮಾಡ'ನ್ನು ಕಟ್ಟಿಕೊಡುವ ಸನ್ನಿವೇಶ.

'ಬೇಡೆಂದರೂ
ಕರುಮಾಡವನೆ ಕಟ್ಟಿದರು ನಂದಗೋಪನಿಗೆ ಗೋವಳರು
ಅವರಿಚ್ಛೆಗದ ಬಿಡುತ ಕಮ್ಮನೆಯಿದ್ದು ಸರಿತೋರದೆಡೆ
ಸರಿಗೈಯೆ ಸಲಹೆಯಿತ್ತು ನಿರುಕಿಪರದನು ಕೃಷ್ಣನುಂ
ರಾಮನುಂ...'

ಎಂದು ಬಲರಾಮ-ಕೃಷ್ಣರು ಮೌನ ಸಮ್ಮತಿ ನೀಡುತ್ತಾರೆ.

ಇನ್ನೊಂದು ನಿದರ್ಶನವೆಂದರೆ – ಗಂಡು ಹೆಣ್ಣಿನ ಸಂಬಂಧಗಳು. ಕೃಷ್ಣ-ಗೋಪಿಕೆಯ ಸಂಬಂಧ ಹಾಗೂ ಕೃಷ್ಣ ರಾಧೆಯರ ಸಂಬಂಧಗಳನ್ನು ಕವಿ ಅತ್ಯಂತ ತನ್ಮಯತೆಯಿಂದ ಭಾವನಾಮಯವಾಗಿ ಚಿತ್ರಿಸುತ್ತಾರೆ. 'ಗೋಕುಲ ನಿರ್ಗಮನ'ಕ್ಕಿಂತ ಭಿನ್ನವಾದ ನೆಲೆಯನ್ನು 'ಶ್ರೀಹರಿಚರಿತೆ' ಕೃತಿಯಲ್ಲಿ ಕಾಣಬಹುದು. ಶರೀರದ ಸಾಧ್ಯತೆಗಳಲ್ಲಿ ಆಸಕ್ತನಾದ ಪುರುಷನೊಬ್ಬನ ದೃಷ್ಟಿಕೋನವೇ ಹೊರತು ಹೆಣ್ಣಿನ ಅಂತರಂಗದ ಪಕ್ಷಗಳ ಶೋಧನೆಯಾಗಿಲ್ಲ. ಇಲ್ಲಿನ ಸ್ತ್ರೀಪಾತ್ರಗಳ ಅನುಭವ ಮತ್ತು ಚಿಂತನೆಯಲ್ಲೂ 'ಗಂಡು ಕಂಡ ಹೆಣ್ಣಿನ ಮನಸ್ಸಿ'ನದೇ ಆಗಿದೆ.

ಜೊತೆಗೆ ವ್ಯಷ್ಟಿ ಮತ್ತು ಸಮಷ್ಟಿಗಳ ನಡುವಿನ ಸಂಬಂಧ ಆಧುನಿಕವಾಗದೆ, ಮೂಲಭೂತ ಸಮತಾವಾದಕ್ಕೆ ಸೀಮಿತವಾಗಿದೆ. ಏಕಪಂಥೀಯ ಚಿಂತನೆಗಳ ಬದುಕಿನ ಕ್ರಮವನ್ನು ಕೃಷ್ಣನಲ್ಲಿ ಕಾಣುವುದು ಕಷ್ಟ. ಅದಕ್ಕೆ ಕೃತಿಯಲ್ಲಿ ರುಜುವಾತುಗಳು ಸಿಕ್ಕುವುದಿಲ್ಲ. ಅವರಿಗಿಂತ ಭಿನ್ನವಾದ ಮನೋಧರ್ಮದವರಿಗೆ ಇದು ಅನ್ಯವಾಗಿಯೇ ಉಳಿಯುತ್ತದೆ.

'ಇದೇ ಹರಿಯುಪದಿಷ್ಟ
ನಿರ್ದಿಷ್ಟ ಕರ್ಮಯೋಗಂ, ಗಾಂಧೀ ಮಾರ್ಕ್ಸ್, ಚಾಣಕ್ಯ
ಮತ್ತಿನಿಬರಂ ತಾನೊಳಕೊಂಡು ಮೆರೆವ ಯೋಗೀಶ್ವರನ
ಗೀತೋದಿತಂ'

ಎಂದು ಒಂದು ಉಸಿರಿನಲ್ಲಿ ಉಲ್ಲೇಖಿಸುವುದಷ್ಟೇ ಈ ತಾತ್ವಿಕ ನೆಲೆಯ ಸರಳೀಕೃತ ರೂಪವೆಂಬುದಕ್ಕೆ ನಿದರ್ಶನ. 'ಕೃಷ್ಣ ಈ ಕೃತಿಯ ಪ್ರಾರಂಭದಲ್ಲೇ 'ಆಗಿರುವಂಥವನು'. ಕೃಷ್ಣ ಅವತಾರಿಯಾಗಿಯೇ ನಮಗೆ ಮೊದಲು ಪರಿಚಿತನಾಗುವುದು. ಈ ಕೊರತೆಗೆ ಕಾರಣವನ್ನು ಕೆದಕಿದರೆ, ಕವಿ ಕೃಷ್ಣನ ಚಿತ್ರಣದಲ್ಲಿ ಅತ್ಯವಶ್ಯವಾದ ತಟಸ್ಥತೆಯನ್ನು ಬಿಟ್ಟುಕೊಟ್ಟು ಅವಶ್ಯಕತೆಗಿಂತ ಹೆಚ್ಚು ತಲ್ಲೀನನಾಗುವುದು. ಸ್ತುತಿಯಲ್ಲಿ ತನ್ಮಯರಾಗಿ ಆನಂದಿಸುವ ರೀತಿ ಮೇಲುಗೈ ಪಡೆದಿದೆ.

'ಹರಿ ಹರೀ, ಕೃಷ್ಣ ಕೃಷ್ಣಾ, ಎನ್ನ ನೋಡದೆ ಹೊರಟೆಯಾ
ನುಡಿಸದೆ ಹೊರಟೆಯಾ, ನಿನ್ನವಳು, ನೋಡಿತ್ತ, ರಾಧೆನಾ!
ಮರಳಿ ಬಹೆಯಾ, ಕೊಳಲ ತುಟಿಗೆ ತಹೆಯಾ ಏಕದ ಬಿಸುಟೆ
ಗೋವಿಂದ, ನನ್ನನು ತೊರೆದೆಯಾ, ನಾನೆಂತು ತೊರೆಯಲ್ಕೆ
ಆಸುನೀಗದೆಯೆ ನಿನ್ನ-ನಿಲ್ಲು, ತುಸುನಿಲ್ಲು ಹರಿ' – ಹೃದಯ
ವಿದ್ರವಿಸಿತಾ ದನಿ ಕೇಳಿ ಕೃಷ್ಣನಿಗೆ ಕಳವಳಿಸಿದನು.
ಮನದ ಬಿಗುಹನು ಸಡಿಲಿಸಿತು ತನ್ನಿನಿಯಳಾರ್ತನಾದಂ
ಉಮ್ಮಳಗೊಂಡು, 'ರಾಧೇ' ಎಂದು ಚೀತ್ಕರಿಸಿ ತೇರಿನಿಂ
ಧುಮ್ಮಿಕ್ಕಲೆಳಸುವನು. ಅಡ್ಡವಿಸಿ ಬಲತೋಳ ರಾಮಂ
ನಿರೋಧಿಪನಾತನನು. ರಾಧೆಯೋಡುತ ಬಂದು ಹವಳದ
ಹಾರವಂ ಕೊರಲಿಂ ತೆಗೆದೊಗೆವಳಾ ಹರಿಯ ವಕ್ಷಕೆ.

ಆ ಸ್ಮರಣೆಯ ತುಟಿಗೊತ್ತಿ ಆರ್ದ್ರನಯನಾಭಿರಾಮಂ
ಶ್ರೀಕೃಷ್ಣ ಮುತ್ತಿನೇಕಾವಳಿಯ ವನಮಾಲೆಯೊಂದಿಗೆ
ಎಸೆವನು ತನ್ನ ಕಾದಲೆಗೆ, ಆದನಾತು ಕೊಳೆ ಧಾವಿಸುತ
ಮುಗ್ಗಿರಿವಳಾ ರಾಧೆ, ಚಬುಕನು ಸೋಕಿಸುವನ ಕ್ರೂರ
ಅಶ್ವಂಗಳಿಗೆ, ತಡೆವ ತೋಳನು ಸಡಲಿಸನು ಬಲರಾಮ
ಚಲಿಸಿತು ತೇರು ಕೆಂಧೂಳ ಹಬ್ಬಿಸುತಲಿನಿಯರ ನಡುವೆ.

ರಾಧಾಕೃಷ್ಣರ ಪ್ರೇಮ ಈ ರೀತಿ ದೈವದ ವಿಧಿಗೆ ಬಲಿಯಾಗಿ ಬೇರ್ಪಡುವ ಮಾರ್ಮಿಕ ಸನ್ನಿವೇಶ ಶ್ರೀಹರಿಚರಿತೆಯದು. ಇದು 'ಗೋಕುಲ ನಿರ್ಗಮನ'ದಿಂದ ಹೊಸತು ಅಲ್ಲಿ ಬಿಟ್ಟು ಹೋದ ಕೃಷ್ಣನನ್ನು ರಾಧೆ ಕಾಣುವುದು ಅವನು ಬಿಟ್ಟುಹೋದ ಕೊಳಲಿನಲ್ಲಿ ಆಗ ಅವಳು ಹಾಡು ಸುಂದರ ಹಾಡಾಗಿ ಹೊಮ್ಮುತ್ತದೆ.

ಶ್ರೀಕೃಷ್ಣನ ಕೊಳಲಗಾನ ವಿಶ್ವಗಾನವಾಗುವ ವರ್ಣನೆ ಎರಡು ಕಡೆ ಬರುತ್ತದೆ. ಅದು ನಿಸರ್ಗಗಾನವಾಗಿ ಮೊಳಗುತ್ತದೆ. ಅದು ಅಮೂರ್ತವರ್ಣನಕ್ಕೆ ಒಡಿದ ಪ್ರತಿಮೆಯಾಗಿದೆ.

೨ 

ಪು.ತಿ.ನ. ಅವರು 'ಗೋಕುಲ ನಿರ್ಗಮನ'ದಲ್ಲಿ ಕೃಷ್ಣನ ಬದುಕಿನಲ್ಲಿನ ಮಹತ್ವದ ಘಟ್ಟವೊಂದನ್ನು ಆರಿಸಿಕೊಂಡು, ಅವನಲ್ಲಾದ ಪರಿವರ್ತನೆ, ಅವನ ಸುತ್ತಲಿನವರ ಮೇಲೆ ಬೀರುವ ಪರಿಣಾಮವನ್ನು ಚಿತ್ರಿಸುವುದು ಈ ಗೀತ ನಾಟಕದ ವಸ್ತು. ಕೇವಲ ಬೆಳ್ದಿಂಗಳ ಒಂದು ರಾತ್ರಿ ಬೃಂದಾವನದಲ್ಲಿ ನಡೆದ ಘಟನೆಯೇ ವಸ್ತುವಾದರೂ ೪೫ ಗೀತಗಳು, ೨೦-೩೦ ಉಪಗೀತೆಗಳಿಂದಲೂ ಹಲವಾರು ಸಂಭಾಷಣಾ ಚರಣಗಳಿಂದಲೂ ನಾಟಕ ಕ್ರಿಯೆ ಮುಂದುವರೆಯುವುದು.

'ಗೋಕುಲ ನಿರ್ಗಮನ' ಎರಡು ನೆಲೆಗಳಲ್ಲಿ ಸಾಂಕೇತಿಕವಾಗುತ್ತದೆ. ಒಂದು, ಪ್ರತಿಯೊಬ್ಬರೂ ಬಾಲ್ಯದಿಂದ ಕರ್ತವ್ಯ ಪ್ರಜ್ಞೆಯಿಂದಲೇ ಭಾರವಾದ ಪ್ರೌಢಾವಸ್ಥೆಯನ್ನು ಪ್ರವೇಶಿಸಬೇಕಾಗುತ್ತದೆ. ಆ ನೆಲೆಯಿಂದ ಕೃಷ್ಣನ ಪರಿವರ್ತನೆ ನಮ್ಮೆಲ್ಲರಲ್ಲಿ ಜರುಗಬಹುದಾದ ರೂಪಾಂತರವೂ ಹೌದು. ಇನ್ನೊಂದು ನೆಲೆಯಲ್ಲಿ, ಈ ಕಥೆಯು ಭಾರತೀಯ ಸಂಸ್ಕೃತಿ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳ ನಡುವಿನ ಸಂಘರ್ಷವನ್ನು ಧ್ವನಿಸುತ್ತದೆ.

'ಗೋಕುಲ ನಿರ್ಗಮನ'ದ ಪ್ರಾರಂಭ ಹಾಗೂ ಅಂತ್ಯ ವರ್ತಮಾನದಲ್ಲಿದ್ದು; ಕಥೆಯ ಕನಸಿನ ಕಾಲ ಮಹಾಭಾರತ, ಭಾಗವತಗಳದ್ದಾಗಿದೆ. 'ನಾಂದಿ', 'ಭರತ ವಾಕ್ಯ'ಗಳನ್ನು ಹಾಡುವ ಕವಿ ಸೂತ್ರಧಾರನ ಕಾರ್ಯವನ್ನು ನಿರ್ವಹಿಸುತ್ತಾನೆ.


ಈ ಗೀತನಾಟಕ 'ಅಕ್ರೂರಾಗಮನ' ಹಾಗೂ 'ಗೋಕುಲ ನಿರ್ಗಮನ' ಎಂಬ ಎರಡು ಅವಸ್ಥೆಗಳಲ್ಲಿದೆ. ಕೊಳಲಗಾನ ಇಡೀ ಬೃಂದಾವನವನ್ನು ಆವರಿಸಿಕೊಂಡು ನಾಟಕ ಮೂಡಿಬರುತ್ತದೆ.

'ಮಂದಿಯ ಬಿಸದದ ನಟನೇ ನೀನು
ಸನ್ನೆಗೆ ಹಾಡುವ ಗಾಯಕನೇನು
ಅರಸರಂತೆ ಬಾಳ್ಗೊಳ್ಳುವ ಬಾರೈ
ಬಾ ಬಾ ಮಥುರೆಗೆ ಬಾ'

ಎಂದು ಆಮಿಷವನ್ನು ಒಡ್ಡುತ್ತಾ ಮಧುರೆಯ ಜಿಲ್ಲಹಬ್ಬದ ನಿಮಿತ್ತ ಬಲರಾಮ ಕೊಳಲನ್ನೇ ಕಿತ್ತೆಸೆಯುತ್ತಾನೆ. ಅದನ್ನು ಪ್ರಕೃತಿಯ ರಕ್ಷಣೆಯಲ್ಲಿರಿಸಿ ವ್ಯಥೆ ತುಂಬಿದ ಭಾರದಿಂದ ಕೊಳಲಿನಿಂದ ಬೀಳ್ಕೊಳ್ಳುತ್ತಾನೆ. ಗೋಕುಲದಲ್ಲಿ ನಂದಕುಮಾರನಾಗಿದ್ದವನು ಮಧುರೆಗೆ ಹೋಗುವಾಗ ವಾಸುದೇವನ ಸ್ಥಿತಿಗೇರುತ್ತಾನೆ. ಇನ್ನು ಮುಂದೆ ಕೊಳಲಿನ ನಾದ ಕೇಳಿ ಬರುವುದಿಲ್ಲವೆನ್ನುವ ವಿಷಾದ ಎಲ್ಲರನ್ನೂ ಆವರಿಸುತ್ತದೆ. ಈ ಭಾಗ ಕರುಳು ಮಿಡಿಯುವಂತೆ ವರ್ಣಿತವಾಗಿದೆ.

> **'ನೀನಂದು ಗೋಕುಲದಿ ಕೊಳಲ ಬಿಸುಟಂದದೊಳು**
> **ಭಾರತದ ಬಾಳ್ವೆ ಇರಲಿಂದ ರಸಬತ್ತಿ**
> **ಮರಳಿ ಬಹೆಯಾ ಕೊಳಲ ತುಟಿಗೆ ತಹೆಯಾ'**

ಎಂಬ ಕನಸಿನಿಂದ ಎಚ್ಚೆತ್ತ ಕವಿಯ ಹಂಬಲದಲ್ಲಿ, ಕೃಷ್ಣನ ಗೋಕುಲ ನಿರ್ಗಮನದಲ್ಲಿ ಪರದಾಸ್ಯದಲ್ಲಿ ಸಂಸ್ಕೃತಿಯ ನಾಶವನ್ನು ಅನುಭವಿಸಿ ಆರ್ತರಾದ ಭಾರತೀಯರ ಹಂಬಲದ ಸಂಕೇತವಿದೆ. ಮೋಡ ಕವಿದ ರಾತ್ರಿಯ ವರ್ಣನೆ ಕವಿಯ ವಿಷಣ್ಣ ಮನಸ್ಸಿನ ಸೂಚನೆಯೂ ಆಗಿದೆ.

೩. 

ನಾನು ಇಲ್ಲಿ 'ಶ್ರೀಹರಿಚರಿತೆ'ಯ ಕಾವ್ಯಖಂಡವನ್ನು ಗೀತನಾಟಕವಾದ 'ಗೋಕುಲ ನಿರ್ಗಮನ'ವನ್ನು ಎಲ್ಲ ಸ್ತರಗಳಲ್ಲಿ ತೌಲನಿಕವಾಗಿ ನೋಡುವ ಬದಲು ಎರಡೂ ಕೃತಿಗಳಲ್ಲಿ ಬರುವ ಕೆಲವು ಅಂಶಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸುತ್ತೇನೆ.

ರಾಧಾ-ಕೃಷ್ಣ-ವೇಣು ಇವು ಮೂರು ಅವಿಭಾಜ್ಯಗಳು. ಒಂದನ್ನು ಬಿಟ್ಟು ಒಂದಿಲ್ಲ. 'ಗೋಕುಲ ನಿರ್ಗಮನ'ದಲ್ಲಿ ಅತ್ಯಂತ ತಾದಾತ್ಮ್ಯತೆಯಿಂದ ಬೆಸೆದಿದ್ದ ಇವು, ಕ್ರೂರ ವಿಧಿಗೆ ಬಲಿಯಾಗಿ ಬೇರೆಯಾಗುತ್ತದೆ. 'ಶ್ರೀಹರಿ ಚರಿತೆ'ಯಲ್ಲಿ ವೇಣುಗಾನದ ವರ್ಣನೆಯಂತೂ ಇಡೀ ಕಾವ್ಯದ ತುಂಬ ಹೊಳಲಿಡುತ್ತದೆ.

'ಶ್ರೀಹರಿಚರಿತೆ'ಯುದ್ದಕ್ಕೂ ಕೃಷ್ಣನ ವೇಣುಗಾನದ ಸಂಮೋಹತೆ ಹಾಗೂ ಅದರಿಂದ ಅವನಿಗೆ ದೊರಕಿರುವ ಇಚ್ಛಾವೇಷಧಾರಣಾ ಶಕ್ತಿಯ ಬಣ್ಣನೆಗಳು ತುಂಬಿಕೊಂಡಿವೆ. ಅದೆಲ್ಲವನ್ನೂ ಪಟ್ಟಿ ಮಾಡುವ ಅವಶ್ಯಕತೆಯಿಲ್ಲ. ಆದರೆ ಕೃತಿಯ ಕೊನೆಗೆ ಈ ಕೊಳಲನ್ನು ಕೃಷ್ಣ ತ್ಯಜಿಸುತ್ತಾನೆ. ಕೃಷ್ಣನನ್ನು ಹೀಗೆ ವೇಣುಮುಕ್ತನನ್ನಾಗಿ ಮಾಡುವ ಉದ್ದೇಶವೇನು? ಅವನನ್ನು ಸಮಷ್ಟಿಯ ಹೊಣೆಯನ್ನು ಹೊರಲು ಸನ್ನದ್ಧನನ್ನಾಗಿಸುವುದು ಎಂದೇನಾದರೂ ವ್ಯಾಖ್ಯಾನಿಸಿದರೆ ಆಗ ಇಡೀ 'ಶ್ರೀಹರಿಚರಿತೆ'ಯ 'ವೇಣು ಪ್ರಸಂಗ'ಗಳೆಲ್ಲ ನಿರುಪಯುಕ್ತ ಹಾಗೂ ಮುಖ್ಯಾರ್ಥ ವಿರೋಧಿಗಳಾಗಿ ಬಿಡುತ್ತವೆ. ಈ ವೈಸಾದೃಶ್ಯವನ್ನು ಕೃತಿ ತನ್ನಲ್ಲೇ ಅಡಗಿಸಿಟ್ಟುಕೊಂಡಿರುವುದನ್ನು ಅಲ್ಲಗಳೆಯುವುದು ಸಾಧ್ಯವಾಗದು. ಇದೇ 'ಗೋಕುಲ ನಿರ್ಗಮನ'ದಲ್ಲಿ ಕೃಷ್ಣನ ವೇಣುತ್ಯಾಗದ ಪ್ರಸಂಗವನ್ನು ಅತ್ಯಂತ ಮಹತ್ವದ ಪ್ರತೀಕವನ್ನಾಗಿ ಬಳಸುತ್ತಾರೆ. 'ಶ್ರೀಹರಿಚರಿತೆ'ಯಲ್ಲಿನ ವೇಣುಪತನದ ವಿವರಗಳು ಪಡೆಯುವ ಅರ್ಥಗೌರವವನ್ನು ಗಮನಿಸಿದರೆ ಆ ವಿವರ ಒಂದು ತೊಡಕಾಗಿರುವುದು ಸ್ಪಷ್ಟವಾಗಿದೆ.

> **'ಅಣ್ಣ ಪುರದೊಳಗೇಕೆ ಈ ಕೊಳಲು? ನಾನಾದ್ದತ್ತಣ**
> **ಮೊಗಂ, ಹೊರಡುವೆನು ನಿನ್ನೊಡನೆ; ಗೆಳೆಯರುಂ ಬರಲೆಮ್ಮ ಜತೆಗೆ**
> **ಹಿಂತಿರುಗಿ ಬಹೆನೋ ಬಾರೆನೋ ಎಂಬ ಸಂದೆಗವೆನ್ನ**

**ತುಸು ಕಾಲ ವ್ಹೋಲಾಡಿಸಿತು ಅತ್ತಿತ್ತ, ಇಲ್ಲಿಯೇ ಇರಲಿ**
**ಈ ವಂಶ ನನ್ನಂಶ'**

ಎಂಬಲ್ಲಿ ಕೊಳಲನ್ನು ಮತ್ತೆ ಧರಿಸುವುದಿಲ್ಲ ಎಂಬ ಸೂಚನೆಯಿದೆ.

ಕೊಳಲು ಜಾರಿಬಿದ್ದಾಗ 'ಗೋಕುಲ ನಿರ್ಗಮನ'ದಲ್ಲಿ–

**'ಭಾವವಂಶವೇ ಕೊನೆಗಂಡಿತು ಎನೆ**
**ಘಾತವಾಯಿತೀ ವಂಶದ ಪಾತ'**

ಎಂಬ ಅಕ್ರೂರನ ಉದ್ಗಾರ ಈ ಸಂದರ್ಭದಲ್ಲಿ ಧ್ವನಿಪೂರ್ಣವಾಗಿದೆ.

ಕೃಷ್ಣನಿಗೆ 'ವೇಣು ಪತನ' ತನ್ನಂಗವೊಂದು ಹೋದಂತೆ; ತನ್ನಿರವಿನ ಒಂದಂಶ ತನ್ನನ್ನು ಬಿಟ್ಟಂತೆ ನೋವಿಗೆ ಕಾರಣವಾಗುತ್ತದೆ. ಇವಕ್ಕೆ ಮನಸ್ಸು ಮುದುಡಿಕೊಳ್ಳುತ್ತದೆ.

**'ಬಹನೋ ಬಾರನೋ ಬಲ್ಲನೇ – ವಿಧಿ**
**ಯಿತ್ತುದೊಲ್ಲೆನೆಂದೆಂಬೆನೇ**
**ಹಳುವೋ ಹೊಳಲೋ ಹರಿ ಕರೆವೆಡೆಗೋಗೊಡು**
**ತಡಿ ಮುಂದಿಡದೆಯೆ ಹಿಂದೆಗೆವೆನೆ ನಾ'**

ಎಂಬ ನುಡಿಯಲ್ಲಿ ಅವನ ಅಸಹಾಯಕತೆ, ಭವಿಷ್ಯದ ಅನಿರ್ದಿಷ್ಟತೆಯು ಅಡಗಿರುವುದರ ಜೊತೆಗೆ, ಗೋಕುಲದ ದೈವದಂತಿದ್ದ ಇವನು ದೈವ ಪ್ರೇರಣೆಯಂತೆ ನಡೆಯಬೇಕಾಗಿದೆ. ಇದು ಗೋಕುಲದ ಪರಿಸರವನ್ನೇ ಪರಕೀಯವಾಗಿಸಿದೆ. 'ಮರಳಿ ಬರುವೆನು' ಎಂಬ ಭರವಸೆಯ ಮಾತು ವ್ಯಂಗ್ಯವೆನಿಸುತ್ತದೆ.

'ಗೋಕುಲ ನಿರ್ಗಮನ'ದ ವೇಣುಪತನ ವಿಷಾದವನ್ನು ತರುವುದರ ಜೊತೆಗೆ ಸಮಕಾಲೀನ ದಾರುಣ ಪರಿಸ್ಥಿತಿಗೆ ಸಂಕೇತವಾಗಿದೆ ಎಂದು ಶ್ರೀ ಕೆ.ವಿ. ಸುಬ್ಬಣ್ಣ ವ್ಯಾಖ್ಯಾನಿಸುತ್ತಾರೆ.

ನಗರೀಕರಣ ದಾಳಿಗೆ ನಮ್ಮ ಹಳ್ಳಿಗಳ ಹೊಸ ಪ್ರಾಯದ ಮಕ್ಕಳು, ಕಣ್ಣಿನ ಗೊಂಬೆಗಳು ಕರುಳಿನ ಚೂರುಗಳು, ಹೊಕ್ಕಳಿನ ಮೊಗ್ಗುಗಳು, ಮಾಯಕದಲ್ಲಿ ಕಳೆದುಹೋಗುತ್ತಿರುವುದನ್ನು ನೆನೆಯುತ್ತ ಸುಯ್ಯುವ ಮುದುಕರ ಸಾಲುಚಿತ್ರ ಕಣ್ಣು ಕಟ್ಟುತ್ತದೆ. ಜಡಕಟ್ಟಳೆಗಳಿಂದ ಪಾರಾಗಿಕೊಳ್ಳುವ ಬಯಕೆ ಯುವಕರಲ್ಲಿ ಹುಟ್ಟಿ ವಲಸೆಬೇಕೆನ್ನಿಸಿರಬಹುದು.

'ಗೋಕುಲ ನಿರ್ಗಮನ'ದ ಇಡೀ ನಾಟಕವು ಆಧುನಿಕ ಕವಿಯೊಬ್ಬನಲ್ಲಿ ಆವಾಹಿತವಾಗುವ 'ಸ್ಮೃತಿ'ಯಾಗಿ ರೂಪುಗೊಂಡಿದೆ.

ಪ್ರಸ್ತುತ ಜಾಗತೀಕರಣದ ಹಿನ್ನೆಲೆಯಲ್ಲಿಯೂ 'ಗೋಕುಲ ನಿರ್ಗಮನ' ನಾಟಕವನ್ನು ಇಟ್ಟು ನೋಡಬಹುದು ಅಮೆರಿಕ ಮೊದಲಾದ ದೇಶಗಳ ಅಂಥ ಸಿರಿಗೆ ಆಕರ್ಷಿತರಾಗಿ ವಲಸೆಹೋದವರ 'ಕುಟುಂಬಪತನ'ದಿಂದ ಮಾನವೀಯ ಸಂಬಂಧಗಳು ಬೆಂದುಹೋದ ಮನೆ-ಮನಗಳು 'ವೇಣು ಪತನ'ದ ಗೋಕುಲವೇ ಆಗಿತ್ತು. ಮಾಹಿತಿ ತಂತ್ರಜ್ಞಾನದ ದೈತ್ಯ ಬೆಳವಣಿಗೆಯಲ್ಲಿ ಹೊಳೆಯುತ್ತಿರುವ ವಿದೇಶಗಳಿಗೆ ಗುಳೇ ಹೋಗುತ್ತಿರುವವರ 'ಕುಟುಂಬಪತನ' ಇನ್ನಷ್ಟು ರೌದ್ರವಾಗಿದೆ. ನೆನೆದರೆ ನಡುಕ ಉಂಟಾಗುತ್ತದೆ. ಇಲ್ಲೂ ಮುರಿದುಬಿದ್ದ ಮಾನವೀಯ ಸಂಬಂಧಗಳ ಆರ್ತನಾದ ಕೇಳಿ ಬರುತ್ತದೆ. ವಯಸ್ಸಾದ ತಂದೆ-ತಾಯಿಗಳ ನಿರೀಕ್ಷೆ; ಅನೈತಿಕ ಸಂಬಂಧಗಳು; ದಾರಿತಪ್ಪಿದ ಮಕ್ಕಳ ಕಥೆ; ಆತ್ಮಹತ್ಯೆಗಳ ನೋವು, ಹಣದ ಹಿಂಸೆಯಿಂದ ಬಂಜೆಯಾದ ಎಲ್ಲ ಸಮಾಜಗಳು ಮೌಲ್ಯಗಳ ಪತನದಿಂದ ತತ್ತರಿಸಿವೆ. ಇದೊಂದು ಕಠಿಣ ದಿವ್ಯ.

'ಗೋಕುಲ ನಿರ್ಗಮನ'ದಂಥ ಕೃತಿಗಳು ನನ್ನ ಊರಿಗೆ ನನ್ನ ನಾಡಿಗೆ ಈಗ ಮುಖ್ಯವಾಗುತ್ತದೆ. ಅವು ನಮ್ಮನ್ನು ಸ್ಮೃತಿ ದೀಪ್ತಗೊಳಿಸುತ್ತವೆ. ಬದುಕಿನ ಶೋಧನೆಯಲ್ಲಿ ನಿರತರಾಗುತ್ತೇವೆ.

ಇನ್ನೂ ಕೆಲವು ಅಂಶಗಳನ್ನು ಸೂಚಿಸುತ್ತೇನೆ.

- 'ಗೋಕುಲ ನಿರ್ಗಮನ' ರಚನೆ ಪು.ತಿ.ನ. ಅವರ ತಾರುಣ್ಯದಲ್ಲಿ ಮೂಡಿಬಂದಿದೆ. ಸೃಜನಶೀಲತೆಯ ತಾಜಾತನ ಅದರಲ್ಲಿ ಕಾಣಬಹುದು.

  'ಶ್ರೀ ಹರಿಚರಿತೆ' ಪು.ತಿ.ನ. ತುಂಬಿದ ವಯಸ್ಸಿನಲ್ಲಿ ರಚಿಸಿದರು. ಕುಗ್ಗಿದ ಸೃಜನಶೀಲತೆಯನ್ನು ಕಾಣಬಹುದು. ಈ ಸಂದರ್ಭದಲ್ಲಿ ಮಾಸ್ತಿಯವರ 'ಶ್ರೀರಾಮಪಟ್ಟಾಭಿಷೇಕ' ಕೃತಿಯನ್ನು ಜ್ಞಾಪಿಸಿಕೊಳ್ಳಬಹುದು.

- 'ಗೋಕುಲ ನಿರ್ಗಮನ' ಭಾವಗೀತೆ, ಹಾಡುಗಳ ಅಪೂರ್ವ ಸಂಕಲನ. ಪಾತ್ರಗಳಲ್ಲಿ ಭಾವಗಳ ತೀವ್ರತೆಯನ್ನು ಗಮನಿಸಬಹುದು.


  'ಶ್ರೀಹರಿಚರಿತೆ'ಯಲ್ಲಿ ಭಾವ ತರಂಗಗಳು ಕಾಣುವುದಕ್ಕಿಂತ ವಿಚಾರಗಳ ನೇರ ಮಂಡನೆ ಹೆಚ್ಚಾಗಿ ಕಂಡುಬರುತ್ತದೆ.

- 'ಗೋಕುಲ ನಿರ್ಗಮನ'ದಲ್ಲಿ ನಾಟಕೀಯತೆಯ ವಿಚಿತ ಸಾಧ್ಯತೆಯನ್ನು ಸ್ಪಷ್ಟವಾಗಿ ಕಾಣಬಹುದು. ಆದರೆ 'ಶ್ರೀಹರಿಚರಿತೆ'ಯಲ್ಲಿ ಕೇವಲ ಘಟನೆಗಳಿಂದ ಕೂಡಿದ, ನಾಟಕೀಯವಲ್ಲದ ನಿರೂಪಣೆಯ ಅಂಶವೇ ಅಧಿಕವಾಗಿದೆ.

- 'ಗೋಕುಲ ನಿರ್ಗಮನ'ದಲ್ಲಿ ಸಂಕೇತಗಳ ಮೂಲಕ ಸೂಚಿತವಾಗುವ ಆಧುನಿಕತೆ ಕಂಡುಬರುತ್ತದೆ. 'ಶ್ರೀಹರಿಚರಿತೆ'ಯಲ್ಲಿ ಎಲ್ಲವನ್ನು ನೇರವಾಗಿ ಹೇಳಿಬಿಡುವ, ವಿವರಿಸುವ, ವ್ಯಾಖ್ಯಾನಿಸುವ ಮನಃಸ್ಥಿತಿಯನ್ನು ಕಾಣಬಹುದು.

- 'ಗೋಕುಲ ನಿರ್ಗಮನ'ದಲ್ಲಿ ವಿಡಿಸಲ್ಲದ ಕನ್ನಡ, ಸಂಸ್ಕೃತ ಭಾಷೆ ಸಂಗೀತದಿಂದ ಹದಗೊಂಡು ಮುದನೀಡುತ್ತದೆ.

  ಆದರೆ 'ಶ್ರೀಹರಿಚರಿತೆ'ಯಲ್ಲಿ ಹಳಗನ್ನಡ, ನಡುಗನ್ನಡ- ಹೊಸಗನ್ನಡ-ಸಂಸ್ಕೃತ ಬೆರೆತ ಭಾಷೆ ಹಿಡಿಯುತ್ತದೆ. ಓದು ನಿಂತು ನಿಂತು ಸಾಗುತ್ತದೆ.



ಈ ಲೇಖನವನ್ನು ಸಿದ್ಧಪಡಿಸುವಾಗ ಡಾ|| ಎಚ್.ಎಸ್. ರಾಘವೇಂದ್ರ ರಾವ್ ಅವರ 'ಹಾಡೇ ಹಾದಿಯ ತೋರಿತು' ಮತ್ತು ಡಾ|| ಡಿ. ಮಂಗಳಾಪ್ರಿಯದರ್ಶಿನಿಯವರು ಸಂಪಾದಿಸಿರುವ 'ಶ್ರೀಹರಿಚರಿತೆ ಒಂದು ಸಮೀಕ್ಷೆ' ಕೃತಿಗಳಿಗೆ ಋಣಿಯಾಗಿದ್ದೇನೆ. ಜೊತೆಗೆ ಎಚ್.ಎಸ್.ಆರ್. ಅವರೊಡನೆ ನಡೆಸಿದ ಸಂವಾದದ ಸಾರವನ್ನೂ ಇಲ್ಲಿ ಬಳಸಿಕೊಂಡಿದ್ದೇನೆ.

---

೨೧(ಲ), ಚಿರಂಜೀವಿ, ಹಳೇ ಈಜುಕೊಳದ ರಸ್ತೆ
ಕೋದಂಡರಾಮಪುರ, ಮಲ್ಲೇಶ್ವರಂ
ಬೆಂಗಳೂರು – ೫೬೦ ೦೦೩

# ಒಂಟಿತನದ ಕವಿತೆ

ಆಂತೋನಿಯೋ ಜಸಿಂತೋ
ಅಂಗೋಲಾ

ಇದು ಇನ್ನೂ ನನ್ನ ಕವಿತೆ ಅಲ್ಲ.
ನನ್ನ ರಕ್ತದ ಕವಿತೆ, ನನ್ನ ಆತ್ಮದ ಕವಿತೆ,
ಇಲ್ಲಿ ಇಲ್ಲ.
ನನ್ನ ಕವಿತೆಯನ್ನು ಬರೆಯಲು ಬೇಕಾದ
ತಿಳಿವಳಿಕೆಗೆ ನನಗಿಲ್ಲ. ಎದೆ ಸೀಳಿ ಪದಪಡೆಯುವ ಶಕ್ತಿ ಇಲ್ಲ.
ಆದರೂ ಆ ಕವಿತೆ ನನ್ನ ಮನ ಮನೆಯಲಿ ನರಳುತ್ತಿದೆ, ಅರಳುತ್ತಿದೆ.

ನನ್ನ ಕವಿತೆ, ಗುರಿಯಿಲ್ಲದೆ ಅಲೆಯುತ್ತಿದೆ.
ಹೊಲಗಳಲ್ಲಿ, ನಗರದಲ್ಲಿ
ಗಾಳಿಯುಸಿರ ದನಿಗಳಲ್ಲಿ
ಕಡಲೊಡಲಿನ ಕುದಿತದಲ್ಲಿ
ಕನಸಿನಲ್ಲಿ, ಬದುಕಿನಲ್ಲಿ
ನನ್ನ ಕವಿತೆ ಗುರಿಯಿಲ್ಲದೆ ಅಲೆಯುತ್ತಿದೆ

ಅಗೋ, ನನ್ನ ಕವಿತೆ ಮನೆ ಬಿಟ್ಟಿತು
ಸರಕು ಹಿಡಿದು, ಹಲವು ಬಣ್ಣ
ತನ್ನನೆ ತಾನು ಮಾರಿದೆಯಣ್ಣ
'ನಿಂಬೇ ಅಣ್ಣೋ ರುಪಾಯ್ಗೆ ನಾಕೂ ನಿಮ್ಮಣ್ಣೋ'

ಗಲ್ಲಿಗಲ್ಲಿಗಳಲ್ಲಿ ತಿರುಗಿದೆ ನನ್ನ ಕವಿತೆ
ತಲೆಯ ಮೇಲೆ ಕೊಳೆತ ಸಿಂಬಿ
ಮಾರುತ್ತಿದೆ ತನ್ನ ನಂಬಿ :
'ಬಂಗ್ಡೇ, ಬಾಳೇ, ಕರ್ಮೀನೂ
ಒಳ್ಳೇ ಮೀನೂ, ಮೀನ್ಸಮ್ಮಾ ಮೀಈಈನುಊಊಊ'

ಬೀದಿಗಳಲ್ಲಿ ಕಾಲೆಳೆದಿದೆ ನನ್ನ ಕವಿತೆ
'ಪ್ರಜಾವಾಣೀ, ಜನವಾಣೀ, ತಾಯಿನಾಡೂ
ಪೇಪರ್ ಪೇಪರ್ ಪೇಪರ್'
ಎಲ್ಲಿ ಪತ್ರಿಕೆಗಳಲ್ಲಿ ನನ್ನ ಕವಿತೆ ಕಾಣೆ.



೨೬

ಬೀದಿ ಬೀದಿ ಸೇರುವಲ್ಲಿ ನನ್ನ ಕವಿತೆ.
'ನಾಳಿಆಳೆ ಡ್ರಾ ನಾಳಿಆಳೆ ಡ್ರಾ
ಕರ್ನಾಟಕ ರಾಜ್ಯ ಲಾಟರಿ'
ಭಾಗ್ಯ ಚಕ್ರ ಎಷ್ಟು ತಿರುಗಿದರೂ ಅಷ್ಟೆ
ಹೇಗೆ ತಿರುಗಿದರೂ ಅಷ್ಟೆ
ನನ್ನ ಕವಿತೆಯ ಪಾಡು ಇಷ್ಟೆ
'ನಾಳಿಆಳೆ ಡ್ರಾ ನಾಳಿಆಳೆ ಡ್ರಾ'

ಬಡಾವಣೆಯಿಂದ ಬಂತು ಬಡಕಲು ಕವಿತೆ
'ಶನಿವಾರ ಕೊಳೇ ಬಟ್ಟೆ
ಸೋಮವಾರ ಒಗೆದ ಬಟ್ಟೆ
ಶನಿವಾರ ಬಟ್ಟೆ ಜೊತೆಗೆ ತನ್ನನ್ನೂ ಕೊಟ್ಟೆ
ಸೋಮವಾರ ತನ್ನ ಜೊತೆಗೆ, ತೆಗೆದುಕೊಳ್ಳಿ ಬಟ್ಟೆ'


ನನ್ನ ಕವಿತೆ
ಧೋಬಿಯ ಮಗಳ ನರಳು ಮುಲುಕಿನಲ್ಲಿ
ಕದ ಹಾಕಿದ ಕೋಣೆಯಲ್ಲಿ
ಮುದಿಬಾಸಿನ ಹಿಡಿತದಲ್ಲಿ
ನಾಚಿ ನಾಚಿ ಅರಳುತಿರುವ
ಹದಿಹರೆಯ ವಿಲಯದಲ್ಲಿ
ನನ್ನ ಕವಿತೆ.

ನನ್ನ ಕವಿತೆ ಸೂಳೆ.
ಹಳೆಹಳ್ಳಿಯ ಗುಡಿಸಿಲುಗಳ
ಮುರಿದ ಕದದ ಮುಂದೆ ನಿಂತು,
'ಬ್ಯಾಗ ಬ್ಯಾಗ ಬ್ಯಾಗ
ಕಾಸು ಮೊದಲು ಮಡಗಿ
ಬನ್ನಿ, ಮಲಗಿ, ಹುಡುಗಿ!'
ನನ್ನ ಕವಿತೆ ಸೂಳೆ

ಆಗ ಈಗ ನನ್ನ ಕವಿತೆ ನಗೆ ಹುಯ್ಯಲು, ಗುಡುಗು
'ತೆಂಡೂಲ್ಕರ್ ಸೆಂಚುರಿ, ಗಂಗೂಲಿಯ ನೋಡಿರಿ'
ಬೀದಿ ಬದಿಯ ಟೀವಿ ಮುಂದೆ ವಿಷಲ್ ಹೊಡೆವ ಕವಿತೆ.



ಜೀತದಾಳು ನನ್ನ ಕವಿತೆ
ಕಾಫಿ ತೋಟದ ನಡುವೆ ಕುಸಿದು ಕುಳಿತೆ
'ಜೀತದ ಕೆಲಸ ಬಲು ಭಾರ
ಕೂಲಿ ಕೆಲಸ ಬಲುಭಾರ'



ನನ್ನ ಕವಿತೆ ನಡೆಯುತ್ತದೆ ಬಂದರ ಕಡೆಗೆ
ಖಾಲಿ ಹಡಗು ತುಂಬುತ್ತದೆ, ಹಾಡು ಅದರ ನಡಿಗೆ
'ಇನ್ನೂ ಸ್ವಲ್ಪ ಐಸಾ,
ಎತ್ತುಊಊ ಮೇಐಐಲೆ ಐಸಾ'

ನನ್ನ ಕವಿತೆ ಸೆರೆಯಾಗಿದೆ. ಅದರ ಸುತ್ತ ಹಗ್ಗ
ಪೊಲೀಸರ ಪಹರೆಯಲ್ಲಿ ಅದರ ಬದುಕು ಅಗ್ಗ

ರಸ್ತೆ ಕೆಲಸ ಮಾಡುತ್ತಿದೆ
ತಲೆಕೂದಲ ಕೊಯ್ಲಾಗಿದೆ
ರೆಕ್ಕೆ ಪುಕ್ಕ ಕಿತ್ತ ಕೋಳಿ
ಹೊರೆಹೊರೆ ಹೊರೆ ಭಾರ ತಾಳಿ
ಚಾವಟಿಗಳ ಸಂಗೀತವ
ಆಗೋ ಕೇಳಿ ಕೇಳಿ

ನನ್ನ ಕವಿತೆ ಪೇಟೆಗೆ ಹೋಗುತ್ತದೆ, ಅಡಿಗೆ ಮಾಡುತ್ತದೆ
ದುಡಿಯುತ್ತದೆ, ಪಡಖಾಲೆ ಜೈಲುಗಳ ತುಂಬುತ್ತದೆ.
ಅದು ಹರಕಲು, ಅದು ಬಡಕಲು ಅದು ಹಸಿದ ಒಡಲು
ಅದಕ್ಕೆ ತನ್ನ ಪಾಡು ತಿಳಿಯದು
ವಾದ ಮಾಡಲು ಅದಕೆ ಬರದು

ನನ್ನ ಕವಿತೆ ಕಲಿತಿದ್ದು
ತನ್ನನ್ನು ಕೊಡುವುದನ್ನ
ತಲೆ ಬಗ್ಗಿಸಿ ಇರುವುದನ್ನ
ಅಗುಳು ಕೂಡ ಕೇಳದಣ್ಣ.

ಆದರೆ ಈಗ ನನ್ನ ಕವಿತೆ ಕರ್ಮವಾದಿಯಲ್ಲ
ಅದು ಬಯ್ಯುವ ಕವಿತೆ, ಕನಸುವ ಕವಿತೆ
ತಿಳಿವಳಿಕೆ ತುಂಬಿರುವ ಪಕ್ವಕವಿತೆ
ನನ್ನ ಕವಿತೆ, ನಾನು-ಬಿಳಿ
ಅದರ ಕುದುರೆ ಈ ಕವಿ-ಕರಿ
ಇಗೊ ಮೊದಲಾಯಿತು ನಮ್ಮ ಸವಾರಿ
ಬಿಡಿ ಬಿಡಿ ಬಿಡಿ ಬಿಡಿ ದಾರಿ.



ಅನುವಾದ : ಡಾ. ಹೆಚ್. ಎಸ್. ರಾಘವೇಂದ್ರ ರಾವ್

# ಜೀತದಾಳಿನ ಒಂದು ಪತ್ರ

■ ಆಂತೋನಿಯೋ ಜಸಿಂತೋ
ಅಂಗೋಲಾ

ನನ್ನ ಪ್ರೀತಿಯ ಹೆಣ್ಣೆ
ನಿನಗೊಂದು ಪತ್ರವನು ಬರೆಯಬೇಕೆಂದಿದ್ದೆ ನಾನು.
ನಿನ್ನ ಕಾಣುವ ನನ್ನ ಈ ಬಯಕೆಯನ್ನು
ಕಳೆದುಕೊಳ್ಳುವೆನೆಂಬ ಸುಡುವ ಭಯವನ್ನು
ಜಗವೆಲ್ಲ ಬೇಕೆನುವ ಈ ಕರುಣೆಯನ್ನು
ಹೆಸರಹೇಳದೆ ಸುಳಿವ ಈ ರೋಗವನ್ನು
ನನ್ನೊಳಗೆ ತುಂಬಿರುವ. ನಾನೆ ಶರಣಾಗಿರುವ, ಹುಟ್ಟು ಹೊಳೆಯುತಿರುವ
ಅತಿ ಮೂಕದ ಕಥೆಯನ್ನು... ...

ನನ್ನ ಪ್ರೀತಿಯ ಹೆಣ್ಣೆ
ನಿನಗೊಂದು ಪತ್ರವನು ಬರೆಯಬೇಕೆಂದಿದ್ದೆ ನಾನು.
ಒಳಗರಳಿ ಹುದುಗಿರುವ ಗುಟ್ಟುಗಳ ಪತ್ರ
ನಿನ್ನ ನೆನಪುಗಳಿಂದ ತುಂಬಿರುವ ಪತ್ರ
ನೀನೇ ಆ ಪತ್ರ.
ಮದರಂಗಿ ಕಂಪಿರುವ ನಿನ್ನ ತುಟಿಗಳ ಕುರಿತು
ಎರೆಮಣ್ಣ ಕರಿಚೆಲುವು, ನಿನ್ನ ಕೂದಲ ಕುರಿತು
ಜೇನುಹನಿ ಸಿಹಿಸುಖದ ನಿನ್ನ ಕಂಗಳ ಕುರಿತು
ಕಾಡಕಿತ್ತಲೆ ಬಿಗುಹು ಮೊಲೆಮೊಲೆಯ ಕುರಿತು
ಚಿರತೆ ನಡಿಗೆಯ ಕದ್ದ ಕಾಲುಗಳ ಕುರಿತು
ಅಲ್ಲಲ್ಲಿ ಹುಡುಕಿದರು ಎಲ್ಲಿಯೂ ಸಿಗದಿರುವ
ಮೃದುಬಿಸಿಯ ಬಿಸಿ ಮೃದುವ ಕೊಡುವಾ ಮೈಕುರಿತು... ...

ನನ್ನ ಪ್ರೀತಿಯ ಹೆಣ್ಣೆ
ನಿನಗೊಂದು ಪತ್ರವನು ಬರೆಯಬೇಕೆಂದಿದ್ದೆ ನಾನು.
ಮರುಳು ಮಾತಿನಲ್ಲಿ ಕಳೆದ ದಿನಗಳನ್ನು
ಇರುಳಕೂಟವನ್ನು ಕಳೆದ ಹೊಲಗಳನ್ನು
ಪ್ಲಂ ಮರಗಳ ನೆರಳ ಜಳಕ ತೊಳೆದ ಮೈಗಳನ್ನು

ಪಾಮ್ ಎಲೆಗಳ ನಡುವೆ ಸುರಿದ ಬೆಳುದಿಂಗಳ ಹೊಳೆಯನ್ನು
ಬೆದೆ ತುಂಬಿದ ಬದುಕನ್ನು
ಕಹಿತುಂಬಿದ ಅಗಲಿಕೆಯನು
ಮರಳಿ ತರುವ ಪತ್ರ...

ನನ್ನ ಪ್ರೀತಿಯ ಹೆಣ್ಣೆ
ನಿನಗೊಂದು ಪತ್ರವನು ಬರೆಯಬೇಕೆಂದಿದ್ದೆ ನಾನು.
ನಿಟ್ಟುಸಿರಿರದೆ ನೀನು ಕೂಡ ಓದಲಾರದಂಥ ಪತ್ರ
ಅಪ್ಪ ಬಾಂಬೊ ಅಮ್ಮ ಕಿಯೆಜ್ಞ ನೋಡಬಾರದಂಥ ಪತ್ರ
ಗೋರಿಥಂಡಿ ಮರೆವು ಬರದೆ ಓದಿ ಓದಿ ನಲಿವ ಪತ್ರ
ನನ್ನ ನಿನ್ನ ಊರುಗಳಲಿ ಸರಿಮಿಗಿಲೇ ಇರದ ಪತ್ರ... ...

ನನ್ನ ಪ್ರೀತಿಯ ಹೆಣ್ಣೆ
ನಿನಗೊಂದು ಪತ್ರವನು ಬರೆಯಬೇಕೆಂದಿದ್ದೆ ನಾನು.
ಸುಳಿಗಾಳಿಯ ಅಲೆ ಸವಾರಿ ಮಾಡಿಬರುವ ಪತ್ರ
ಕಾಡುಕೋಣ, ಕಾಫಿಯ ಮರ, ನದಿನದಗಳ ಮೀನುಮೊಸಳೆ
ಎಲ್ಲ ಬಲ್ಲ ಪತ್ರ.
ಗಾಳಿ ಅದನು ಕಳೆಯಿತೆನ್ನು ಈ ಗಿಡಮರ ಪ್ರಾಣಪಕ್ಷಿ
ಕರುಣೆಯಿಂದ ತುಂಬಿದಕ್ಕಿ
ತಂದು ಅದನು ಒಪ್ಪಿಸುವ್ರುವ್ರು.
ಹಾಡಿನಿಂದ ಹಾಡಿಗೆ,
ನೋವಿನಿಂದ ನೋವಿಗೆ,
ತೊದಲು ನುಡಿಯ ತವಕದಿಂದ.
ಮಿಡಿವ ಕಿವಿಯ ಬಯಲಿಗೆ
ಬೆಂಕಿ ಹೃದಯ. ಸುಡುವ ನುಡಿಯು
ಎಲ್ಲ ಎಲ್ಲ ಹಾಗೆ ಹಾಗೆ
ಒಲವಿನ ಬಗೆ ಹೀಗೆ.. ...



ನನ್ನ ಪ್ರೀತಿಯ ಹೆಣ್ಣೆ
ನಿನಗೊಂದು ಪತ್ರವನು ಬರೆಯಬೇಕೆಂದಿದ್ದೆ ನಾನು.
ಆದರಯ್ಯೋ ಒಲವೆ, ನಾನಿದನು ಅರಿಯೆ
ಯಾಕೆ ಯಾಕೆ ಇದು ಯಾಕೆ ಹೀಗೆ?
ನೀನು ಇದನು ಓದಲಾರೆ.
ಮತ್ತು ನಾನು.
ಹಾ ದುಃಖವೇ ಹೋ ಒಲವೇ
ಏನನ್ನೂ ಬರೆಯಲಾರೆ.

ಅನುವಾದ : ಡಾ. ಹೆಚ್. ಎಸ್. ರಾಘವೇಂದ್ರ ರಾವ್

ನಂ. ೭, ಶ್ರೀಮಾತಾ, ೧೫ನೇ ಕ್ರಾಸ್
ಜೆ.ಪಿ. ನಗರ, ೫ನೇ ಹಂತ
ಬೆಂಗಳೂರು - ೫೬೦ ೦೭೮

# ನಾನು ಓದಿದ ಪದ್ಯಗಳು

■ ಸುಗತ ಶ್ರೀನಿವಾಸರಾಜು

## ಯುವ ಕವಿಗಳಿಗೆ

ನಿಮಗಿಷ್ಟ ಬಂದಂತೆ ಬರೆಯಿರಿ
ಶೈಲಿ ಯಾವುದಾದರೇನು, ಎಲ್ಲವೂ ಸರಿಯೆ
ಸೇತುವೆಯ ಅಡಿಯಲ್ಲಿ ಸಾಕಷ್ಟು ರಕ್ತ ಹರಿದಿದೆ
ಈ ದಾರಿಯೊಂದೇ ಸರಿ ಎಂದು ಹಟ ಹಿಡಿಯುವುದಕ್ಕೆ.
ಕಾವ್ಯದಲ್ಲಿ ಎಲ್ಲಕ್ಕೂ ಅನುಮತಿ ಇದೆ
ಆದರೆ ಶರತ್ತು ಮಾತ್ರ ಒಂದಿದೆ :
ನಿಮ್ಮ ಮುಂದೆ ಹರಡಿರುವ ಬಿಳಿಯ ಹಾಳೆ
ಬರಿಯದಾಗಿ ಉಳಿಯಬಾರದು ಅಷ್ಟೆ

## ಸಂಸ್ಕಾರ

ಊರಿನಿಂದ ಬಹಳ ದಿನ ಹೊರಗಿದ್ದು ಹಿಂತಿರುಗಿದಾಗಲೆಲ್ಲ
ನಾನು ಮೊದಲು ಮಾಡುವ ಕೆಲಸ
ಸತ್ತವರ ಕುರಿತು ವಿಚಾರಿಸುವುದು.
ಸಾಯುವ ಸರಳ ಕ್ರಿಯೆಯಿಂದ
ಪ್ರತಿಯೊಬ್ಬ ಮನುಷ್ಯನೂ ಹೀರೋ ಆಗುತ್ತಾನೆ
ಹೀರೋಗಳೆಲ್ಲರೂ ನಮ್ಮ ಗುರುಗಳು

ಸತ್ತವರ ನಂತರ ನಾನು ವಿಚಾರಿಸುವುದು
ಗಾಯಗೊಂಡವರನ್ನು

ಈ ಸಣ್ಣ ಶಾಸ್ತ್ರ ಮುಗಿದ ನಂತರ ಮಾತ್ರ
ನಾನು ಬದುಕುವ ಹಕ್ಕನ್ನು ಚಲಾಯಿಸುವುದು:
ಕುಡಿಯುತ್ತೇನೆ, ತಿನ್ನುತ್ತೇನೆ, ಆರಾಮಿಸುತ್ತೇನೆ
ಕಣ್ಣನ್ನು ಮುಚ್ಚುತ್ತೇನೆ, ಎಲ್ಲವೂ ಸ್ಪಷ್ಟವಾಗಿ ಕಾಣಲೆಂದು
ಅಸೂಯೆಯಿಂದ ಗುನುಗುತ್ತೇನೆ
ಶತಮಾನದಂಚಿನಲ್ಲಿ ಬರೆದ ಹಾಡೊಂದನು.

ಮೂಲ : **ನಿಕನಾರ್ ಪಾರ**

(ನೆರೂಡಾನ ನಂತರ ಚಿಲಿ ದೇಶದ ಬಹಳ ದೊಡ್ಡ ಕವಿ.
ಗಣಿತ ಮತ್ತು ಭೌತಶಾಸ್ತ್ರದ ಪ್ರಾಧ್ಯಾಪಕ)

# ನನ್ನ ಓದುಗ

ನನಗೆ ಎಂತಹ ಓದುಗ ಬೇಕು?
ನನ್ನನ್ನು ಪ್ರೀತಿಯಿಂದ ಅರಿಯುವವನಾಗಬೇಕು
ನಾನು ಇಂದು ಬರೆದದ್ದರಲ್ಲಿ ಅವನು ನಾಳೆ ಕಾಣುವವನಾಗಬೇಕು
ಏಕೆಂದರೆ, ಅವನ ಹೆಜ್ಜೆಗಳು ನನ್ನ ಹಾಗೆಯೇ
ಶೂನ್ಯದಲ್ಲಿ ಸ್ವತಂತ್ರವಾಗಿ ಸುತ್ತಾಡುತ್ತವೆ.

ಅವನಿಗೆ ತಾಳ್ಮೆ ಇರಬೇಕು, ಮತ್ತೆ ಅವನಿಗೆ ಮಾತ್ರ ಸಾಧ್ಯ
ಇನ್ನೂ ನಿಃಶಬ್ದವಾಗಿರುವುದಕ್ಕೆ ಶಬ್ದಾಕಾರ ಕೊಡಲು
ಮತ್ತೆ, ಅವನು ಮಾತ್ರ ಕಾಣಲು ಸಾಧ್ಯ, ನನ್ನ ಹಾಗೆ
ನೀತಿ ಕತೆಯ ಚೌಕಟ್ಟಿನ ಹೊರಗೂ
ಜಿಂಕೆ ಹುಲಿಯ ಪಕ್ಕ ಹುಲ್ಲು ಮೇಯುವುದನ್ನು!

ಮೂಲ : **ಅಟ್ಟಿಲ್ಲ ಜೋಸೆಫ್**
(೩೨ನೇ ವಯಸ್ಸಿನಲ್ಲಿ ಗೂಡ್ಸ್ ಬಂಡಿಗೆ ತಲೆಗೊಟ್ಟು ಆತ್ಮಹತ್ಯೆ ಮಾಡಿಕೊಂಡ ಹಂಗೇರಿ ದೇಶದ ಕವಿ)

# ಕನಸುಗಳಿಗೆ ಸಮಯ ಯಾವುದಯ್ಯ?

ಒಂದಾದ ಮೇಲೊಂದು, ಟ್ಯಾಂಕುಗಳನೇರಿ
ಬರುತ್ತವೆ, ಗಾಳಿಯ ಗಲಭೆಯಲ್ಲಿ,
ಬಿರುಗಾಳಿಯಲ್ಲಿ ಇವು ವಿರಮಿಸುವ ತಾಣಗಳು
ಪ್ರಶಾಂತತೆಯಲ್ಲಿ ಇವು ಅತೃಪ್ತ ಚಿಹ್ನೆಗಳು
ರಕ್ತಪಾತದ ನಡುವೆ
ಅಡಗಿ ಕೂತಿರುವ ಇವುಗಳ ಹೊಳಪು
ಒಮ್ಮೊಮ್ಮೆ ಫಳಫಳಿಸುತ್ತವೆ
ಕನಸುವುದಕ್ಕೆ ಸಮಯ ಯಾವುದಯ್ಯ?
ಯಾವ ಕ್ಷಣಕೂ ಸಾಧ್ಯವಿಲ್ಲ
ಎಲ್ಲ ಕ್ಷಣಕೂ ಲಭ್ಯ

ಮೂಲ : **ಪೌಲ್ ವಿಯೆನ್**
(ಜರ್ಮನಿ ಕವಿ)

# ನಾನು

ನನ್ನ ಹೋರಾಟದ ಸಮಯ ಬಂದಾಗ
ನಾನು ಯಾರು ತಡೆದರೂ ನಿಲ್ಲುವುದಿಲ್ಲ
ಯಾರು ಅತ್ತರೂ ಕೇಳಿಸಿಕೊಳ್ಳುವುದಿಲ್ಲ, ನಿನ್ನದೂ ಕೂಡ
ಹೋಗಿ, ಅಳುವವರೆಲ್ಲ ನೀವು ದೂರ ಸರಿಯಿರಿ!

ನಾನು ಇಲ್ಲಿ ಕಾಡುಮೃಗ
ಎಲ್ಲ ಸ್ನೇಹಿತರಿಂದ, ಸಂಬಂಧಿಕರಿಂದ ದೂರ
ಗುಂಡು ನನ್ನ ಚರ್ಮದೊಳಗೆ ನುಸುಳಬಹುದು
ಆದರೆ ನಾನು ಸುಲಭವಾಗಿ ಸೋಲನೊಪ್ಪುವುದಿಲ್ಲ
ನನ್ನ ಗಾಯಗಳನ್ನು, ನನ್ನ ನೋವನ್ನು ಧರಿಸುತ್ತ ಹೋರಾಡುತ್ತೇನೆ
ಹೋರಾಡುತ್ತೇನೆ. ನೋವೆಂಬುದು ಇಲ್ಲವಾಗುವವರೆಗು
ಇನ್ನಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳುವುದಿಲ್ಲ
ನಾನು ಒಂದು ಸಾವಿರ ವರ್ಷ ಬದುಕಬಯಸುತ್ತೇನೆ.


ಮೂಲ : **ಚಾಯ್‌ರಿಲ್ ಅನ್ವರ್**

(ಇಂಡೋನೇಷಿಯಾದ ಕವಿ. ಕೆಲ ಕಾಲ ಪತ್ರಿಕೆಯೊಂದರ ಸಂಪಾದಕನಾಗಿ ಕೆಲಸ ಮಾಡಿದ. ಆದರೆ ಜನ ಅವನನ್ನು ಕವಿಯಾಗಿ ನೆನೆಯುತ್ತಾರೆ. ೩೮ನೇ ವಯಸ್ಸಿನಲ್ಲಿ ಸಿಫಿಲಿಸ್, ಟೈಫಸ್ ಮತ್ತು ಟ್ಯೂಬರ್‌ಕಿಲೋಸಿಸ್‌ನಿಂದ ತೀರಿಕೊಂಡ.)



ಔಟ್‌ಲುಕ್ ಪತ್ರಿಕೆ, ೩೦೫, ರೀಜೆನ್ಸಿ ಎನ್‌ಕ್ಲೇವ್,
೪, ಮಗ್ರತ್ ರಸ್ತೆ, ಬೆಂಗಳೂರು - ೫೬೦ ೦೨೫





# ನನ್ನ ತಂದೆ ಶ್ರೀರಂಗ

✦ ಶಶಿದೇಶಪಾಂಡೆ

ಕಳೆದ ವರ್ಷದ ಅಕ್ಟೋಬರ್ ೧೭ರಂದು ನನ್ನ ತಂದೆ ತಮ್ಮ ಅಂತಿಮ ಗುರಿಯತ್ತ ನಡೆಸಿದ ಕಡೆಯ ಪ್ರಯಾಣದ ದಿನ. ಆ ದುಃಖದಲ್ಲೂ ನನಗೆ ಇದ್ದಕ್ಕಿದ್ದಂತೆ ಒಂದು ಯೋಚನೆ ಬಂತು. ಇಲ್ಲಿನ ಒನ್‌ವೇ ಬೀದಿಯಲ್ಲಿ ನನ್ನ ತಂದೆ ವಿರುದ್ಧ ದಾರಿಯನ್ನು ಹಿಡಿದು ನಡೆದಿದ್ದರು. ಆದರೂ, ಪೊಲೀಸ್‌ನವರು ಅತ್ಯಂತ ವಿಧೇಯತೆಯಿಂದ, ಉಳಿದೆಲ್ಲ ವಾಹನ ಸಂಚಾರವನ್ನು ತಡೆದು ಸೆಲ್ಯೂಟ್ ಮಾಡುತ್ತ ಪ್ರಯಾಣಕ್ಕೆ ಅನುಗೊಳಿಸುತ್ತಿದ್ದರು. ತಾನಿದ್ದಷ್ಟು ದಿನವೂ ನಿಯಮಾತೀತನಾಗಿರುವುದನ್ನೇ ರೂಢಿಸಿಕೊಂಡಿದ್ದ ನನ್ನ ತಂದೆ ಈ ಪರಿಸ್ಥಿತಿಯಿಂದ ಎಷ್ಟೊಂದು ಸಂತುಷ್ಟನಾಗಿರಬಹುದು ಎಂದು ನನಗೆ ಅನ್ನಿಸಿತು. 'ಈ ಬಗ್ಗೆ ಅವರೊಂದಿಗೆ ಮಾತನಾಡಬೇಕು. ಅವರಿಗಂತೂ ತುಂಬಾ ನಗು ಬರುತ್ತದೆ' ಎಂಬ ಆಲೋಚನೆ ನನಗೇ ಅರಿಯದಂತೆ ನನ್ನಲ್ಲುಂಟಾಯಿತು; ಆದರೆ ಮತ್ತೊಂದು ಕ್ಷಣದಲ್ಲಿ ದುರ್ದಮ ವಾಸ್ತವ ಬಹು ಕಟುವಾಗಿ ನನ್ನ ಗೊಂದಲವನ್ನು ಸರಿಸಿಹಾಕಿತು. ನಾನು ಆ ದಾರುಣ ಸತ್ಯವನ್ನು ಎದುರಿಸಲೇಬೇಕಾಯಿತು.

ಇದೇ ದಿನಕ್ಕೆ ಸರಿಯಾಗಿ ಮೂರು ವಾರಗಳ ಹಿಂದಷ್ಟೆ ಸೆಪ್ಟೆಂಬರ್ ೨೬ ರಂದು, ನನ್ನ ತಂದೆಗೆ ಎಂಭತ್ತು ತುಂಬಿತು. ಈ ಹಿಂದಿನ ರಾತ್ರಿ ಒಬ್ಬ ಪೊಲೀಸ್ ಅಧಿಕಾರಿ ನಮ್ಮಲ್ಲಿ

ಒಂದು ಮಾರನೆಯ ಬೆಳಗ್ಗೆ ಮುಖ್ಯಮಂತ್ರಿಗಳು ತಮ್ಮನ್ನು ಕಾಣಲು ಬರುವವರಿದ್ದಾರೆ ಎಂದು ನಮ್ಮ ತಂದೆಗೆ ಹೇಳಿದರು. "ಇದೇ ಮನೆಗೆ ಇದೇ ವ್ಯಕ್ತಿಗೆ ಈ ಸಂದೇಶ ಎಂಬುದರ ಬಗ್ಗೆ ನಿಮಗೆ ಖಾತರಿ ಇದೆಯೇನು?" ಎಂದು ಅವರು ಹಾಸ್ಯ ಮಾಡಿದರು. ಹುಟ್ಟುಹಬ್ಬದ ಶುಭಾಶಯಗಳನ್ನು ಹೇಳಲಿಕ್ಕಾಗಿ ಯಾರಾದರೂ ಬರುತ್ತಾರೆಂದರೆ ಅವರಿಗೆ ಬಲು ಮುಜುಗರವೆನ್ನಿಸುತ್ತಿತ್ತು. ನನಗೆ ನೆನಪಿದೆ. ಅಂದು ಅವರನ್ನು ಕಾಣಲು ವಿಪರೀತ ಜನ ಬಂದಿದ್ದರು. ಡಾಕ್ಟರುಗಳಂತೂ ವಿಪರೀತ ಮಾತನಾಡಿ ಆಯಾಸ ಮಾಡಿಕೊಳ್ಳಬಾರದೆಂದು ನನ್ನ ತಂದೆಗೆ ಎಚ್ಚರಿಸಿದ್ದರೇನೋ ಹೌದು. ಆದರೆ, ತನ್ನನ್ನು ಕಾಣಲು ಬಂದವರನ್ನು ಹಾಗೆಯೇ ಕಳುಹಿಸಿ ಬಿಡುವುದೆಂದರೆ ಅವರಿಗೆ ಆಗುತ್ತಲೇ ಇರಲಿಲ್ಲ. ಅವರಲ್ಲೂ ಹಾಗೆ ಕಾಣಬಂದವರು ನಾಟಕಕ್ಕೋ ಅಥವಾ ಇನ್ನಾವುದೇ ಸಾಮಾಜಿಕ ವಿಷಯಗಳಿಗೋ ಸಂಬಂಧಿಸಿದವರಾದರಂತೂ ಸರಿಯೇ ಸರಿ. ಆ ದಿನ ಅವರಿಗಾದ ಆಯಾಸ ಅಷ್ಟಿಷ್ಟಲ್ಲ. ನಡುರಾತ್ರಿಯಲ್ಲಿ ವಿಪರೀತವಾದ ಎದೆನೋವಿನ ಬಾಧೆಯಿಂದ ಎದ್ದು ಕುಳಿತರು. ಇಷ್ಟಾದರೂ ನನ್ನಮ್ಮ ಆತಂಕದಿಂದ ನನ್ನನ್ನು ಎಚ್ಚರಿಸಬೇಕೆಂದುಕೊಂಡಾಗ ಅವರು ಬಿಡಲೇ ಇಲ್ಲ. 'ಏನೂ ಆಗಿಲ್ಲ ಸುಮ್ಮನಿರು ಎಲ್ಲ ಸರಿ ಹೋಗುತ್ತದೆ' ಎಂದುಬಿಟ್ಟರು. ನಂತರದ ಒಂದೆರಡು ದಿನಗಳಲ್ಲಿ ತಮ್ಮ ಮಿತ್ರನೊಂದಿಗೆ ನಡೆದದ್ದನ್ನು ವಿವರಿಸುತ್ತಾ, ಅಂದು ತಮಗುಂಟಾದದ್ದು ಸಹನಾತೀತವಾದ ಯಾತನೆ ಎಂಬುದನ್ನೇನೋ ಹೇಳಿದರು. "ನನ್ನ ಕತೆ ಮುಗಿಯಿತು ಎಂದೇ ತಿಳಿದಿದ್ದೆ. ನನ್ನ ಸಾವಿನ ದಿನ ನನ್ನ ಹುಟ್ಟಿದ ದಿನವಂದೇ ಬಂದದ್ದು ಒಂದು ವಿಚಿತ್ರ ಎಂದು ಕಾಣಿಸಿತು" ಎಂದು ಕೂಡ ಹೇಳಿದರು.

ಈ ಮಾತೆಂದರೆ, ಹಾಗಾ ನಮ್ಮ ತಂದೆಗೇ ಮೀಸಲಾದದ್ದು... ಜೀವನದ ಎಲ್ಲ ವಿಚಿತ್ರಗಳನ್ನು ತನ್ನದೇ ಆದ ರೀತಿಯಲ್ಲಿ ಬಹು ಸೂಕ್ಷ್ಮವಾಗಿ ಪರಿಗಣಿಸುತ್ತಿದ್ದರು... ಪರಮ ಯಾತನೆಯ ಆ ಕ್ಷಣದಲ್ಲೂ ತೀರಾ ಅನುದ್ವಿಗ್ನರಾಗಿದ್ದರು. ಅಷ್ಟೇ ಅಲ್ಲ, ಆಮೇಲೆ ಅದನ್ನು ತೀರಾ ಲಘುವಾಗಿ ಪರಿಗಣಿಸಿ ಅದೂ ಒಂದು ತಮಾಷೆಯ ಸಂಗತಿಯೇನೋ ಎಂಬಂತೆ ಅದನ್ನೇ ಹಾಸ್ಯ ಮಾಡಿದರು. ನನ್ನ ತಂದೆಯ ಜೀವನವನ್ನು ಪರಿಭಾವಿಸಿದಷ್ಟೂ ಆತನ ವೈವಿಧ್ಯಮಯ ವ್ಯಕ್ತಿತ್ವವು ಹಂತಹಂತಗಳಲ್ಲಿ ಗೋಚರಿಸುತ್ತದೆ. ನೋಡುತ್ತ ಹೋದಷ್ಟೂ ಅದು ಬಹು ಸಂಕೀರ್ಣವೂ ಹೌದು ಎನ್ನುವುದು ತಿಳಿಯುತ್ತಿದೆ. ಅವರ ಸಾವಿನ ನಂತರದಲ್ಲಿ ಲೆಕ್ಕವಿಲ್ಲದಷ್ಟು ಸಂತಾಪ ಸೂಚಕ ಸಂದೇಶಗಳು ಹರಿದುಬರುತ್ತಿರುವ ಸಮಯದಲ್ಲಿ ನನಗೊಂದು ವಿಚಿತ್ರ ಅನಿಸಿಕೆಯಾಗುತ್ತಿದೆ. ಈ ಎಲ್ಲ ಬರವಣಿಗೆಗೆ ಮೂಲಕಾರಣನಾದ ನನ್ನ ತಂದೆ, ತನ್ನನ್ನ ಕುರಿತು ಬಹು ತೀವ್ರವಾದ ಪ್ರಶಂಸೆಗಳನ್ನು ಒಳಗೊಂಡ ಈ ಬರವಣಿಗೆಗಳನ್ನು ನೋಡಿ ನನ್ನ ಕುರಿತು ನಗುತ್ತಿರಬಹುದೇ? ತನ್ನನ್ನು ಶಬ್ದಗಳಲ್ಲಿ ಹಿಡಿಯಲಾಗದ ಅವರೆಲ್ಲರ ಅಸಾಮರ್ಥ್ಯವನ್ನು ಕುರಿತು ತುಂಟತನದಿಂದ ಪರಿಹಾಸ್ಯ ಮಾಡುತ್ತಿರಬಹುದೇ?

ಹೊರ ಜಗತ್ತಿನ ಪಾಲಿಗೆ ಆತ ಮೊದಲಿಗೆ ಒಬ್ಬ ಲೇಖಕ, ನಾಟಕಕಾರ, ಕಾದಂಬರಿಕಾರ, ವಿಮರ್ಶಕ, ವಿದ್ವಾಂಸ. ಆಮೇಲೆ ಆತನೊಬ್ಬ ಕ್ರಾಂತಿಕಾರಿ. ಕೊನೆಯದಾಗಿ, ಸಮಾಜ ಜೀವನದಲ್ಲಿ ಆಸಕ್ತಿಯುಳ್ಳ ಒಬ್ಬ ವ್ಯಕ್ತಿ. ಆತನಿಗೆ ನೆಚ್ಚಿನವರು, ಸ್ನೇಹಿತರು ಎಷ್ಟುಮಂದಿಯೋ ಅಷ್ಟೇ ಮಂದಿ ಶತ್ರುಗಳೂ ಇದ್ದರು. ನಮಗೆ, ಅಂದರೆ ನಮ್ಮ ಸಂಸಾರದವರಿಗೆ ಅವರು ಏನಾಗಿದ್ದರು ಎಂದು ಹೇಗೆ ಬಣ್ಣಿಸಲಿ? ಜೀವನದ ಬಗ್ಗೆ ಅದಮ್ಯವಾದ ಆಸಕ್ತಿಯುಳ್ಳ ಆತ, ಸಂತೋಷದ ಎಲ್ಲ ಸಣ್ಣಪುಟ್ಟ ಕ್ಷಣಗಳನ್ನೂ ಬಿಡದೆ ಬಲು ತೀವ್ರವಾಗಿ ಅನುಭವಿಸಿ ಆನಂದಿಸುತ್ತಿದ್ದ ವ್ಯಕ್ತಿ. ಜೀವನದ ದಾರುಣ ಕ್ಷಣಗಳಲ್ಲೂ ತನ್ನ ಹಾಸ್ಯ ಪ್ರಜ್ಞೆಯನ್ನು ಎಂದೂ ಕಳೆದುಕೊಳ್ಳಲಿಲ್ಲ. ಬಹು ಭಾವಜೀವಿ. ಆತ್ಮವಿವೇಚನೆಯನ್ನೆಂದೂ ಬಿಟ್ಟವರಲ್ಲ. ತನಗೆ ಉಂಟಾದ ಬೇಸರ, ಕೋಪತಾಪಗಳನ್ನು

ಬಚ್ಚಿಟ್ಟುಕೊಳ್ಳುವುದು ಅವರಿಗೆ ಸಾಧ್ಯವೇ ಆಗುತ್ತಿರಲಿಲ್ಲ. ಅದನ್ನು ಹೊರಗೆಡವಿಯೇ ಅವರು ನಿರಾಳವಾಗುತ್ತಿದ್ದರು. ಅವರಿದ್ದಷ್ಟು ದಿನವೂ ಅತ್ಯಂತ ಚಟುವಟಿಕೆಯಿಂದ ಇದ್ದು ತಮ್ಮ ಬುದ್ಧಿ ನಿರಂತರವಾಗಿ ಸಚೇತನವಾಗಿರುವಂತೆ ನಡೆಸಿಕೊಂಡರು. ತಾವಿದ್ದ ಈ ಜಗತ್ತಿನ ಬಗ್ಗೆ ಕುಂದದ ಆಸಕ್ತಿ ಅವರ ವಯಸ್ಸನ್ನೂ ಮುಚ್ಚಿಡುತ್ತಿತ್ತು.

ಅವರ ಜೀವನದಲ್ಲಿ ಹೊರಜಗತ್ತಿಗೆ ಕಾಣುವುದಕ್ಕೂ ಅವರ ಸ್ವಂತ ವ್ಯಕ್ತಿತ್ವಕ್ಕೂ ಅದೆಷ್ಟೋ ವೈರುಧ್ಯಗಳಿದ್ದವು. ಹೊರ ಜಗತ್ತಿನಲ್ಲಿ ಆತ ಪ್ರಕಾಂಡ ಪಂಡಿತನೆಂದೂ, ಬಲು ಸರಳ ಎತ್ತರದ ಬುದ್ಧಿಜೀವಿಯೆಂದೂ ಪ್ರಸಿದ್ಧರಿದ್ದರೇನೋ ನಿಜ. ಆದರೆ, ದಿನನಿತ್ಯದ ಜೀವನದಲ್ಲಿ ಅವರದು ಬಲು ಸರಳ ಜೀವ. ಮಗುವಿನಂತಹ ನಡವಳಿಕೆ. ಬಲು ಕೋಪಿಷ್ಠನೆಂದು ಹೊರಗೆ ಅವರು ಪ್ರಸಿದ್ಧರಾಗಿದ್ದರೆ, ಮನೆಯವರೇ ಅವರ ಕೋಪವನ್ನು ಕಂಡದ್ದು ಬಲು ಅಪರೂಪ. ಅಷ್ಟೇ ಅಲ್ಲ ನಾವುಗಳ್ಯಾರಾದರೂ ಕೋಪಗೊಂಡಿದ್ದರೆ ಸಮಾಧಾನಗೊಳಿಸುತ್ತಿದ್ದವರೇ ಅವರು. ಅಸಂಬದ್ಧವಾದ ಕೋಪತಾಪಗಳೇನಾದರೂ ಇದ್ದರೆ ಬಲು ತರ್ಕಬದ್ಧವಾಗಿ, ಸಕಾರಣವಾಗಿ ಅವುಗಳನ್ನು ವಿಶ್ಲೇಷಿಸಿ ವೈಮನಸ್ಯಗಳುಂಟಾಗದಂತೆ ತಡೆಯುತ್ತಿದ್ದರು. ಕೋಪದಲ್ಲಿ ಯಾರಾದರೂ ಏನಾದರೂ ಅಂದರೂ ಸಹ ನಕ್ಕು ಸುಮ್ಮನಾಗಿಬಿಡುತ್ತಿದ್ದರು. ಹೀಗೆಂದಾಗ ನನಗೊಂದು ಘಟನೆ ನೆನಪಾಗುತ್ತಿದೆ. ಒಮ್ಮೆ ನನ್ನ ಮಗ ನನ್ನ ತಂಗಿಯ ಮಗಳೊಂದಿಗೆ ಜಗಳವಾಡುತ್ತಿದ್ದ. ಅಂದು ಅವಳ ಅರಂಗೇಟ್ರಂ ಸಮಾರಂಭ ಬೇರೆ ಇತ್ತು. ಜಗಳದಲ್ಲಿ ನನ್ನ ಮಗನ ಕೋಪ ನೆತ್ತಿಗೇರಿ, 'ನಿನ್ನ ತಲೆ ಒಡೀತೀನಿ' ಅಂದ. ಅಲ್ಲೇ ಇದ್ದ ನಮ್ಮ ತಂದೆ, 'ಧಾರಾಳವಾಗಿ ಒಡಿ. ಆದರೆ ಈಗ ಬೇಡ. ಅವಳ ಡಾನ್ಸ್ ಮುಗೀಲಿ' ಅಂದರು.

ಅವರು ಎಷ್ಟೊಂದು ಸ್ವಾಭಿಮಾನಿ ಎಂದರೆ ಕೆಲವರಿಗೆ ಅದು ಅತಿರೇಕವಾಗಿಯೇ ತೋರುತ್ತಿತ್ತು. (ಹಾಗೆ ನೋಡಿದರೆ ಯಾವ ಲೇಖಕ ತಾನೇ ಸ್ವಾಭಿಮಾನಿಯಲ್ಲ?) ಆದರೆ ಅವರಿಗೆ ಅನ್ವಯಿಸಿ ಹೇಳುವುದಾದರೆ, ಅವರು ತಮ್ಮನ್ನೂ ತಮ್ಮ ಸಾಮರ್ಥ್ಯವನ್ನೂ ಕುರಿತು ಬಲು ಸ್ಪಷ್ಟವಾಗಿ ಅರ್ಥಮಾಡಿಕೊಂಡೇ ಸ್ವಾಭಿಮಾನಿಯಾಗಿದ್ದರು. ತಾವೇನೆಂಬುದು ಅವರಿಗೆ ಸ್ಪಷ್ಟವಾಗಿ ತಿಳಿದಿತ್ತು. ಅವರ ಬಗ್ಗೆ ಇರುವ ಒಂದುಕತೆ ಇದನ್ನು ನನಗೆ ಮನದಟ್ಟು ಮಾಡಿಬಿಟ್ಟಿದೆ. ಅವರು ಕಾಲೇಜಿನಲ್ಲಿ ಮೇಷ್ಟರಾಗಿದ್ದ ದಿನಗಳ ಮಾತು. ಒಮ್ಮೆ ಅವರ ಡಿಪಾರ್ಟ್‌ಮೆಂಟಿನ ಪ್ರೊಫೆಸರ್ ಅಲ್ಲಿ ಬಂದ ಅತಿಥಿಯೊಬ್ಬರಿಗೆ ತಮ್ಮನ್ನು ಪರಿಚಯಿಸಿಕೊಳ್ಳುತ್ತ 'ನಾನು ಈ ವಿಭಾಗದ ಹೆಡ್' ಎಂದರು. ನನ್ನ ತಂದೆಗೆ ಯಾಕೋ ಚುಚ್ಚಿದಂತಾಯಿತೆನಿಸುತ್ತದೆ. ಅವರು ಬಲು ಶಾಂತವಾಗಿ, 'ಮತ್ತು ನಾನು ಇಲ್ಲಿನ ಮಿದುಳು' ಎಂದು ಹೇಳಿ ಪರಿಚಯವನ್ನು ಪೂರ್ಣಗೊಳಿಸಿದರು.

ಆದರೆ, ಹೀಗೆ ಅವರ ವ್ಯಕ್ತಿತ್ವದಲ್ಲಿ ಕಾಣಬರುತ್ತಿದ್ದ ವೈರುಧ್ಯಗಳು ಮೇಲುನೋಟಕ್ಕೆ ಮಾತ್ರವೇ ವೈರುಧ್ಯಗಳು. ಅಂತರಾಳದಲ್ಲಿ ಆತನಲ್ಲಿ ಯಾವ ಸಂದೇಹಗಳಾಗಲೀ, ವೈರುಧ್ಯಗಳಾಗಲೀ ಇರಲೇ ಇಲ್ಲ. ತಾನು ಮಾಡುತ್ತಿರುವುದೇನು, ಏನು ಮಾಡಬೇಕೆಂದಿದ್ದೇನೆ, ಹಾಗೂ ತಾನು ಎತ್ತ ಸಾಗುತ್ತಿದ್ದೇನೆ ಎಂಬ ಸಂಗತಿಗಳ ಬಗ್ಗೆ ಅವರಿಗೆ ಬಲು ಸ್ಪಷ್ಟವಾಗಿ ತಿಳುವಳಿಕೆ ಇತ್ತು. ಸಮಗ್ರತೆ ಎಂಬುದು ಅವರ ಜೀವನಾಡಿಯಾಗಿತ್ತು. ಇಂತಹ ಪರಿಪೂರ್ಣತೆಯ ಅರಿವಿನಿಂದಲೇ ಏನೋ, ಅವರು ಸಾಯುವ ಕೆಲವೇ ದಿನಗಳ ಮುಂಚೆ, 'ನನ್ನ ಕೆಲಸ ಎಲ್ಲ ಆಯಿತೆಂದೇ ತೋರುತ್ತೆ. ನಾನು ಏನೆಲ್ಲ ಮಾಡಬೇಕೆಂದಿದ್ದೆನೋ ಮಾಡಿ ಮುಗಿಸಿದ್ದೇನೆ. ಇನ್ನೂ ಹಲವು ವರ್ಷಗಳ ಕಾಲ ನಾನು ಬದುಕಬೇಕಾಗಿ ಬಂದರೆ, ಜನ ನನ್ನನ್ನು ಮರೆತೇಬಿಡುತ್ತಾರೆ. ಕೇವಲ ಮ್ಯೂಸಿಯಂನ ಒಂದು ವಸ್ತುವಾಗಿ ಬಿಡುತ್ತೇನಷ್ಟೆ' ಎಂದು ನಮಗೆ ಹೇಳಿದರು.

ಅವರಲ್ಲಿ ಕಹಿ ಎಂಬುದೇ ಇರಲಿಲ್ಲ. ಸ್ವಾನುಕಂಪವೂ ಇರಲಿಲ್ಲ. ಇತರರ ಬಗ್ಗೆ ಕೋಪದ್ವೇಷಗಳೂ ಇರಲಿಲ್ಲ. ತಮಗೆ ಕಡೆಗಾಲದ ದಿನಗಳಲ್ಲಿ ಒಮ್ಮೆ ನನ್ನೊಂದಿಗೆ ಆಡಿದ ಮಾತುಗಳು ನೆನಪಾಗುತ್ತಿದೆ... "ನೋಡು, ವಿಚಿತ್ರವಾದರೂ ಬಹು ಸತ್ಯವಾದ ಮಾತೊಂದಿದೆ. ನಾನು ಎಷ್ಟೆಲ್ಲ ಸಂಸ್ಥೆಗಳಲ್ಲಿ ದುಡಿದೆ, ಎಷ್ಟೆಲ್ಲ ಸಂಸ್ಥೆಗಳಿಗೆ ಸಹಾಯ ಮಾಡಿದೆ. ಆ ಎಲ್ಲ ಸಂಸ್ಥೆಗಳೂ ನನ್ನನ್ನು ಹೊರಹಾಕಿದವು. ನಾನು ಎಷ್ಟೋ ಜನರಿಗೆ ಸಹಾಯ ಮಾಡಿದ್ದೇನೆ. ಅವರಲ್ಲಿ ಬಹುತೇಕ ಎಲ್ಲರೂ ನನ್ನನ್ನು ಇಂದು ವಿರೋಧಿಸುವವರೇ ಆಗಿದ್ದಾರೆ. ಆದರೆ, ಪ್ರಪಂಚ ಇರುವುದೇ ಹಾಗೆ ಅಲ್ಲವೇ?" ಈ ಮಾತುಗಳನ್ನಾಡಿದಾಗ ಅವರಲ್ಲಿ ಖಂಡಿತವಾಗಿಯೂ ಕಹಿಯಾದ ಯಾವ ಭಾವನೆಗಳೂ ಇರಲಿಲ್ಲ. ಬಹುಮಟ್ಟಿಗೆ ತಮ್ಮ ಕೊನೆಯುಸಿರಿನವರೆಗೂ ಅವರು ಎಲ್ಲವನ್ನು ತಮಾಷೆಯೇ ಎಂಬಂತೆ ಕಾಣಬಲ್ಲವರಾಗಿದ್ದರು. ತಮ್ಮ ಬಗ್ಗೆ ತಮ್ಮ ಸಮಸ್ಯೆಗಳ ಬಗ್ಗೆ ಸಹ ಹೀಗೆಯೇ ನಡೆದುಕೊಂಡರು. ಒಂದು ಸಮಾರಂಭದ ವಿಚಾರವಾಗಿ ನಗೆಯಾಡುತ್ತಾ, 'ವೇದಿಕೆಯ ಮೇಲಿದ್ದ ನಾವೆಲ್ಲರೂ ಕಿವುಡರೇ ಆಗಿದ್ದುದು ಒಂದು ಸುದೈವ. ಯಾರೂ ಯಾರ ಭಾಷಣಗಳನ್ನೂ ಕೇಳಬೇಕಾಗಿರಲಿಲ್ಲ' ಎಂದಿದ್ದರು. ಕಳೆದ ಆಗಸ್ಟನಲ್ಲಷ್ಟೇ ಯಾರೋ ಒಬ್ಬರ ಬಗ್ಗೆ ಲೇಖನವನ್ನು ಬರೆಯಬೇಕಾಗಿ ಬಂದಾಗ ಅಂತಹ ಬರವಣಿಗೆಗಳಿಗಾಗಿ ತಮ್ಮ ಶಕ್ತಿಯನ್ನು ವ್ಯಯಿಸುವುದು ನ್ಯಾಯಸಮ್ಮತವೆಂಬ ಅಭಿಪ್ರಾಯವನ್ನು ಹೇಳುತ್ತ, "ಈಗ ನಾನು ಬೇರೆಯವರ ಬಗ್ಗೆ ಬರೆದರೆ ತಾನೇ, ನಾನು ಹೋದ ಮೇಲೆ ಅವರು ನನ್ನ ಬಗ್ಗೆ ಏನಾದರೂ ಸ್ವಲ್ಪ ಒಳ್ಳೆಯದನ್ನು ಬರೆಯುವುದು?" ಎಂದು ಕೇಳಿದ್ದರು.

ತಮ್ಮ ಜೀವಿತ ಕಾಲದಲ್ಲಿ ಎಷ್ಟೋ ಕಷ್ಟಕಾರ್ಪಣ್ಯಗಳನ್ನು ಎದುರಿಸಿದರು. ಅದನ್ನು ಸಾಧ್ಯವಾದಷ್ಟೂ ತೋರ್ಪಡಿಸದೆಯೇ ಬಾಳಿದರೆನ್ನುವುದು ಆಶ್ಚರ್ಯದ ಸಂಗತಿ. ಬಂದದ್ದೆಲ್ಲವನ್ನೂ ನುಂಗಿಕೊಂಡರೇ ಹೊರತು, ಅವರ ನೋವು, ಸಂಕಟಗಳನ್ನು ಹೊರಗೆಡಹಿದ್ದು ಬಲು ಅಪರೂಪ. ಅವಿರತವಾಗಿ, ಸಕ್ರಿಯವಾಗಿ ನಡೆಯುತ್ತಿರುವುದೇ ಅವರ ಜೀವನವಾಗಿತ್ತು. ಒಮ್ಮೆ ಮಹಿಳೆಯರ ಸಮಸ್ಯೆಗಳನ್ನು ಕುರಿತಂತಹ ಒಂದು ಲೇಖನ ಪತ್ರಿಕೆಯಲ್ಲಿ ಬಂದಿದ್ದನ್ನು ತೋರಿಸಿ, "ಇವರೇ ಏನಾದರೂ ಮಾಡಬಾರದೇಕೆ? ಸುಮ್ಮನೆ ಮಾತು, ಮಾತು. ಇಲ್ಲವೇ ಬರೆದುಬಿಡುವುದು. ಇಷ್ಟಾದರೆ ಸಾಕೇ? ಯಾರೂ ಏನನ್ನೂ ಮಾಡುವುದಿಲ್ಲವೇಕೆ?" ಎಂದು ಕೇಳಿದರು.

ಇಷ್ಟೆಲ್ಲ ಹೇಳಿದೆನಾದರೂ, ಅವರ ಕೊನೆಗಾಲದ ಕೆಲವು ತಿಂಗಳುಗಳಲ್ಲಿ ಯಾವುದೋ ಒಂದು ವ್ಯಥೆಯ ಭಾವ ಅವರನ್ನು ಆವರಿಸಿತ್ತೆನ್ನುವುದು ನಿಜ. ಅವರ ಆಪ್ತ ಸ್ನೇಹಿತರಾದ ಡಾ. ಶಿವರಾಂ ಹಾಗೂ ವಿ. ಸೀತಾರಾಮಯ್ಯನವರ ಮರಣ ಅವರನ್ನು ಅಲುಗಾಡಿಸಿಬಿಟ್ಟಿತು. 'ನಾನು ಏಕಾಕಿಯಾಗಿಬಿಟ್ಟೆ. ನನ್ನನ್ನು ಒಬ್ಬನನ್ನೇ ಹಿಂದೆ ಉಳಿಸಿಬಿಟ್ಟರು' ಎಂಬ ಮಾತುಗಳನ್ನು ಪದೇಪದೇ ಅನ್ನುತ್ತಿದ್ದರು.

ದೇಶದಲ್ಲಿನ ಪರಿಸ್ಥಿತಿ, ತಮ್ಮ ಸುತ್ತಲಿನ ಸಮಾಜದ ಸ್ಥಿತಿಗತಿಗಳ ಬಗ್ಗೆ ಅವರಲ್ಲಿ ಉಕ್ಕುತ್ತಿದ್ದ ಕೋಪ ನಿಧಾನವಾಗಿ ನಿರಾಶೆಯಾಗಿ ಪರಿವರ್ತನೆಯಾದಂತಿತ್ತು. ಅವರನ ನಾಟಕ 'ಅಗ್ನಿಸಾಕ್ಷಿ'ಯನ್ನು ನೋಡಿದಾಗ ನನಗೇ ಏಕೋ ಒಂದು ವಿಧವಾಗಿ ಭಾಸವಾಯಿತು. ಈ ನಾಟಕದಲ್ಲಿ ಬರುವ ಚಿಕ್ಕಮ್ಮ ಅವರ ಇತರ ನಾಟಕಗಳಲ್ಲಿ ಬರುವ ಸ್ತ್ರೀ ಪಾತ್ರಗಳಿಗಿಂತ ತೀರಾ ಭಿನ್ನಳಾದವಳು. ಅವರ ಬಹುತೇಕ ನಾಟಕಗಳಲ್ಲಿನ ಎಲ್ಲ ಸ್ತ್ರೀ ಪಾತ್ರಗಳೂ ಕೋಮಲ ಮಾತೃಹೃದಯಿಗಳು. ಈ ಚಿಕ್ಕಮ್ಮನೋ ತೀರಾ ಕ್ರೂರಿ, ದುಷ್ಟಳು. ಕೋಮಲತೆಯ ಅಂಶವೂ ಅವಳಲ್ಲಿ ಕಾಣದು. ಇನ್ನೆಂತಹ ನಿರಾಶೆಯ ಅಂತರಾಳದಿಂದ ಇಂಥದೊಂದು ಪಾತ್ರವನ್ನು ಅವರು ಸೃಷ್ಟಿಸಿದರು ಎಂದು ನಾನು ವಿಸ್ಮಿತಳಾದೆ. ಈ ಆಶ್ಚರ್ಯ ನನ್ನನ್ನು ತೀವ್ರವಾಗಿಯೇ ಕಾಡಿತು. ಬೇರೆಯವರನ್ನು ಚಕಿತರನ್ನಾಗಿ ಮಾಡಿಬಿಡುವುದು ಅವರಿಗೆ ಒಂದು ಸಾಮಾನ್ಯ

ಸಂಗತಿಯಾಗಿತ್ತೆನ್ನಿ. ನನ್ನ ದೊಡ್ಡ ಮಗ ಅವರ ಬಗ್ಗೆ ಹೇಳುತ್ತಿದ್ದ ಮಾತುಗಳು ನೆನಪಾಗುತ್ತವೆ. ಮಾದರಿ ಪ್ರಶ್ನೆಗಳ ಒಂದು ಗಣಿತದ ಪ್ರಶ್ನಪತ್ರಿಕೆಯನ್ನು ಮೊದಲಬಾರಿಗಷ್ಟೇ ನೋಡುತ್ತಿದ್ದ ಅವರು ನನ್ನ ಮಗನಿಗಿಂತಲೂ ಬಹುಬೇಗನೆ ಅದನ್ನು ಉತ್ತರಿಸಿಬಿಟ್ಟಿದ್ದರು.


ಕೊನೆಯವರೆಗೂ ಅವರು ಬಹಳವಾಗಿ ಹೆದರುತ್ತಿದ್ದದ್ದು ಒಂದೇ ವಿಷಯಕ್ಕಾಗಿ. ತಾವು ನಿಷ್ಕ್ರಿಯವಾಗಿ ಇರಬೇಕಾಗಿ ಬಂದುಬಿಟ್ಟರೆ ಅಥವಾ ಬೇರೆಯವರನ್ನು ಅವಲಂಬಿಸಿ ಬಾಳಬೇಕಾಗಿ ಬಂದರೆ ಎಂಬುದಕ್ಕೆ. ಆ ಭಯ ತೀರಾ ಸ್ವಾಭಾವಿಕವಾದದ್ದೇ ಎನಿಸುತ್ತದೆ. ೮೦ರ ಹತ್ತಿರ ಹತ್ತಿರದಲ್ಲೂ ಗಂಟೆಗಟ್ಟಲೆ ಕೆಲಸ ಮಾಡುತ್ತಿದ್ದುದನ್ನು ನೋಡುತ್ತಿದ್ದ ನಮಗೇ ಹಾಗನ್ನಿಸಿಬಿಡುತ್ತಿತ್ತು. ಈಗಲೂ ಅಂದಿನ ದಿನಗಳನ್ನು ನೆನಸಿಕೊಂಡರೆ ನನಗೆ ಅಭಿಮಾನವೆನಿಸುತ್ತದೆ. ಕೆಲಸಕ್ಕೆ ಕುಳಿತರೆಂದರೆ ಒಮ್ಮೆಲೆ ಆರೆಂಟು ಗಂಟೆಗಳ ಕಾಲ ಅದರಲ್ಲಿ ತೊಡಗುತ್ತಿದ್ದರು. ಅವರ ಆರೋಗ್ಯ ಅಷ್ಟೇನೂ ಚೆನ್ನಾಗಿಲ್ಲದಿದ್ದ ಕಾಲದಲ್ಲೂ ಇದೇ ಮುಂದುವರೆಯಿತೆಂಬುದು ಆಶ್ಚರ್ಯದ ಮಾತೇ ಸರಿ. ಇಷ್ಟಾದರೂ, ನಾಟ್ಯಶಾಸ್ತ್ರದಂತಹ ಒಂದು ಕೃತಿಯನ್ನು ಏಕಕಾಲಕ್ಕೆ ಇಂಗ್ಲೀಷ್‌ಗೂ ಕನ್ನಡಕ್ಕೂ ಅನುವಾದಿಸುವುದು – ಅದರಲ್ಲೂ ತೀರಾ ಏಕಾಕಿಯಾಗಿ ಯಾರ ನೆರವೂ ಇಲ್ಲದೆ – ಎಂದರೆ ಸಾಧಾರಣ ಮಾನವರಿಂದ ನೀಸುವಂತಹುದಲ್ಲ ಎಂದೇ ಹೇಳಬಹುದು. ತಮಗೆ ಉಳಿದಿರುವುದು ತೀರಾ ಅತ್ಯಲ್ಪಕಾಲ ಎಂಬ ಸಂಗತಿ ಅವರಿಗೆ ತಿಳಿದಿತ್ತೇನೋ ಎಂಬಷ್ಟರಮಟ್ಟಿಗೆ ಈ ಕಾರ್ಯದಲ್ಲಿ ಅವರು ಬಲು ತೀವ್ರವಾಗಿ ಮಗ್ನರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮುದ್ರಣಾಲಯದಲ್ಲೇನಾದರೂ ಸ್ವಲ್ಪ ನಿಧಾನಗತಿ ಕಂಡುಬಂದರೂ ಅವರು ವ್ಯಸ್ತರಾಗಿಬಿಡುತ್ತಿದ್ದರು. ತಮ್ಮ ಕಡೆಯಿಂದ ಯಾವ ರೀತಿಯಲ್ಲೂ ನಿಧಾನವಾಗಬಾರದೆಂಬುದಕ್ಕಾಗಿ ಕರಡು ಪ್ರತಿಗಳನ್ನು ತಿದ್ದುವಾಗ ನಡುರಾತ್ರಿಯವರೆಗೂ ಎಚ್ಚರವಿರುತ್ತಿದ್ದುದೂ ಉಂಟು. ತಮ್ಮಲ್ಲಿ ಉಳಿದಿರುವುದು ಬಹು ಅತ್ಯಲ್ಪಕಾಲ ಎಂಬಂತಹ ಈ ಆತುರದಿಂದ ಅವರು ವಿಪರೀತವಾಗಿಯೇ ಆಯಾಸಪಟ್ಟರು. ತಮಗುಳಿದಿರುವ ಕಾಲ ಕಡ ಪಡೆದಿರುವಷ್ಟೇ ಎಂಬಂತಹ ಆತಂಕ ಕಡೆಯ ತಿಂಗಳುಗಳಲ್ಲಿ ಅವರನ್ನು ಬಾಧಿಸಿದ್ದುಂಟು. ಹೆಚ್ಚಿಗೆ ಮಾತನಾಡಿ ಆಯಾಸ ಮಾಡಿಕೊಳ್ಳಬಾರದೆಂದು ಡಾಕ್ಟರುಗಳು ಹೇಳಿದ್ದಾರಲ್ಲ ಎಂಬ ಮಾತನ್ನು ನಾವ್ಯಾರಾದರೂ ನೆನಪು ಮಾಡಿದರೆ 'ಮಾತನಾಡದಿದ್ದರೆ ಹೇಗೆ ಸಾಧ್ಯ? ನನಗಿನ್ನು ಹೆಚ ಸ್ಸಮಯ ಉಳಿದಿಲ್ಲ. ಅಷ್ಟರಲ್ಲಿ ನಾನು ಹೇಳಿ ಮುಗಿಸಬೇಕಾದ್ದು ಎಷ್ಟೋ ಇದೆಯಲ್ಲ' ಎನ್ನುತ್ತಿದ್ದರು.

ಕೊನೆಗೊಮ್ಮೆ ಆರೋಗ್ಯ ತೀರಾ ಹದಕೆಟ್ಟಾಗ, ಮುಂಚಿನಂತೆ ತಮ್ಮ ದೇಹವನ್ನು ದುಡಿಸಲಾಗದಲ್ಲ ಎಂಬ ವ್ಯಥೆ ಅವರನ್ನು ಹೆಚ್ಚಾಗಿ ಕಾಡತೊಡಗಿತು. ಈ ಕಡೆಯ ದಿನಗಳಲ್ಲಂತೂ ಅವರು ಪದೇಪದೇ ತಮ್ಮ ಚಿಕ್ಕಂದಿನ ದಿನಗಳನ್ನು ನೆನೆಯುತ್ತಿದ್ದರು. ಮೈಲುಗಟ್ಟಲೆ ನಡೆದಾಡುತ್ತಿದ್ದದ್ದು, ಈಜುತ್ತಿದ್ದದ್ದು, ತಮ್ಮ ಕುಸ್ತಿಯಾಟದ ಆ ತೀವ್ರ ಬದುಕನ್ನು ಕುರಿತು ಹಂಬಲಿಸುತ್ತಿದ್ದರು. ತರುಣನಾಗಿದ್ದಾಗ ಟೆನ್ನಿಸ್ ಆಡುತ್ತಿದ್ದುದನ್ನು ನೆನೆಯುತ್ತಿದ್ದರು. ಇಂದು ತಮ್ಮ ದೇಹಕ್ಕೆ ಈ ತೀವ್ರತೆ ಸಾಧ್ಯವಿಲ್ಲವೆಂದು ಪರಿತಪಿಸುವಂತೆ ತೋರುತ್ತಿತ್ತು. ಹೋರಾಡುತ್ತಲೇ ಇರುವ ಅವರ ಪ್ರವೃತ್ತಿ, ಬಹು ತೀವ್ರವಾದ ಆತ್ಮಶ್ರೀಯ ಪ್ರಭಾವದಿಂದಲೇ ಒಂದೆರಡು ಬಾರಿ ವಿಷಮ ಸ್ಥಿತಿಯನ್ನು ತಲುಪಿಯೂ ವಾಪಸ್ಸಾದದ್ದುಂಟು. ಅಂತೂ ಕೊನೆಗೊಮ್ಮೆ ತಮ್ಮ ದೇಹ ತಮ್ಮ ಅಧೀನದಲ್ಲಿನ್ನು ಉಳಿಯಲಾರದೆಂಬ ಅರಿವು ಅವರಲ್ಲಿ ಉಂಟಾದಾಗಲೂ ಅವರ ಧೀಶಕ್ತಿ ಎಂಬುದು ಕುಂದಲಿಲ್ಲ. ಕೊನೆಯವರೆಗೂ ಎದೆಗುಂದಲಿಲ್ಲ. 'ಜೀವವಿರುವವರೆಗೂ ಆಸೆ ಎಂಬುದನ್ನು ಬಿಡುವಂತಿಲ್ಲ' ಎಂಬ ಮಾತನ್ನು ಅವರು ಬರೆದ ಕೊನೆಯ ಪತ್ರದಲ್ಲಿ ಬರೆದಿದ್ದರು. ಆತನ ಮಟ್ಟಿಗಂತೂ ಅದು ಸತ್ಯವೇ ಆಗಿತ್ತು. ಕೊನೆಯ ದಿನದವರೆಗೂ ಆತನಲ್ಲಿ ಈ ಚೈತನ್ಯವೇ ತುಂಬಿತ್ತು. ತಾವು ಮತ್ತೆ ಚೇತರಿಸಿಕೊಳ್ಳುವ ಬಗ್ಗೆ ಮತ್ತೆ ತಮ್ಮ ಕೆಲಸದಲ್ಲಿ ತೊಡಗುವ ಬಗ್ಗೆ, ಎಷ್ಟೋ ತಿಂಗಳುಗಳ ನಂತರ

ಒಂದು ಸಿಗರೇಟ್ ಸೇದುವ ಬಗ್ಗೆ, ಒಂದು ಹೊಸ ನಾಟಕವನ್ನು ಬರೆಯುವ ಬಗ್ಗೆ(ಅದೊಂದು ಹಾಸ್ಯ ನಾಟಕವಾಗಿರಬೇಕೆಂಬುದು ಅವರ ಯೋಜನೆ), ನನ್ನ ತಂಗಿ ತನ್ನ ಸಂಸಾರದೊಂದಿಗೆ ಇಲ್ಲಿಗೆ ಬಂದಾಗ ಎಲ್ಲರೂ ಸೇರಿ ದೀಪಾವಳಿಯನ್ನು ಆಚರಿಸುವ ಬಗ್ಗೆ ಆಸೆಯನ್ನೇ ಹೊಂದಿದ್ದರು. ಆ ಕೊನೆಯ ದಿನವಂತೂ ಮಾರನೆಯ ದಿನ ಟೆಸ್ಟ್ ಮ್ಯಾಚ್ ನಡೆಯುವ ಬಗ್ಗೆ ವಿಚಾರಿಸಿಕೊಂಡದ್ದಷ್ಟೇ ಅಲ್ಲ, ಕಾಮೆಂಟರಿಯನ್ನು ಕೇಳಬೇಕು ಎಂಬ ನಿರೀಕ್ಷೆಯನ್ನು ಹಚ್ಚಿಕೊಂಡಿದ್ದರು. ಆ ದಿನ ಅವರಿಗೆ ಬರಲೇ ಇಲ್ಲ. ನಾನಿನ್ನೇನು ಹೇಳಲಿ? ಅವರ ಬಗ್ಗೆ ಅಂತಿಮವಾಗಿ ಹೇಳಬೇಕೆಂದರೆ, ಅವರ ಕೊನೆಯ ಪತ್ರದಲ್ಲಿ ಅವರೇ ಬರೆದ ಈ ಮಾತುಗಳನ್ನಷ್ಟೇ ಹೇಳಿ ಮುಗಿಸುತ್ತೇನೆ.

ಆ ಪತ್ರದಲ್ಲಿ ತಾವು ತಮ್ಮ ಕಡೆಗಾಲದ ಕೆಲವು ತಿಂಗಳುಗಳಲ್ಲಿ ಮುಗಿಸಿದ ಕೆಲಸಗಳನ್ನು ಪಟ್ಟಿ ಮಾಡುತ್ತ ಹೀಗೆ ಬರೆದಿದ್ದರು :

"ನನ್ನ ಜೀವಿತದ ಈ ಎಂಬತ್ತು ವರ್ಷಗಳನ್ನು ಸಾರ್ಥಕವಾಗಿ ಬದುಕಿದ್ದೇನೆ ಎಂದು ನಿನಗನ್ನಿಸುವುದಿಲ್ಲವೇ?" ಈ ಮಾತುಗಳು ಅವರಿಗೆ ತಕ್ಕ ಗೌರವ, ಆದರಗಳನ್ನು ಸೂಚಿಸುತ್ತವೆಂದು ಭಾವಿಸುತ್ತೇನೆ. ಏಕೆಂದರೆ, ಯಾವ ಮನುಷ್ಯ ತಾನೇ ಇದಕ್ಕಿಂತ ಹೆಚ್ಚಿಗೆ ಬಯಸಿಯಾನು?



✦ ಕೃಪೆ : ಅಂಕಣ ಪತ್ರಿಕೆಯ 'ಶ್ರೀರಂಗ ನಮನ'
ಜುಲೈ-ಆಗಸ್ಟ್-೧೯೮೫, ಸಂಪುಟ : ೬ ಸಂಚಿಕೆ : ೬






## ಸಂಕಿರಣ–೫


ರಾಘವೇಂದ್ರ ಪಾಟೀಲ (೧೯-೦೪-೧೯೫೧) ಕನ್ನಡದ ಜವಾರಿ ಕತೆಗಾರರೆಂದೇ ಪ್ರಸಿದ್ಧಿ ಪಡೆದವರು. ಸಾಹಿತ್ಯದ ರಚನೆಯ ಪೂರಕವಾದ ಮನೆಯ ವಾತಾವರಣದಲ್ಲಿಯೇ ಹುಟ್ಟಿ ಬೆಳೆದ ಅವರು ಈತನಕ ನಾಲ್ಕು ಕಥಾ ಸಂಕಲನಗಳನ್ನು ಹೊರತಂದಿದ್ದಾರೆ. ಒಡಪುಗಳು (೧೯೭೮), ಪ್ರತಿಮೆಗಳು (೧೯೮೩), ದೇಸಗತಿ (೧೯೯೫), ಮಾಯಿಯ ಮುಖಗಳು (೧೯೯೮) ಇವರ ಜೊತೆಗೆ ಬಾಳವ್ವನ ಕನಸುಗಳು (೧೯೮೪) ಮತ್ತು ಈಚೆಗೆ ತೇರು (೨೦೦೩) ಕಾದಂಬರಿಗಳು ಅಜ್ಞಾತ ಮುಂಬಯಿ ಎಂಬ ಪ್ರವಾಸ ಕಥನವನ್ನು ಬರೆದಿದ್ದಾರೆ. 'ದೇಸಗತಿ' ಕಥಾಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದಿರುವ ಪಾಟೀಲರು ತಮ್ಮ ಚಿಕ್ಕಪ್ಪ ಆನಂದಕಂದರ ನೆನಪಿಗೆ ಆನಂದಕಂದ ಗ್ರಂಥಮಾಲೆಯ ಮೂಲಕ ಮೌಲಿಕವಾದ ಪುಸ್ತಕ ಪ್ರಕಟಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಪಾಟೀಲರು ಅನೇಕ ಪುಸ್ತಕಗಳನ್ನು ಸಂಪಾದಿಸುವುದರ ಜೊತೆಗೆ ವಾಗ್ಮಾದ ವಿಮರ್ಶಾ ಸಂಕಲನ ಮತ್ತು ಆನಂದಕಂದರ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ೧೯೮೬ರಲ್ಲಿ ತಮ್ಮ ಗೆಳೆಯರ ಜೊತೆಗೂಡಿ ಆರಂಭಿಸಿದ 'ಸಂವಾದ'ಕ್ಕೆ ಸಾಹಿತ್ಯ ಪತ್ರಿಕೆಯ ಸಂಪಾದನೆ ಪ್ರಕಟಣೆಯ ಸಾಹಸಕ್ಕೂ ಪಾಟೀಲರು ತೊಡಗಿದ್ದಾರೆ. ಕನ್ನಡದಲ್ಲಿ 'ಸಂವಾದ'ಕ್ಕೆ ಉತ್ತಮ ಓದುಗವಲಯದ ಅಭಿಮಾನ ದಕ್ಕಿದೆ.

ಈಗ ಮಲ್ಲಾಡಿ ಹಳ್ಳಿಯ ಪದವಿ ಪೂರ್ವ ಕಾಲೇಜಿನ ಪ್ರಿನ್ಸಿಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ರಾಘವೇಂದ್ರ ಪಾಟೀಲರ ಅನೇಕ ಚಟುವಟಿಕೆಗಳ ನಡುವೆ ಅವರ ಬರಹವೆಂಬ ಮಾಯಾಂಗನೆ ಕನ್ನಡಕ್ಕೆ ಇನ್ನಷ್ಟು ಹೊಸ ಬಗೆಯನ್ನು ಒದಗಿಸುವುದೇ ಎನ್ನುವುದನ್ನು ಕಾದು ನೋಡಬೇಕಾಗಿದೆ.



ಇತ್ತೀಚೆಗೆ 'ಫೋನ್ ಬೂತ್' ಎಂಬ ಸಿನಿಮಾ ಬಂದಿದೆ. ಅದರ ಕಥೆ ಇಷ್ಟೆ: ಮಾಡೆಲ್ ವ್ಯವಹಾರದಲ್ಲಿ ಇರುವ ಒಬ್ಬಾತ ಬೀದಿ ಬದಿಯ ಸಾರ್ವಜನಿಕ ಟೆಲಿಫೋನ್ ಬೂತಿಗೆ ಬಂದು ತನ್ನ ಪ್ರಿಯತಮೆಗೆ ಒಂದು ಕರೆ ಮಾಡುತ್ತಾನೆ. ಅದನ್ನು ಮುಗಿಸುತ್ತಿದ್ದ ಹಾಗೆಯೇ ಅದೇ ಬೂತಿಗೆ ಒಂದು ಕರೆ ಬರುತ್ತದೆ. ಅದನ್ನು ಆತ ಆಕಸ್ಮಾತ್ತಾಗಿ ಸ್ವೀಕರಿಸುತ್ತಾನೆ. ಅವನಿಗೇ ಆ ಕರೆ ಬಂದಿರುತ್ತೆ. ಕರೆಗಾರನ ಬೇಡಿಕೆ ಇಷ್ಟೆ: ನಾಯಕ ಟೆಲಿಫೋನನ್ನು ಕೆಳಗೆ ಇಡಬಾರದು. ಇಟ್ಟರೆ ಅವನ ಕಥೆ ಮುಗಿದಂತೆ. ಇಡೀ ಸಿನೆಮಾ ಒಂದು ಫೋನ್ ಬೂತಿನ ಸುತ್ತ ನಡೆಯುತ್ತದೆ. ಅದರ ಕಥೆ ಹಾಗಿರಲಿ, ಸಿನೆಮಾವನ್ನು ಚಿತ್ರೀಕರಿಸಿದ ರೀತಿಯೂ ಹೊಸತೇ. ಒಂದು ಕಥೆ ಆಕಸ್ಮಾತ್ತಾಗಿ ಮೂಡುವ ಬಗೆ ಇದು.

ರಾಘವೇಂದ್ರ ಪಾಟೀಲರ ಎರಡು ಕಥಾ ಸಂಕಲನಗಳನ್ನು ಓದಿದಾಗ ಥಟ್ಟನೆ ಈ ಸಿನೆಮಾ ನೆನಪಾಗಿದ್ದರೆ ಅದಕ್ಕೆ ಪಾಟೀಲರೇ ಹೊಣೆ. ಕಥೆ ಹೇಗೆ ಮೂಡುತ್ತೆ, ಅದು ಹೇಗೆ ನಮ್ಮೊಳಗೇ ಹರಡಿಕೊಳ್ಳುತ್ತಾ ಹೋಗುತ್ತೆ, ಕಥೆಗಾರ ಹೇಗೆ ಈ ಕಥೆಯನ್ನು ನಮ್ಮೊಳಗೆ ಹದವಾಗಿ ಚೆಲ್ಲುತ್ತಾನೆ – ಎಂಬೆಲ್ಲ ಸಂಗತಿಗಳ ಬಗ್ಗೆ ನಾನು ಯಾವಾಗಲೂ ಕುತೂಹಲಿ. ನಮ್ಮ ಹೊಸ ಕಥೆಗಾರರು ರಾಘವೇಂದ್ರ ಪಾಟೀಲರ ಕಥೆಗಳನ್ನು ಅಭ್ಯಾಸದ ದೃಷ್ಟಿಯಿಂದಲಾದರೂ ಸರಿ, ಒಳ್ಳೆಯ ಕಥೆಗಳು ಎಂಬ ನೆಲೆಯಲ್ಲಾದರೂ ಸರಿ, ಒಮ್ಮೆ ಓದಲೇಬೇಕು ಎಂದು ನನಗನ್ನಿಸಿದೆ. ಎಪ್ಪತ್ತರ ದಶಕದಿಂದಲೂ ಕಥೆಗಳನ್ನು ಬರೆಯುತ್ತಿರುವ ಪಾಟೀಲರು ಇವತ್ತಿನ ಕಥೆಗಾರರನ್ನು ಬೆಚ್ಚಿಬೀಳಿಸುವಷ್ಟು ಫ್ರೆಶ್ ಕಥೆಗಳನ್ನು ಕೊಟ್ಟಿದ್ದಾರೆ.



# ಪಾಟೀಲರ ಮೊದಲ ಕಥೆಗಳು ಆಧುನಿಕ, ತತ್‌ಸಾಮಯಿಕ

ಬೇಳೂರು ಸುದರ್ಶನ

ಪಾಟೀಲರ ಮೊದಲ ಸಂಕಲನ 'ಒಡಪುಗಳು' ಒಳಗಿನ ಸೀನು ಕಮಲಿಯಾನ್ ಮತ್ತು ಸಾಪೇಕ್ಷತೆ ಕಥೆಯಿಂದಲೇ ನೋಡಿ. ದ್ವಿತೀಯ ಪುರುಷದಲ್ಲಿ ಬರೆದಿರುವ ಈ ಕಥೆ ಮೂರು ಪುಟಗಳಷ್ಟು ಚಿಕ್ಕದು. ಇವತ್ತು 'ಚೆನ್ನಾಗಿ ಕಥೆ ಬರೀತಾರೆ' ಅನ್ನೋ ಹೆಸರು ಪಡೆದವರ ಕಥೆಗಳು ಎಷ್ಟು ಉದ್ದ ಇರುತ್ತವೆ ಎಂಬುದನ್ನೂ ನೀವು ನೆನಪು ಮಾಡಿಕೊಳ್ಳಿ. ಮೂರೇ ಪುಟಗಳಲ್ಲಿ ನಿಮ್ಮೊಳಗೆ ಆತಂಕ ಹುಟ್ಟಿಸುವ ಹಾಗೆ ಸನ್ನಿವೇಶಗಳನ್ನು ಬೆಳೆಸುತ್ತಾರೆ. 'ಮರುಕದಂತೆ ದ್ವೇಷವೂ ನಿನ್ನ ಮೂಲ ರೂಪದ ಮೇಲೆ ನೆರಳನ್ನು ಚೆಲ್ಲುತ್ತದೆ' ಎಂಬ ಕಟು ವಾಕ್ಯಗಳಿಂದ ಕಥೆಗಾರ ನಿಂದನೆಗೆ ಒಳಗಾಗುತ್ತಾನೆ. ಇಡೀ ಕಥೆಯನ್ನು ಫ್ಲಾಶ್‌ಬ್ಯಾಕ್ ಬಳಸಿಯೂ ಸಮರ್ಥವಾಗಿ ವರ್ತಮಾನದಲ್ಲೇ ಹಿಡಿದು ನಿಲ್ಲಿಸುವ ಪಾಟೀಲರ ಶೈಲಿ 'ಕ್ಲಾಸಿಕ್'. ಅದೇ ಸಂಕಲನದ 'ಬೆತ್ತಲು' ಕಥೆಯೂ ಅಷ್ಟೆ. ಕಥೆಯ ಕೊನೆಗೇ ಪಂಚ್ ಇರುವುದು ಸಾಮಾನ್ಯ ಶೈಲಿ ಎಂದು ಅನ್ನಿಸುವುದಾದರೂ ಒಟ್ಟಾರೆ ಕಥೆ ಕಟ್ಟಿಕೊಡುವ ಅನುಭವ ತಾಜಾ. ಅದಾದ ಮೇಲೆ ಇರೋ 'ಬ್ಯಾಟ್ಸ್... ಬ್ಯಾಟ್ಸ್...' ಕಥೆಯಂತೂ ಫ್ಯಾಂಟಸಿಯ ದೃಶ್ಯಗಳನ್ನು ಚಕಚಕನೆ ಮೂಡಿಸುತ್ತದೆ. 'ಆರಾಮೇಶಂ' ಕಥೆಯು ತೀರಾ ಸಾಮಾನ್ಯವಾದ ಕಥಾಹಂದರ ಎಂಬಂತೆ ಅನ್ನಿಸಿದರೂ ಪಾಟೀಲರು ಕಟ್ಟುವ ದೃಶ್ಯಗಳ ಸುಗ್ಗಿಯಲ್ಲಿ ಕಥೆ ನಮ್ಮನ್ನು ಕಟ್ಟುತ್ತದೆ.

ಕಥೆಯೊಂದನ್ನು ಹೇಳುವಾಗ ಅನುಭವವನ್ನು ಬಳಸುವುದು ಸಹಜ. ಪಾಟೀಲರ ಅನುಭವಗಳು ಅವರ ಕಥೆಗಳಲ್ಲೂ ಸೇರಿಕೊಂಡಿವೆ. ಆದರೆ ಅವರ ಅನುಭವ ಯಾವುದು, ಕಥೆಗಳಲ್ಲಿ ಕಟ್ಟಿದ ಕಲ್ಪನೆಗಳ ಹಂದರ ಯಾವುದು ಎಂದು ಗೊತ್ತಾಗದಂತೆ ರಚಿಸುವುದರಲ್ಲಿ ಪಾಟೀಲರು ಯಶ ಪಡೆದಿದ್ದಾರೆ.

ಇತ್ತೀಚೆಗೆ 'ತೇರು' ಕಾದಂಬರಿ ಬರೆದು ತನ್ನ ಅಪ್ಪಟ ಕಥನ ಶೈಲಿಯನ್ನು ಮತ್ತೆ ತೋರಿಸಿಕೊಟ್ಟಿರುವ ಪಾಟೀಲರನ್ನು ಇಷ್ಟೆಲ್ಲ ಹೊಗಳಿ ವಿಮರ್ಶೆ ಮಾಡಬೇಕೆ?

ಹೌದು. ಯಾಕೆಂದರೆ ಪಾಟೀಲರು ಬರೆಯಲು ಆರಂಭಿಸಿದಾಗ ಇದ್ದ ಆಧುನಿಕತೆಗೂ, ಇವತ್ತು ನಾವು ಕಾಣೋ ಆಧುನಿಕತೆಗೂ ತೀರಾ ವ್ಯತ್ಯಾಸವಿದೆ. ಅವರು ಅಂಥ 'ಆಧುನಿಕ' ವಸ್ತುಗಳನ್ನು ಆಧುನಿಕ ಶೈಲಿಯಲ್ಲಿ ಬರೆವಾಗ ನಾನು, ನನ್ನ ಸಂಗಡಿಗರು ಪ್ರಾಥಮಿಕ ತರಗತಿಯಲ್ಲಿದ್ದವರು! ಅಂದರೆ ೩೦ ವರ್ಷಗಳ ನಂತರವೂ ಅವರ ಕಥೆಗಳು ವಸ್ತುವಿನ ಮತ್ತು ಶೈಲಿಯ ದೃಷ್ಟಿಯಲ್ಲಿ ಆಧುನಿಕವೇ ಆಗಿವೆ ಎಂಬುದು ಇಂದಿನ 'ಆಧುನಿಕ' ವಾತಾವರಣದಲ್ಲಿರುವ ನನಗೂ ಅನ್ನಿಸುತ್ತದೆ. 'ಆಧುನಿಕತೆ' ಪದ ಇಷ್ಟವಾಗದಿದ್ದರೆ 'ತತ್‌ಸಾಮಯಿಕ' (ಟಾಪಿಕಲ್) ಅಂತಲೂ ಹೇಳಬಹುದು.

ಪಾಟೀಲರ ಎರಡನೇ ಕಥಾ ಸಂಕಲನ 'ಪ್ರತಿಮೆಗಳು'. ಈ ಸಂಕಲನದಲ್ಲಿ ನನಗೆ ತುಂಬಾ ಖುಷಿ ಕೊಟ್ಟ ಕಥೆ 'ಡುಂ-ಡುಮುಕ್'. ಪ್ರಥಮ ಪುರುಷದಲ್ಲಿ ನಡೆಯುವ ಈ ಕಥೆಯ ಕಥಾವಸ್ತು ಸಾಮಾನ್ಯ. ಒಬ್ಬ ವೇಶ್ಯೆಯ ಕಥೆ. ಅವಳ ಮಾತುಗಳಲ್ಲೇ ಕಥೆ ನಡೆಯುತ್ತದೆ. ಆಕೆಯ ಮಾತುಗಳನ್ನು ಅನುಭವಿಸುವುದೇ ಒಂದು ಮಜಾ. ಒಂದು ವೇದನೆ ಕೂಡಾ. ಅವಳ ಮಾತುಗಳಿಗೆ ಶಹಬ್ಬಾಸ್ ಅನ್ನಬೇಕೋ, ಅವಳ ಸ್ಥಿತಿಗೆ ಮರುಕಪಡಬೇಕೋ ಎಂಬ ದ್ವಂದ್ವ ನಿಮ್ಮನ್ನು ಆವರಿಸುತ್ತೆ. 'ಜೈಲಿನಲ್ಲಿ' ಕಥೆಯೂ ಒಂದು ಬಗೆಯ ಅಚ್ಚರಿಯ ದೃಶ್ಯಗಳ ಜೋಡಣೆ. 'ಕನಸುಗಳೇ ಹಾಗೆ...' ಬಹುಶಃ ಪಾಟೀಲರ ಅವರೆಗಿನ ಚಿಕ್ಕ ಕಥೆ. ಈ ಪುಟ್ಟ ಕತೆ ತೀರಾ ಚಿಕ್ಕದಾಯಿತು ಎಂದೆನಿಸುತ್ತದೆ.

ಇದೇ ಸಂಕಲನದಲ್ಲಿ 'ಬಸ್ತಿ' ನೀಳ್ಗತೆ ಇದೆ. ಪಾಟೀಲರ ಸಮಾಜಮುಖಿ ಚಿಂತನೆಗಳನ್ನು ಒಟ್ಟಾಗಿ ತಿಳಕೋಬೇಕೆಂದರೆ ಈ ಕಥೆ ಓದಬೇಕು. ಯಾಕೆಂದರೆ ಅವರ ಹಲವು ಕಥೆಗಳಲ್ಲಿ ಈ ಬಗೆಯ ಸಮಾಜಮುಖಿ ಚಿಂತನೆಗಳು ಇದ್ದೇ ಇವೆ. ಶೋಷಣೆ, ಹಳ್ಳಿ ರಾಜಕೀಯ, ಬಡತನ ಇತ್ಯಾದಿ ಚಿಂತನೆಗಳು ಎಪ್ಪತ್ತರ ದಶಕದಲ್ಲಿ ಹಲವು ಯುವಲೇಖಕರನ್ನು ಕಾಡಿದ ಹಾಗೆಯೇ ಪಾಟೀಲರನ್ನೂ


ಕಾಡಿದೆ. ಅವುಗಳು ಹಲವು ಕಥೆಗಳ ವಸ್ತುಗಳೂ ಆಗಿವೆ. ಆದರೆ ಎಲ್ಲೂ ಪಾಟೀಲರ ಕಥೆಗಳು ಸಿದ್ಧಾಂತಗಳ ಬೆನ್ನು ಹಿಡಿದು ಜಾಳಾಗಿಲ್ಲ ಎನ್ನುವುದು ಸಮಾಧಾನದ ಸಂಗತಿ. ಶೋಷಣೆಯನ್ನು ಕುರಿತ, ಸಮಾಜದ ಸಂಬಂಧಗಳನ್ನು ಕುರಿತ ಸಾಹಿತ್ಯ ಶಿಷ್ಟವಾಗಿರಬೇಕು, ಕಟು ಸತ್ಯಗಳನ್ನು ಮೃದುವಾಗಿ ಹೇಳಬೇಕು ಎಂದು ಯಾರೂ ಹೇಳಲಾಗದು. ಆದರೆ, ಹಾಗೆ ಬಂದ ಸಾಹಿತ್ಯದಲ್ಲಿ ಸಹಜತೆ ಇರಬೇಕು. ಪಾಟೀಲರು ತಮ್ಮ ಸ್ಥಾನಿಕ ಅನುಭವದ ಹಿನ್ನೆಲೆಯಲ್ಲಿ ಜೋಡಿಸಿದ ಕಥಾಹಂದರಗಳು ಸಹಜವಾಗಿವೆ.

ನಿಜವಲ್ಲದಂತೆ ಕಾಣುವ ದೃಶ್ಯಗಳನ್ನು ಹೊಂದಿರುವ ಕಥೆಗಳು ಮೊದಲ ಸಂಕಲನವಾದ 'ಒಡಪುಗಳು'ನಲ್ಲೇ ಹೆಚ್ಚಾಗಿವೆ. ಮೊದಲ ಕಥೆಗಳಲ್ಲಿ ಪಾಟೀಲರು ಶೈಲಿಗೆ, ನಿರೂಪಣೆ ಅಚ್ಚರಿಗಳಿಗೆ ಹುಡುಕಾಡಿದಷ್ಟು ಎರಡನೇ ಸಂಕಲನದಲ್ಲಿ ಹುಡುಕಾಡಿಲ್ಲ ಎಂದೆನಿಸುತ್ತದೆ. 'ಪ್ರತಿಮೆಗಳು'ನಲ್ಲಿ 'ಜೈಲಿನಲ್ಲಿ' ಕಥೆಯೊಂದೇ ಇಂಥ ಹುಡುಕಾಟ ಪಾಟೀಲರಲ್ಲಿ ಇವೆ ಎನ್ನುವುದಕ್ಕೆ ನಿದರ್ಶನ. 'ಒಡಪುಗಳು' ಬಂದಿದ್ದು ೧೯೭೮ರಲ್ಲಿ. 'ಪ್ರತಿಮೆಗಳು' ಬಂದದ್ದು ೧೯೮೨ರಲ್ಲಿ.

ಈ ಕಥೆಗಳ ಶೈಲಿಯನ್ನು ಹೇಳುವಾಗ ಇನ್ನೊ ಒಂದು ಮಾತನ್ನು ಹೇಳಬೇಕು. ಕೆಲವು ಕಡೆಗಳಲ್ಲಿ ಪಾಟೀಲರು ಹೈಫನ್‌ಗಳನ್ನು ಬಳಸುವುದು ಕಥೆಯ ಓದಿಗೆ ಕೊಂಚ ತೊಡಕಾಗುತ್ತದೆ. ಹಾಗೆಯೇ ಪೂರ್ಣವಿರಾಮಗಳನ್ನು ಏಳೆಂಟು ಬಾರಿ ಬಳಸುವ ವಿಧಾನವೂ ಕೆಲವೊಮ್ಮೆ ಚಂದ ಅನಿಸುವುದಿಲ್ಲ. ಓದುಗನಿಗೆ ಕಥೆಯ ಮೇಲೆ ಲಕ್ಷ್ಯವಿರುತ್ತದೆಯೇ ಹೊರತು, ಲೇಖಕನ ವ್ಯಾಕರಣದ ಸೂತ್ರಗಳನ್ನೊಯ ಭಾವನೆಗಳನ್ನು ಹೊಂದುವುದು ಅಷ್ಟೇನೂ ಒಳ್ಳೆಯ ಕ್ರಮವಲ್ಲ.

ಪಾಟೀಲರ ಮೊದಲ ಎರಡು ಸಂಕಲಗಳು ಮಾತ್ರ ಇಲ್ಲಿ ಇಣುಕಿದ್ದೇನೆ. ನಮ್ಮ ನಡುವೆ ಅತ್ಯಂತ ಆಧುನಿಕ ಮನಸ್ಸಿನ, ದೇಶಿ ಚಿಂತನೆಯ ಕಥೆಗಾರರಾಗಿ ಪಾಟೀಲರು ಚುರುಕಾಗಿ ಇದ್ದಾರೆ ಅನ್ನೋ ಸಮಾಧಾನ ನನ್ನದು.

# ವಾಸ್ತವ, ಕನಸು, ಭ್ರಮೆಗಳ ನಡುವಣ ಕಥೆಗಳು



**ಸಂದೀಪನಾಯ್ಕ**

**ತ**ಮ್ಮ ವಿಶಿಷ್ಟ ಕಥನಗಳಿಂದ ರಾಘವೇಂದ್ರ ಪಾಟೀಲರು ಕನ್ನಡಿಗರ ಗಮನವನ್ನು ಸೆಳೆದಿದ್ದಾರೆ. ಸಮಕಾಲೀನ ಲೇಖಕರಲ್ಲಿ ಮಾತ್ರವಲ್ಲದೆ ಕನ್ನಡ ಕತೆಗಳ ಸಂದರ್ಭದಲ್ಲಿಯೇ ಅವರದು ವಿರಳವಾದ ದನಿಯಾಗಿದೆ. ಸವೆದ ರಾಜಮಾರ್ಗವನ್ನು ತ್ಯಜಿಸಿ, ತಮ್ಮದೇ ದೇಸಿಮಾರ್ಗವನ್ನು ಹುಡುಕಿಕೊಂಡದ್ದು ನಮ್ಮ ಕನ್ನಡ ಕಥನಗಳ ಸಂದರ್ಭದಲ್ಲಿ ಪ್ರಮುಖ ಸಂಗತಿಯೇ ಸರಿ.

ರಾಘವೇಂದ್ರ ಪಾಟೀಲರ 'ದೇಸಗತಿ', 'ಮಾಯಿಯ ಮುಖಗಳು' ಕಥಾ ಸಂಗ್ರಹ ಗಳಲ್ಲಿನ ಮುಖ್ಯ ಕಥೆಗಳನ್ನು ಇಟ್ಟುಕೊಂಡು ಈ ಪುಟ್ಟ ಟಿಪ್ಪಣಿ ಮಾಡಲಾಗಿದೆ.

'ದೇಸಗತಿ' ಕತೆ. ತಮ್ಮ ದೇಸಗತಿ ದೇಸಗತಿಯಾಗಿ ರೂಪುಗೊಂಡದ್ದನ್ನು ಕಲ್ಲನಾಥ ದೇಸಾಯಿ ಕಾಣುವ, ಮತ್ತೆ ಮತ್ತೆ ನೆನಪಿಸಿಕೊಳ್ಳುವ ರೋಮಾಂಚನಕಾರಿ ಹಾಗೂ

ಕುತೂಹಲಕಾರಿ ಕಥನವಾಗಿದೆ. ಅದೂ ಅವರು ತಮ್ಮ ಕೊನೆಗಾಲದಲ್ಲಿ 'ಅಜ್ಜನ ಅಜ್ಜನ ಕಥಿಯ ಭೂತಕಾಲದೊಳಗೆ ಸಂಚಾರ ಮಾಡೂದು!' ದೇಸಗತಿಯ ಕುರಿತಂತೆ ಅವರದು ಅವರಿವರಿಂದ ಕೇಳಿದ ನೆನಪಿನ ಚಿತ್ರಣ. ದೇಸಗತಿಯದು... 'ವೈಭವದ ಕಥೀನೂ ಹೌದು, ಅವನತಿಯ ಕಥೀನೂ ಹೌದು...' ಈ ಕತೆ ಮುದುಕ ಕಲ್ಪನಾಥ ದೇಸಾಯಿಯ ಹಿಂದಣ ನೆನಪು, ಚಿತ್ರಣಗಳೊಂದಿಗೆ ಬೆಳೆಯುತ್ತದೆ.

ಕತೆ ಭೂತ, ವರ್ತಮಾನ, ಭವಿಷ್ಯ ಈ ಎಲ್ಲ ಕಾಲದಲ್ಲೂ ಚಲಿಸುವ ಕತೆಯಾಗಿದೆ. ಕಲ್ಪನಾಥ ದೇಸಾಯಿ ವರ್ತಮಾನವಾದರೆ, ಅವನ ಅಜ್ಜನ ಅಜ್ಜ ದೇಸಗತಿ ಕಟ್ಟಿದ ಕತೆ ಭೂತದ್ದು. ಈಗ ಮಲಗಿದಲ್ಲೇ ಇರುವ ಕಲ್ಪನಾಥ ದೇಸಾಯಿ ಎಂಬ ವರ್ತಮಾನಕ್ಕೆ ಯಾವುದೇ ಮಹತ್ವವಿಲ್ಲ. ಕತೆಯ ಮಹತ್ವ ಇರುವುದು ಅದು ಭೂತ ಮತ್ತು ಭವಿಷ್ಯವನ್ನು ಜೋಡಿಸುವ ವರ್ತಮಾನವಾದ ಕಲ್ಪನಾಥ ದೇಸಾಯಿಯಲ್ಲಿ. ಮರಿಮಗ ಅಮೃತದೇಸಾಯಿ (ಕೆಂಪು ಮೋತೆಯವಳಿಗೆ ಹುಟ್ಟಿದವ) ದೇಸಗತಿಯ ಭವಿಷ್ಯದ ಒಂದೇ ಒಂದು ಕುಡಿ ಸಾಯುವುದರೊಂದಿಗೆ ದೇಸಗತಿಗೆ ಭವಿಷ್ಯ ಇಲ್ಲ (ದೇಸಗತಿಯ ಅವನತಿಗೆ ಕಾರಣರಾದವರು 'ಕೆಂಪ ಮೋತೀಮಂದಿ') ಎನ್ನುವುದನ್ನು ಕಥೆ ಸೂಚಿಸುವಂತಿದೆ. ಕತೆಯೊಳಗಿನ ಕಾಲ ಪ್ರಜ್ಞೆ ಇಷ್ಟು ಸರಳವಾಗಿರದೆ ಸಂಕೀರ್ಣವಾಗಿದೆ. ಮತ್ತು ಈ ಒಂದೇ ದೃಷ್ಟಿಯಿಂದ ಕತೆಯನ್ನು ನೋಡದೆ, ಬೇರೆ ಬೇರೆ ನೆಲೆಗಳಿಂದಲೂ ಕತೆಯನ್ನು ನಾವು ಪ್ರವೇಶಿಸಬಹುದು.

ಕಥೆಯ ಹುಚ್ಚಿನ ಕರಿಟೊಪಿಗಿರಾಯ (ದೇಸಗತಿ ಸಂಕಲನ) ಕತೆಯ ಕರಿಟೊಪಿಗಿ ರಾಯರ ಜೀತದಾಳುಗಳು ಇಲ್ಲಿ ಮನುಷ್ಯರಾಗಿ ಉಳಿದಿಲ್ಲ. ಈ ಯಜಮಾನ ಗೆಲ್ಲುವ ಕೇಸೂ ತನ್ನ ರೈತನ ವಿರುದ್ಧವೇ. ಇಂಥವನಿಗೆ ಯಜಮಾನಿಕೆಯ ಒಂದು ಲಕ್ಷಣವೇ ಆದ, ಮನೆತನದ ಮತ್ತೂ ಊರಿನ ಕಥೆ ಬರೆಯಲು ನಿರೂಪಕನನ್ನು ವಾಡೆಗೆ ಕರೆದುಕೊಂಡು ಹೋಗುತ್ತಾನೆ. ಈ ಯಜಮಾನನಿಗೆ ಸಾಹಿತ್ಯ-ಕಲೆಯ ಸೂಕ್ಷ್ಮಗಳು ಅರ್ಥವಾಗುವುದಿಲ್ಲ. ವಾಡೆಯ ಗೋಡೆಯ ಮೇಲಿನ ಹೊಲ್ಯಾರ ಕೆಂಚನ ಪೇಂಟಿಂಗ್‌ಗಳು ಅದೊಂದು ಸ್ವತ್ತಾಗಿ ಇರಬೇಕೆನ್ನುವ ಆಶಯವಿರುವ ಯಜಮಾನಿಕೆಯ ಕುರುಹಾಗಿಯೇ ಅಲ್ಲಿವೆ. ಈ ಕತೆ ಆಧುನಿಕ ಯಜಮಾನಿಕೆ (ಅಧಿಕಾರದ ಯಜಮಾನಿಕೆ ಕೂಡ ) ತಾನೇ ಸೃಷ್ಟಿಸಿ ತನ್ನನ್ನು ಕೀರ್ತಿಸಲು ಬರೆಸುತ್ತಿರುವ ವರ್ತಮಾನವನ್ನು ಸೂಚಿಸುವಂತಿದೆ.

'ಲಯ' ಕತೆ ಆಧುನಿಕ ಪುರಾಣವನ್ನು ತನ್ನ ಚಿತ್ರಮಯ ರೂಪಕದ ಭಾಷೆಯಲ್ಲಿ ಸೃಷ್ಟಿಸುತ್ತ, ಸ್ವತಃ ತಾನೇ ಒಂದು ರೂಪಕವಾಗಿದೆ. ಊರಿಗೆ ಊರೇ ದೈನಿಕದ ಬದುಕಿನ ಸಹಜ ಲಯವನ್ನು, ಕನಸಿನ ಲಯವನ್ನು ಕಳೆದುಕೊಂಡಿದೆ. ಜನರ ಕನಸನ್ನು ಚಿಗುರಿಸುವ ಋತುವಿನ ಲಯವೇ ಆ ಊರಿಗಿಲ್ಲ. ಮಳೆ ಕೂಡ ಬರದೆ ಪ್ರಕೃತಿಯ ಲಯ ತಪ್ಪಿಹೋಗಿದೆ. ಮುಗಿದುಹೋದ ಮತ್ತು ಇರುವ 'ಲಯ'ದ ಕುರಿತಂತೆ ಒಂದು ಲಯಬದ್ಧ ನಿರೂಪಣೆ ಇರುವ ಕತೆ ಇದು. ತನ್ನ ಸಹಜ ಲಯಕ್ಕೆ ಅನುಗುಣವಾಗಿ ಆ ಊರು ಹಾಡಿನ ಲಯದಂತೆ ಹೊಸ ಕನಸನ್ನು ಪಡೆಯಲು ಯತ್ನಿಸುತ್ತದೆ. ಈ ಕತೆ ತನ್ನ ಭಾಷೆಯ 'ಲಯ'ದಿಂದ, ವಸ್ತುವಿನ್ಯಾಸದ ದೃಷ್ಟಿಯಿಂದ ವಿಶಿಷ್ಟವಾಗುವ ಕತೆಯಾಗಿದೆ. ಕನ್ನಡದಲ್ಲಿ ಈ ಬಗೆಯ ಬರವಣಿಗೆ ಕಡಿಮೆಯೆಂದೇ ಹೇಳಬೇಕು.

'ಮಾಯಿಯ ಮುಖಗಳು' ಸಂಕಲನದ ಕತೆಗಳಲ್ಲಿ ತುಸು ನಿಧಾನಗತಿಯ ನಿರೂಪಣೆ ಉಳ್ಳ ಕತೆಗಳಿವೆ. ಈ ಸಂಕಲನದ ಕತೆಗಳು ಚಿತ್ರವತ್ತಾಗಿ ಬರೆಸಿಕೊಂಡ ಕತೆಗಳು ಮತ್ತು ಈ ಕತೆಗಳನ್ನು ಪಾಟೀಲರು ಕತೆ ಹೇಳುವ ಖುಷಿಗಾಗಿಯೇ ಬರೆದಂತಿದೆ. 'ದೇಸಗತಿ'ಯ ಕಥಾಲೋಕ ಇಲ್ಲಿ ತುಸು ವಿಸ್ತಾರವಾಗಿ ಬೆಳೆದಿದೆ. 'ಮಾಯಿಯ ಮುಖಗಳು' ಕತೆಯಲ್ಲಿಯೇ ಅವರ ಕಥನಕ್ಕೆ, ಕನುಬುಗಾರಿಕೆಗೆ

ಬೇರೆ ಆಯಾಮ ಇಲ್ಲಿ ದೊರೆತಿದೆ. ಅನಗತ್ಯವಾಗಿ ಸಂಕೀರ್ಣಗೊಳಿಸದೆ ನಿಧಾನಗತಿಯ ಬೆಳವಣಿಗೆ ಇರುವ ಕಥೆ ಇದು. ಮೂವರು ಅಕ್ಕತಂಗಿಯರ ಬದುಕಿನ ಬೇಕೆ ಬೇರೆ ಮಗ್ಗುಲುಗಳನ್ನು ಕತೆ ನಮಗೆ ತೋರುತ್ತಲೇ ತನ್ನ ಭಾವ ಪ್ರಪಂಚದೊಳಕ್ಕೆ ನಮ್ಮನ್ನು ಸೆಳೆದುಕೊಳ್ಳುತ್ತದೆ.


'ದೀಬರದಿಂಡೀ ದೀಬರದಿಂಡೀ ಕುಬಸಾ ಎಲ್ಲಿಟ್ಟೆ' ಕಥೆಯ ಜಿಪುಣ ಸೋನಪ್ಪನಿಗೆ ಸಿಗುವ ನಿಧಿ, ಅದರೊಂದಿಗೆ ಅವನೂ ದುಡಿದು ಸೇರಿಸಿ ಹೂತಿಡುವ ಹಣ ಕೊನೆಗೆ ಮಗನಿಗೂ ಸಿಗುವುದಿಲ್ಲ. ಮನುಷ್ಯನೊಬ್ಬನ ಹಣದ ಕುರಿತಾದ ನಿರರ್ಥಕ ಕ್ರಿಯೆ, ಈ ನಿರರ್ಥಕ ಕ್ರಿಯೆಯೇ ವಾಸ್ತವವೂ, ಕನಸೂ ಆಗಿರುವ ದುರಂತವನ್ನು ಈ ಕತೆ ಹೇಳುವಂತಿದೆ. ಒಂದು ಸರಳ ರೇಖಾತ್ಮಕ ದಿಕ್ಕಿನಲ್ಲಿ ಚಲನೆ ಇರುವ ಈ ಕತೆಯ ಅಂತ್ಯವನ್ನು ಬಹುಶಃ ಊಹಿಸಬಹುದು. ಕತೆಯ ರಚನೆ ಜನಪದ ನೀತಿಕತೆಯ ವಿನ್ಯಾಸಕ್ಕೆ ಹತ್ತಿರವಾದದ್ದು. ನೀತಿಯನ್ನು ಹೇಳಬೇಕಾದ ಜನಪದ ಕತೆಗಳು ತಾವು ಹೇಳಬೇಕಾದುದನ್ನು ಹೇಳಿ ಮುಗಿಸಿ, ತಮ್ಮ ಉದ್ದೇಶವನ್ನು ಸಾಧಿಸುತ್ತವೆ. ಆದರೆ ಈ ಕತೆ ಅಷ್ಟೇ ಆಗಿದ್ದರೆ ಮುಖ್ಯ ವೆನಿಸುತ್ತಿರಲಿಲ್ಲ. ನೀತಿಯನ್ನೂ ಮೀರಿದ ಉದ್ದೇಶ ಅದಕ್ಕಿರುವುದರಿಂದಲೇ ಕತೆ ತನ್ನ ಸೂಕ್ಷ್ಮ ವಿವರಗಳಲ್ಲಿ, ತನ್ನ ವಿಶಿಷ್ಟ ನೋಟದಿಂದಾಗಿ, ತನ್ನ ವಾಸ್ತವದ ಗ್ರಹಿಕೆಗಳಲ್ಲಿ ಅನನ್ಯವೆನಿಸುತ್ತದೆ.



ಎರಡೂ ಸಂಕಲನಗಳ ಒಂಭತ್ತು ಕತೆಗಳ ಒಂದು ಮುಖ್ಯ ಲಕ್ಷಣವೆಂದರೆ ಒಂದು ನಾದದೊಂದಿಗೆ, ತಮ್ಮದೇ ಲಯದಲ್ಲಿ ಓದುಗರನ್ನು ಸೆಳೆದೊಯ್ಯುತ್ತವೆ. ಇವುಗಳಲ್ಲಿ ಮುಳುಗುವುದರಿಂದ ಅದರ ಆಳ ವಿಸ್ತಾರಗಳು, ಸ್ಪಷ್ಟವಾಗಿ ಗೋಚರ ವಾಗುತ್ತವೆ. ಮಾಯಿಯ ಮುಖಗಳು, ಲಯ, ದೇಸಗತಿ ಮತ್ತಿತರ ಕತೆಗಳಲ್ಲಿ ಈ ಭಾವ-ಭಂಗಿಯನ್ನು ಅದರ ನಾಟಕದೊಂದಿಗೆ ನೋಡಬಹುದು. ತಮ್ಮನ್ನು ಬರವಣಿಗೆ ಕೊಟ್ಟುಕೊಳ್ಳುವಂತೆ ಪಾಟೀಲರು ಬರೆಯುವ ಕತೆಯೊಳಗಿನ ತನ್ಮಯತೆ ಇದೆಯಲ್ಲ, ಇದೇ ಒಂದು ಸಮಸ್ಯೆ ಇರಬಹುದೇ ಎನ್ನುವ ಅನುಮಾನ ಓದುಗರಲ್ಲಿ ಏಳುತ್ತದೆ.

ವಾಸ್ತವ, ಕನಸು, ಭ್ರಮೆಗಳ ನಡುವಣ ಗೆರೆ ತೀರ ತೆಳುವಾದುದು. ಈ ಸಂಕಲನಗಳಲ್ಲಿನ ಕತೆಗಳು ಈ ಎಲ್ಲದರ ಕಡೆಗೆ ತುಯ್ಯುತ್ತವೆ. ಅವರದೇ ಮಾತುಗಳಲ್ಲಿ ಹೇಳಬೇಕೆಂದರೆ 'ಖರೀ ಹಕೀಕತ್ತು ಮತ್ತು ಕಲ್ಪನಾಗಳ ನಡುವ ಎಷ್ಟು ಅಂತರ ಇದ್ದೀತು ಅನ್ನೊ ವಿಚಾರ ಭಾಳ ತೊಡಕಿನದನಸತದ... ಒಮ್ಮೊಮ್ಮೆ ಕಥೀ ಹೇಳತಿದ್ದರ ಖರೇ ಹಕೀಕತ್ತು ಹೇಳಿಧಂಗನಿಸಿದರ ಇನ್ನ ಒಮ್ಮೊಮ್ಮೆ ವಾಸ್ತವದ ವಿಚಾರ ಹೇಳತಿದ್ರೆ ಕಥೀ ಹೇಳಿದಂಗ ಸುಳ್ಳು-ಸುಳ್ಳು ಅನಸತದ....' (ಕಥೆಯ ಹುಚ್ಚಿನ ಕರಿಟೊಪಿಗಿಯ ರಾಯ : ಪುಟ-೧)


ಗೋಖಲೆ ಸೆಂಟಿನರಿ ಕಾಲೇಜು ಹತ್ತಿರ
ವಂದಿಗೆ ಅಂಚೆ, ಅಂಕೋಲಾ - ೫೮೧ ೩೧೪, ಉ.ಕ.




ರಾಘವೇಂದ್ರ ಪಾಟೀಲರು ಹೊಸ ಪೀಳಿಗೆಯ ಪ್ರಮುಖ ಕತೆಗಾರರಲ್ಲಿ ಒಬ್ಬರು. 'ಕಥೆಯ ಶಕ್ತಿಯ ಬಗ್ಗೆ ಇರುವ ನಂಬಿಕೆಯೇ ರಾಘವೇಂದ್ರ ಪಾಟೀಲರ ಸೃಜನಶೀಲತೆಯ ಹಿಂದೆ ಕೆಲಸ ಮಾಡಿರುವ ಪ್ರಮುಖ ದ್ರವ್ಯ' (ದೇಸಗತಿ - ನರಹಳ್ಳಿ ಬಾಲಸುಬ್ರಹ್ಮಣ್ಯ). ನವ್ಯದ ಪ್ರಭಾವವನ್ನು ಅರಗಿಸಿಕೊಂಡೇ ಪಾಟೀಲರು ತಮ್ಮದೇ ರೀತಿಯಲ್ಲಿ ಕತೆ ಹೇಳುವ ಕಲೆಯನ್ನು ಬೆಳೆಸಿಕೊಂಡವರು. ಅವರ ಕತೆಗಳದ್ದು 'ಮಾಂತ್ರಿಕ ವಾಸ್ತವ ಲೋಕ'. ವಾಸ್ತವ ಮತ್ತು ಕಲ್ಪನೆಗಳು ಒಂದರಲ್ಲೊಂದು ಬೆರೆತುಹೋಗಿರುವ ಲೋಕ. ಪಾಟೀಲರ ಕಥಾಲೋಕವನ್ನು ಅವಲೋಕಿಸಿದಾಗ ಎರಡು ವಸ್ತುಗಳು ಮತ್ತೆ ಮತ್ತೆ ಅವರ ಕತೆಗಳಿಗೆ ವಸ್ತುವಾಗಿರುವುದನ್ನು ಕಾಣಬಹುದು. ಒಂದು ಕತೆ ಕಟ್ಟುವ ಸೃಜನಶೀಲ ಶಕ್ತಿ ಮತ್ತೊಂದು ಚರಿತ್ರೆ. 'ದೇಸಗತಿ' ಮತ್ತು 'ಮಾಯಿಯ ಮುಖಗಳು' ಕಥಾಸಂಕಲನಗಳು ಪಾಟೀಲರ ಸೃಜನಶಕ್ತಿಯ ಅತ್ಯುತ್ತಮ ಫಲಗಳು. 'ಲಯ' ಅವರ ಅತ್ಯುತ್ತಮ ಕತೆ. ಇದರಲ್ಲಿ ಅವರು ಕಟ್ಟಿಕೊಡುವ 'ಎದಿಯ ಬೆಳದಿಂಗಳ'ನ್ನು ಹುಡುಕಿಕೊಳ್ಳುವ ಕನಸು ಇಂದಿನ ಬದುಕಿಗೆ ಅನಿವಾರ್ಯವಾದದು. 'ಚರಿತ್ರೆ' ಎಂದರೆ ಕೇವಲ ಅತ್ಯುತ್ತಮ ಮೌಲ್ಯಗಳ ಖಜಾನೆಯಲ್ಲ. ಅಲ್ಲಿಯೂ ಅಮಾನವೀಯ ವಾದ ಅಂಶಗಳು ಎಷ್ಟೋ ಇವೆ ಹಾಗೂ ಚರಿತ್ರೆಯನ್ನು ಉಳಿಸಿಕೊಳ್ಳುವಲ್ಲಿ ಸಮುದಾಯದ ಕಲ್ಪನೆಯ ಪಾತ್ರ ಮಹತ್ವದ್ದು ಎಂಬುದನ್ನು ಪಾಟೀಲರು 'ದೇಸಗತಿ', 'ತೇರು'ಗಳಲ್ಲಿ ತೋರುತ್ತಾರೆ.

'ಬಾಳವ್ವನ ಕನಸುಗಳು' ೧೯೮೪ರಲ್ಲಿ ಪ್ರಕಟವಾದ ಕಿರು ಕಾದಂಬರಿ. ಕನಸುಗಳ ಬೆನ್ನೇರಿ ಹೊರಟವರ ಕತೆಯಿದು. ತನ್ನ ಮಗ ಹುಸೇನಿಯ ಮದುವೆಯ ಕನಸನ್ನು ಕಂಡ ಬಾಳವ್ವ ಅದನ್ನು ನನಸಾಗಿಸಿಕೊಳ್ಳಲು ಪಡುವ ಪಾಡು ಇಲ್ಲಿ ಚಿತ್ರಿತವಾಗಿದೆ. ದೈನಿಕಗಳ ಜಗತ್ತಿನಲ್ಲಿ ತೊಡಗಿಸಿಕೊಂಡ ಹೆಣ್ಣಿನ ಶ್ರಮದ ಬದುಕನ್ನು ಪಾಟೀಲರು ಕಟ್ಟಿಕೊಡುತ್ತಾರೆ. ಕೆ.ವಿ. ನಾರಾಯಣ್‌ರವರು ಗುರುತಿಸುವಂತೆ 'ಕೇವಲ ವರ್ತಮಾನಕ್ಕೆ ಸೀಮಿತವಾದ ವ್ಯಕ್ತಿಗಳು ಹೇಗೋ ದಿನಗಳೆಯುತ್ತಿರುವಾಗ ನಾಳಿನ ಕನಸು ಕಂಡು ಅದನ್ನು ನಿಜವಾಗಿಸ ಹೊರಟಾಗ ಉಂಟಾಗುವ ಚಲನೆ ಈ ಕೃತಿಯ ಮುಖ್ಯ ಆಸಕ್ತಿಯಾಗಿದೆ'. ಆದರೆ ಇಲ್ಲಿನ ವ್ಯಕ್ತಿಗಳ ಕನಸು ಹೊರಗಿನ ಒತ್ತಡಗಳಿಂದಾಗಿ ಕಮರಿಹೋಗುತ್ತದೆ. ಈ ಹಿನ್ನೆಲೆಯಲ್ಲಿ ಕಾದಂಬರಿಗೆ ಲೇಖಕರು ನೀಡಿದ್ದ ಮೊದಲ ಶೀರ್ಷಿಕೆ 'ಕಳಕೊಂಡವರು' ಎನ್ನುವುದು ಅರ್ಥಪೂರ್ಣವಾಗಿದೆ. ಪರೀಫಜ್ಜನ ಹಗ್ಗ ಹೊಸೆಯುವ ಕ್ರಿಯೆ, ಗುರುಪಾದ ಸ್ವಾಮಿಯ ಪ್ರಪಂಚಕ್ಕೆಲ್ಲ ಒಂದೇ ಲಿಪಿಯನ್ನು ಕಂಡುಹಿಡಿಯಬೇಕೆಂಬ ಪ್ರಯತ್ನ ಇವೆಲ್ಲ ಕಥೆಗೆ ಭಿನ್ನ ಆಯಾಮಗಳನ್ನು ಒದಗಿಸುತ್ತದೆ. ಕಥೆಯನ್ನು 'ಅಣುಕುಶೈಲಿ'ಯಲ್ಲಿ ಹೇಳಿರುವ ರೀತಿ ದುರಂತದ ತೀವ್ರತೆಯನ್ನು ತೋರಿಸುವಲ್ಲಿ ಸಫಲವಾಗಿದೆ. ಈ ಬಗೆಯ ನಿರೂಪಣಾ ಕ್ರಮ ಕೆ.ವಿ. ನಾರಾಯಣ್‌ರವರು

# ಪಾಟೀಲರ ಎರಡು ಕಾದಂಬರಿಗಳು



**ಹೇಮ ಎಸ್.**

ಹೇಳುವಂತೆ ಕೃತಿಗೆ 'ಅಣುಕು ಮಹಾಕಾವ್ಯ'ದ ಲಕ್ಷಣಗಳನ್ನು ನೀಡಿದೆ. ಕಳೆದ ವರ್ಷ ಪ್ರಕಟವಾದ 'ತೇರು' ಪಾಟೀಲರ ಪ್ರಯೋಗಶೀಲತೆಯ ಫಲ. ಚರಿತ್ರೆ ಪುರಾಣವಾಗುವ ಬಗೆಯನ್ನು ಇಲ್ಲಿ ಕಾಣಿಸಿದ್ದಾರೆ. 'ತೇರು' ಚರಿತ್ರೆಯಲ್ಲಿನ ಅಮಾನವೀಯ ಅಂಶಗಳನ್ನು ಗುರುತಿಸುವುದರೊಂದಿಗೆ ಕಾಲದಿಂದ ಕಾಲಕ್ಕೆ ನಂಬಿಕೆಗಳಲ್ಲಾಗುವ ಸ್ಥಿತ್ಯಂತರಗಳನ್ನು ದಾಖಲಿಸುತ್ತದೆ.

ಧರಮನಟ್ಟಿಯ ದೇಸಗತಿಯ ಸಂಸ್ಥಾಪಕನಾದ ರಂಗೋಪಂತ ಪಟವರ್ಧನ ದೇಸಾಯಿ ತನ್ನ ದೇಸಗತಿಯ ವೈಭವದ ಪ್ರತೀಕವೆಂಬಂತೆ ಪಿಸ್ಸ ದೇವಸ್ಥಾನ ಮತ್ತು ತೇರನ್ನು ನಿರ್ಮಾಣ ಮಾಡಿಸುತ್ತಾನೆ. ಆದರೆ ರಥೋತ್ಸವದ ದಿನ ತೇರು ಎಷ್ಟೇ ಪ್ರಯತ್ನಿಸಿದರೂ ಚಲಿಸುವುದಿಲ್ಲ. ಶಾಸ್ತ್ರ ನೋಡಿದಾಗ ತೇರಿಗೆ ನರಬಲಿ ಬೇಕೆಂದು ತಿಳಿದುಬರುತ್ತದೆ. ನಾಡಿನ ಮೇಲು ಜಾತಿಯ ಜನರೆಲ್ಲ ನೆಪ ಹೇಳಿ ತಪ್ಪಿಸಿಕೊಳ್ಳುತ್ತಾರೆ. ಶಾಸ್ತ್ರದ ನೆಪದಲ್ಲಿ ಕೆಳಜಾತಿಯ ಜನ ಸಿಕ್ಕಿಬೀಳುತ್ತಾರೆ. ಕೊನೆಗೆ ಕೆಳಜಾತಿಯ ಗೊಂಬೀರಾಮರ ದ್ಯಾವಪ್ಪ ತನ್ನ ಮಗನನ್ನು ಬಲಿಕೊಡುತ್ತಾನೆ. ಇದಕ್ಕಾಗಿ ಅವನಿಗೆ ಕಳ್ಳೀಗುದ್ದಿ ಎಂಬಲ್ಲಿ ಎಂಟೆಕರೆ ಜಮೀನು ಇನಾಮಾಗಿ ದೊರೆಯುತ್ತದೆ. ದ್ಯಾವಪ್ಪನ ವಂಶಸ್ಥರು ಪ್ರತಿವರ್ಷ ತೇರಿಗೆ 'ರಕ್ತತಿಲಕ'ದ ಸೇವೆ ಮಾಡಲಾರಂಭಿಸುತ್ತಾರೆ. ಕಾಲಕ್ರಮೇಣ ಜನರಿಗೆ ದೇವರು, ರಥೋತ್ಸವಗಳಲ್ಲಿ ನಂಬಿಕೆ ಕಡಿಮೆಯಾಗುತ್ತದೆ. ದ್ಯಾವಪ್ಪನ ವಂಶಸ್ಥರಿಗೆ ನೀಡಿದ್ದ ಜಮೀನನ್ನು ಗೌಡ ಕಸಿದುಕೊಳ್ಳುತ್ತಾನೆ. ದ್ಯಾವಪ್ಪನ ಮರಿಮೊಮ್ಮಗನಿಗೆ ರಕ್ತತಿಲಕದ ಸೇವೆಯಲ್ಲಿ ನಂಬಿಕೆಯಿಲ್ಲ. ಅವನ ಆಸಕ್ತಿ, ನಂಬಿಕೆಗಳು ದೇವರು ಧರ್ಮದಿಂದ ದೂರವಾಗಿ ಬೇರೆ ಕೇಂದ್ರವನ್ನು ಕಂಡುಕೊಂಡಿರುತ್ತದೆ. ಅವನು ಜೆ.ಪಿ. ಆಂದೋಳನದಲ್ಲಿ ಭಾಗವಹಿಸಿ ಜೈಲಿಗೆ ಹೋಗಿ ಬಂದು ಅನಂತರ ಬಾಬಾ ಆಮ್ಟೆಯವರ ಆಶ್ರಮವನ್ನು ಸೇರುತ್ತಾನೆ.


ಚರಿತ್ರೆ ಪುರಾಣವಾಗುವ ಪುರಾಣ ಅರ್ಥಹೀನವಾಗುವ ಕ್ರಿಯೆಯು ಇಲ್ಲಿ ದಾಖಲಾಗಿದೆ. ಕತೆ ನಡೆಯುವ ಮೂರು ಘಟ್ಟಗಳಲ್ಲಿ ಇದನ್ನು ಕಾಣಬಹುದು. ಗೊಂಬೀರಾಮರ ದ್ಯಾವಪ್ಪ ಮಗನನ್ನು ಬಲಿಕೊಡುವ ಚಾರಿತ್ರಿಕ ಘಟನೆಯೊಂದಿಗೆ ಕತೆ ಮೊದಲಾಗುತ್ತದೆ. ಎರಡನೆಯ ಘಟ್ಟದ ವೇಳೆಗೆ ಇದು ಪುರಾಣದ ರೂಪಧಾರಣೆ ಮಾಡಿರುತ್ತದೆ. ಜನರು ಗೊಂಬೀರಾಮಪ್ಪ ದ್ಯಾವಪ್ಪ ಮಗನನ್ನು ಬಲಿಕೊಟ್ಟ ಘಟನೆಯನ್ನು ಕತೆಯಾಗಿ ಹೇಳುವುದನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಮೂರನೆಯ ಘಟ್ಟದಲ್ಲಿ ಪುರಾಣದ ಬಗೆಗಿನ ಆಸಕ್ತಿ, ನಂಬಿಕೆಗಳು ಇಲ್ಲವಾಗುತ್ತದೆ. ದೇವಸ್ಥಾನದಲ್ಲಿ ನಡೆವ ಕಳ್ಳತನ, ಪುರಾಣದ ಬಗೆಗಿನ ನಂಬಿಕೆಯು ನೆಲೆಗಟ್ಟು ಕುಸಿಯುತ್ತಿರುವುದರ ಸಂಕೇತ. ದ್ಯಾವಪ್ಪ ಶ್ರದ್ಧೆಯಿಂದ ನಡೆಸುತ್ತಿದ್ದ ಕ್ರಿಯೆಗಳೆಲ್ಲವೂ ಅವನ ಮರಿಮೊಮ್ಮಗನಿಗೆ ಅರ್ಥಹೀನ ಎನಿಸತೊಡಗುತ್ತದೆ. ಅವನ ಆಸಕ್ತಿಯಿರುವುದು ನವನಿರ್ಮಾಣ ಚಳುವಳಿಯಲ್ಲಿ, ಸಮಾಜದ ಬದಲಾವಣೆ ತರಬೇಕೆಂಬುದರಲ್ಲಿ. ಹೀಗಾಗಿ ಅವನು ತನ್ನ ಬದುಕಿಗೆ ಹೊಸ ಅರ್ಥ ಹುಡುಕುತ್ತ ಆಮ್ಟೆಯವರ ಆಶ್ರಮ ಸೇರುತ್ತಾನೆ.

ನಿರೂಪಣೆಯ ಮೂಲಕ ಲೇಖಕರು ಪುರಾಣ ನಿರ್ಮಿತಿ ಹಾಗೂ ಪುರಾಣ ಭಂಜನ ಎರಡೂ ಸ್ಥಿತಿಗಳನ್ನು ಓದುಗ ದರ್ಶಿಸುವಂತೆ ಮಾಡುತಾರೆ. ಬೆಂಗಳೂರಿನ ಪಾಟೀಲನೆಂಬ ಪತ್ರಕರ್ತನ ನಿರೂಪಣೆಯಲ್ಲಿ ವಸ್ತುನಿಷ್ಠ ದನಿಯಿದ್ದರೆ ಧರಮನಟ್ಟಿಯ ಸ್ವಾಂವಜ್ಜನ ನಿರೂಪಣೆಯಲ್ಲಿ ಹಳಹಳಿಕೆ ಮತ್ತು ಕಳಕಳಿಯ ದನಿಯಿದೆ. ಇವರೊಂದಿಗೆ ಮರಿಮೊಮ್ಮಗ ದ್ಯಾವಪ್ಪನ ಹತಾಶೆಯ ದನಿಯನ್ನೂ ಕೇಳಬಹುದಾಗಿದೆ. ಒಟ್ಟಿನಲ್ಲಿ ಸಮುದಾಯದ ಕಲ್ಪನೆಯೊಳಗೆ ಚರಿತ್ರೆ ಪಡೆಯುವ ಅಸ್ತಿತ್ವದ ಸ್ವರೂಪವನ್ನು ಪಾಟೀಲರು ಓದುಗರು ದರ್ಶಿಸುವಂತೆ ಮಾಡುತ್ತಾರೆ. ಪದ್ಯದ ಲಯವಿರುವ ಗದ್ಯ ಪಾಟೀಲರ ಸ್ವೋಪಜ್ಞತೆಗೆ ಸಾಕ್ಷಿಯಾಗಿದೆ.

D/o ಶ್ರೀನಿವಾಸಮೂರ್ತಿ, ನಂ. ೭,
ನಾಗರಾಜ ಗಾರ್ಡನ್, ೨೨ನೇ ಮೇನ್,
ಜೆ.ಪಿ. ನಗರ ೫ನೇ ಹಂತ, ಬೆಂಗಳೂರು - ೫೬೦ ೦೭೮

**ಈ** ಬರಹವೆಂಬ ಸುರಾಂಗನೆ ನನ್ನನ್ನು ಬಾಲ್ಯಾವಸ್ಥೆಯಲ್ಲಿಯೇ ಆವರಿಸಿಕೊಂಡಳು. ಇನ್ನೂ ಓದಲು ಬಾರದ - ಬಹುಶಃ ಶಾಲೆಗೆ ಹೋಗಲು ಆರಂಭಿಸದ ವಯಸ್ಸಿನಲ್ಲಿ, ನಮ್ಮ ಮನೆಯ ದನದ ಹಕ್ಕೆಯ ಕಟ್ಟೆಯ ಮೇಲೆ ಹಗ್ಗ ಕಟ್ಟಿ, ಸೀರೆಗಳನ್ನು ಪರದೆಯಂತೆ ನೇತು ಹಾಕಿ, ನಾವೆಲ್ಲ ಹುಡುಗರು ನಾವು ನೋಡಿದ ಯಾವುದೋ ನಾಟಕದ ತುಣುಕನ್ನು ಅನುಕರಿಸಿ ನಾಟಕ ಆಡುತ್ತಿದ್ದೆವು. ಮುಂದೆ ಶಾಲೆಗೆ ಹೋಗತೊಡಗಿದ ಮೇಲೆ, ಮೂರನೆಯ ತರಗತಿಯಷ್ಟೊತ್ತಿಗೆ ಓದಿನ ರುಚಿ ಹತ್ತಿತು. ಅದೊಂದು ವರ್ಷದ ಬೇಸಗೆಯ ರಜೆಯಲ್ಲಿ ಧಾರವಾಡದಲ್ಲಿನ ನಮ್ಮ ಚಿಕ್ಕಪ್ಪನ ಮನೆಗೆ ಹೋದಾಗ, ಅಲ್ಲಿನ ವಿದ್ಯಾವರ್ಧಕ ಸಂಘದ ಬಳಿ ಇರುವ ಗ್ರಂಥಾಲಯವನ್ನು ನೋಡಿದೆ. ಅಬ್ಬಾ! ಎಷ್ಟು ಪುಸ್ತಕಗಳು! ಮಕ್ಕಳ ಕಥೆಗಳ ಅದ್ಭುತ ಸಂಗ್ರಹ ಇದ್ದಿತು. ಧಾರವಾಡದಲ್ಲಿ ಇರುವಷ್ಟು ಕಾಲವೂ ನಾನು ಬೆಳಗಿನ ತಿಂಡಿ ಮುಗಿಸಿಕೊಂಡವನೇ ಆ ಲೈಬ್ರರಿಗೆ ಹೋಗಿ ಮಕ್ಕಳ ಕಥೆಗಳನ್ನು ಓದಿದೆ. ಊಟಕ್ಕೆ ಮನೆಗೆ ಬಂದು, ಮಧ್ಯಾಹ್ನದ ಬಿಸಿಲನ್ನು ಲೆಕ್ಕಿಸದೆ ಮತ್ತೆ ಅಲ್ಲಿಗೇ ಓಡುತ್ತಿದ್ದೆ. ನಮ್ಮ ಚಿಕ್ಕಪ್ಪ, ನಾನು ಓದಲು ಗ್ರಂಥಾಲಯಕ್ಕೆ ಹೋಗುತ್ತೇನೆ ಅಂದಾಗ ಪ್ರೀತಿಯಿಂದ ಕಳಿಸುತ್ತಿದ್ದರು.

ನನ್ನ ಊರಿನ (ಬೆಟಗೇರಿಯ) ಕನ್ನಡ ಶಾಲೆಯ ಗ್ರಂಥಾಲಯದಲ್ಲಿಯೂ ಸಾಕಷ್ಟು ಪುಸ್ತಕಗಳಿದ್ದವು. ನಾಲ್ಕು ಐದನೆಯ ತರಗತಿಯಲ್ಲಿದ್ದಾಗ ಅಲ್ಲಿನ ಪತ್ತೇದಾರಿ ಪುಸ್ತಕಗಳನ್ನು ಓದಿದೆ. ಆಗ ಪುರುಷೋತ್ತಮನ ಸಾಹಸದ ಲೋಕದಲ್ಲಿ ಅಲೆದಾಡಿದೆ. ಏನಾದರೂ ಸಾಹಸ ಮಾಡಬೇಕು - ಯಾರದಾದರೂ ಏನಾದರೂ ಅಪರಾಧವನ್ನು ಪತ್ತೆ ಮಾಡಬೇಕು ಎನ್ನುವುದ ನನ್ನ ತುಡಿತವಾಗಿದ್ದಿತು. ಅಂದು ಮೂಡಿದ ಆ ಮನೋಭಾವದ ಒಂದಿಷ್ಟು ಅಂಶವು



# ಬರಹವೆಂಬ ಸುರಾಂಗನೆ

ರಾಘವೇಂದ್ರ ಪಾಟೀಲ

ಇಂದಿಗೂ ನನ್ನಲ್ಲಿ ಉಳಿದಿದೆ. ಆರು ಏಳನೆಯ ತರಗತಿಗಳಲ್ಲಿರುವಾಗ ಕೃಷ್ಣಮೂರ್ತಿ ಪುರಾಣಿಕ, ಅನಕೃ ತರಾಸು ಅವರ ಕೃತಿಗಳನ್ನು ಓದಿದೆ. ತರಾಸು ಅವರ ನಾಗರಹಾವು ಕಾದಂಬರಿ ತ್ರಿವಳಿ, ಅನಕೃ ಅವರ ನಟಸಾರ್ವಭೌಮ ತುಂಬ ರುಚಿ ಎನ್ನಿಸಿದವು. ಅದೇ ಸಂದರ್ಭದಲ್ಲಿ ನಮ್ಮ ಶಾಲೆಯ ಗ್ರಂಥಾಲಯಕ್ಕೆ ಶೇಕ್ಸ್‌ಪಿಯರನ ನಾಟಕಗಳ ಕಥಾರೂಪಿಕೆಗಳ ಪುಸ್ತಿಕೆಗಳು ಬಂದವು. ನಮ್ಮ ಭೀಮಣ್ಣ ಮಾಸ್ತರರು ಆ ಪುಸ್ತಿಕೆಗಳನ್ನು ನನ್ನಿಂದ ಓದಿಸಿ, ತರಗತಿಯ ಎಲ್ಲ ಮಕ್ಕಳಿಗೆ ಕೇಳಿಸಿದರು. ಶೇಕ್ಸ್‌ಪಿಯರ್‌ನ ಆ ಅದ್ಭುತ ಕಥಾನಕಗಳು ನನ್ನ ಸುಪ್ತಪ್ರಜ್ಞೆಯ ಭಾಗವಾದಂತಿವೆ.

ಈ ಎಲ್ಲವುಗಳ ನಡುವೆ, ಬಹುಶಃ ಐದನೆಯ ತರಗತಿಯಲ್ಲಿದ್ದಾಗ, ನಮ್ಮ ಕಟ್ಟೆಯ ಮೇಲೆ ಆಡಲು ಒಂದು ನಾಟಕ ಬರೆಯಬೇಕೆಂದು ನಿರ್ಧರಿಸಿದೆವು. ಸರಿ. ಒಂದು ಎಕ್ಸರ್‌ಸೈಜು ದೊರಕಿಸಿಕೊಂಡು, ಸೀಸು ಕಡ್ಡಿಯಿಂದ ಪುರುಷೋತ್ತಮನ ಒಂದು ನಾಟಕವನ್ನು ನಾಟಕವಾಗಿ ಬರೆಯತೊಡಗಿದೆವು! ಗುಂಪಿನ ಕ್ರಿಯೆ ಆಗಿದ್ದರಿಂದ ಬಹುವಚನ ಪ್ರಯೋಗಿಸಿದ್ದೇನೆ. ಆದರೆ ಅದು ಒಂದೆರಡು ಪುಟಕ್ಕೆ ನಿಂತುಹೋಯಿತು.

ಮುಂದೆ ಹಾಯ್‌ಸ್ಕೂಲಿಗೆ ಹೋದೆ. ಆಗ ಗೋಕುಲ ಎನ್ನುವ ಒಂದು ಪತ್ರಿಕೆ ಬರುತ್ತಿತ್ತು. ಅದರಲ್ಲಿ ಬರುತ್ತಿದ್ದ ಕಥೆಗಳನ್ನು ಓದಿ, ಉತ್ಸಾಹದಿಂದ ಅವುಗಳನ್ನು ಅನುಕರಿಸಿ ಎರಡು ಕಥೆಗಳನ್ನು ಬರೆದೆ. ನನ್ನ ಅಕ್ಕಂದಿರು ಮತ್ತು ಸಂಬಂಧಿಕರು ಅವುಗಳನ್ನು ಓದಿ 'ಶಭಾಶ್!' ಎಂದರು. ಆದರೆ ಕಳ್ಳನ ಮನಸ್ಸು ಹುಳ್ಳುಳ್ಳಗೇ ಅನ್ನುವಂತೆ ಅವರು ಓದಿ ಹೊಗಳಿದಾಗಲೆಲ್ಲ ನಾನು ಮನಸ್ಸಿನಲ್ಲಿಯೇ ಮುದುಡುತ್ತಿದ್ದೆ. ೯ನೇ ತರಗತಿಯಲ್ಲಿದ್ದಾಗ ಮಾಸ್ತಿಯವರ 'ನಿಜಗಲ್ಲಿನ ರಾಣಿ' ಕಥೆಯನ್ನು ನಾಟಕಕ್ಕೆ ರೂಪಾಂತರಿಸಿ ಆಕಾಶವಾಣಿಯವರು ಏರ್ಪಡಿಸಿದ್ದ ನಾಟಕ ಸ್ಪರ್ಧೆಗೆ ಕಳಿಸಿದೆ ಹೀಗೆ ರೂಪಾಂತರ ಮಾಡಲು ಮೂಲ ಲೇಖಕರ ಅನುಮತಿ ಬೇಕೆನ್ನುವುದು ನನಗೆ ಗೊತ್ತಿರಲಿಲ್ಲ. ಆಕಾಶವಾಣಿಯವರು ನನಗೆ ಬಹುಮಾನ ಘೋಷಿಸದಿದ್ದರೂ ನನ್ನ ಅಧ್ಯಾಪಕರು, ನನ್ನ ಅಣ್ಣ-ಅಕ್ಕಂದಿರು ನಮ್ಮ ತಂದೆ, ಸಂಬಂಧಿಕರು ಎಲ್ಲರೂ ಉತ್ತೇಜಿಸಿದರು. ಬರೆಯಲು ಪ್ರೋತ್ಸಾಹಿಸಿದರು. ಅಂಥ ಕಾಲಕ್ಕೇ ನಾನು ಮೇಲೆ ಹೇಳಿದ ಅನುಕರಣೆಯ (ಕೃತಿಚೌರ್ಯದ?) ಕಥೆಗಳನ್ನು ಬರೆದದ್ದು. ಅವನ್ನು ಬರೆದಾದ ಮೇಲೆ ನನ್ನಲ್ಲಿ ಅಪರಾಧೀ ಭಾವನೆ ಹುಟ್ಟಿ ಇನ್ನು ಏನಾದರೂ ಬರೆಯುವುದಾದರೆ ಸಾಕಷ್ಟು ಸನ್ನದ್ಧನಾಗಿ ಸ್ವಂತದ್ದು ಬರೆಯಬೇಕು ಎಂದು ನಿರ್ಧರಿಸಿ ನನಗೆ ನಾನೇ ಒಂದು ನಿಯಮವನ್ನು ವಿಧಿಸಿಕೊಂಡೆ. ಸನ್ನದ್ಧನಾಗಲು ಭೈರಪ್ಪ - ಕಾರಂತರನ್ನು ಓದತೊಡಗಿದೆ.

ಅಂತೂ ಓದು ಮತ್ತು ಬರಹದ ಆಸೆಗಳು ನನ್ನ ವ್ಯಕ್ತಿತ್ವದ ಭಾಗಗಳಾಗಿ ಬಿಟ್ಟವು. ಎಂ.ಎಸ್ಸಿ ಓದುತ್ತಿದ್ದಾಗ ನನ್ನ ಅಜ್ಜನನ್ನು ಕಲ್ಪಿಸಿಕೊಂಡು ಒಂದು ಕಾದಂಬರಿಯನ್ನು ಬರೆಯಬೇಕೆಂದು ಆರಂಭಿಸಿ ನಾಲ್ಕಾರು ಪುಟಗಳನ್ನು ಬರೆದೆ. ಆ ಪುಟಗಳನ್ನು ಓದಿದ ಅಷ್ಟಮೂರ್ತಿ ಎನ್ನುವ ನನ್ನ ಸ್ನೇಹಿತರು 'ಏ ಛಲೋ ಬರೀತೀರಿ! ಬಿಡಬ್ಯಾಡ್ರಿ ಬರೀರಿ' ಎಂದು ಹೇಳಿದರು. ಆದರೆ ಆ ಕಾದಂಬರಿ ಯಾಕೋ ಮುಂದುವರಿಯಲಿಲ್ಲ. ಮುಂದೆ ನನ್ನ ಓದಿನ ರುಚಿಯ ಮೂಲಕವಾಗಿಯೇ ಮಲ್ಲಾಡಿಹಳ್ಳಿಯ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಹುದ್ದೆಯ ಸಂದರ್ಶನದಲ್ಲಿ ಆಯ್ಕೆಗೊಂಡೆ(ಜೈ ಸಾಹಿತ್ಯ!). ಸಾಹಿತ್ಯದ ಶಕ್ತಿಯನ್ನು ಮನಗಂಡೆ. ಇಪ್ಪತ್ತೆರಡರ ನನಗೆ ಯಾಕೋ ಏನೋ- ಕವಿಗಳಿಗೆ ಸಮಾಜದಲ್ಲಿ ಹೆಚ್ಚು ಮನ್ನಣೆ ಎನ್ನುವ ಕಾರಣಕ್ಕೋ – ಆನಂದಕಂದ, ಬೇಂದ್ರೆ ಮುಂತಾದವರು ತಮ್ಮ ಕಾವ್ಯದ ಮೂಲಕ ಹೆಚ್ಚು ಪ್ರಸಿದ್ಧರಾಗಿದ್ದಾರೆಂದು ಅನ್ನಿಸಿಯೋ ಅಂತೂ ಕಾವ್ಯ ನನ್ನನ್ನು ಸೆಳೆಯತೊಡಗಿತು. ಕಾಲೇಜಿನ ಶ್ರೀಮಂತ ಗ್ರಂಥಾಲಯದಲ್ಲಿ ಬಹುತೇಕ ಕನ್ನಡದ ಎಲ್ಲ ಕವಿಗಳ ಕವನ ಸಂಗ್ರಹಗಳು ಇದ್ದವು. ಸರಿ ಕಾವ್ಯ ಓದಲು

ಸುರುಮಾಡಿದೆ. ನನಗೆ ಅನಿಸಿದ್ದನ್ನು ಮುಚ್ಚಿ ಹೇಳಲು ಕಾವ್ಯ ಮಾರ್ಗವು ಅತ್ಯಂತ ಉಪಯುಕ್ತ ಅನ್ನಿಸಿತು. ಸರಿ ಸುರುವಾಯಿತು ಕಾವ್ಯ ರಚನೆ. ಮೂರು-ನಾಲ್ಕು ವರ್ಷಗಳಲ್ಲಿ ೬೦ರಷ್ಟು ಪದ್ಯಗಳನ್ನು ಬರೆದೆ. ಅವುಗಳನ್ನು ಹೊಸ ನೋಟು ಪುಸ್ತಕಕ್ಕೆ ಪ್ರತಿ ಎತ್ತುವುದು — ಆಗ ಇನ್ನಷ್ಟು ತಿದ್ದುವುದು - ನಾನೇ ಅವುಗಳಿಗೆ ಪ್ರಾಯೋಗಿಕ ವಿಮರ್ಶೆ ಬರೆಯುವುದು, ಇಂಥ ಚಟುವಟಿಕೆಗಳಲ್ಲಿ ಮಗ್ನನಾದೆ. ಅದೊಂದು ಕ್ಷಣ ಮಲ್ಲಾಡಿಹಳ್ಳಿಗೆ ಬಂದ ಡಾ. ಎಚ್.ಎಸ್. ವೆಂಕಟೇಶಮೂರ್ತಿ ಅವರು ನನ್ನ ಗದ್ಯದ ಸಣ್ಣ ತುಂಡೊಂದನ್ನು ಓದಿ, ವಿಸ್ಮಿತರಾಗಿ ಹಿಪ್ನಾಟಿಸ್ಟ್ ಮಾಡುವವರು ಆಡುವಂತೆ –ಗಂಭೀರವಾಗಿ ಆಳವಾದ ಧ್ವನಿಯಿಂದ — 'ಪಾಟೀಲ್... ನೀವು ಕಥೆ ಬರೀಬೇಕು!' ಎಂದು ಹೇಳಿ ಕಥನದ ದೀಕ್ಷೆ ನೀಡಿದರು. ಅಂದಿನಿಂದ ಕಥೆ ಬರೆಯತೊಡಗಿದೆ.

ಕನ್ನಡ ಸಾಂಸ್ಕೃತಿಕ ಲೋಕ ಬಹಳ ಉದಾರಿಯಾದದ್ದು. ನಾನು ಕಥೆ ಬರೆಯಲು ಆರಂಭಿಸುತ್ತಿದ್ದಂತೆಯೇ ನನ್ನ ಬೆನ್ನು ತಟ್ಟಿ ಸ್ವಾಗತಿಸಿತು. ಹಿರಿಯರಾದ ಯು.ಆರ್. ಅನಂತಮೂರ್ತಿ, ಎಲ್.ಎಸ್. ಶೇಷಗಿರಿರಾವ್, ಡಾ. ಸಿ.ಎನ್. ರಾಮಚಂದ್ರನ್ ಮತ್ತು ಗೆಳೆಯ ಓ.ಎಲ್. ನಾಗಭೂಷಣ ಸ್ವಾಮಿ ಇವರೆಲ್ಲ ನನ್ನ ಕಥೆ, ಕಾದಂಬರಿಗಳಿಗೆ ಮುನ್ನುಡಿಗಳನ್ನು ಬರೆದು ಓದುಗರಿಗೆ ನನ್ನನ್ನು ಪರಿಚಯಿಸಿದ್ದಾರೆ. ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಡಾ. ಜಿ.ಎಸ್. ಆಮೂರ, ಎಚ್.ಎಸ್. ರಾಘವೇಂದ್ರರಾವ್, ಡಾ. ಗಿರಡ್ಡಿ ಗೋವಿಂದರಾಜ ಮತ್ತೂ ಇನ್ನೂ ಅನೇಕ ಕನ್ನಡದ ಮಹತ್ವದ ವಿಮರ್ಶಕರು ನನ್ನ ಕಥೆಗಳನ್ನು ಕುರಿತು ಬರೆದಿದ್ದಾರೆ ಮತ್ತು ಮಾತನಾಡಿದ್ದಾರೆ. ಎಲ್ಲಕ್ಕೂ ಹೆಚ್ಚಾಗಿ ಡಾ. ಜಿ.ಎಸ್. ಶಿವರುದ್ರಪ್ಪ ಮತ್ತು ಡಾ. ಎಚ್.ಎಸ್. ವೆಂಕಟೇಶಮೂರ್ತಿ ಇವರುಗಳು ನನ್ನ ಸಾಹಿತ್ಯ ವ್ಯಕ್ತಿತ್ವದ ವಿಕಸನಕ್ಕೆ ನೀರೆರೆದು ಪೋಷಿಸಿದ್ದಾರೆ. ನಮ್ಮ ಮನೆತನದ ಸಾಹಿತ್ಯಕ ವ್ಯಕ್ತಿತ್ವವು ನನ್ನಲ್ಲಿ ಆತ್ಮವಿಶ್ವಾಸವನ್ನು ತುಂಬಿದೆ. ಈ ಎಲ್ಲ ಹಿರಿಯರನ್ನು, ಗೆಳೆಯರನ್ನು — ಒಟ್ಟು ಕನ್ನಡ ಸಾಂಸ್ಕೃತಿಕ ಲೋಕದ ಸಜ್ಜನಿಕೆಯನ್ನು ನಾನು ಕೃತಜ್ಞತೆಯಿಂದ ನೆನೆಯುತ್ತೇನೆ.

ಈಗ ನನ್ನ ಕಿರಿಯ ಗೆಳೆಯ ಡಿ.ವಿ. ಪ್ರಹ್ಲಾದ ತಮ್ಮ 'ಸಂಚಯ' ಸಾಹಿತ್ಯ ಪತ್ರಿಕೆಯ ಈ ಸಂಚಿಯನ್ನು  ನನ್ನ ಬರಹವನ್ನು ಕುರಿತಾದ ವಿಶೇಷ ಸಂಚಿಕೆಯಾಗಿ ರೂಪಿಸುತ್ತಿದ್ದಾರಂತೆ! ಈಗ ನನಗೆ ತೀವ್ರವಾಗಿ ಅನ್ನಿಸುತ್ತಿರುವುದೆಂದರೆ

'ಇದು ಎಂಥಾ ಲೋಕವಯ್ಯ!'
ಕೃತಜ್ಞತೆಗಳು ಸಂಚಯಕ್ಕೆ
ಕೃತಜ್ಞತೆಗಳು ಕನ್ನಡ ವಾಙ್ಮಯ ಲೋಕಕ್ಕೆ!'



'ಬಲರಾಮ', ಅಧ್ಯಾಪಕರ ಕಾಲನಿ,
ಮಲ್ಲಾಡಿಹಳ್ಳಿ - ೫೭೭ ೫೩೧

# ಕಿರಣವೊಂದು ಜಾರಿ

ಒಂದು ಟಿಪ್ಪಣಿ

✦ ಬಾಲಸುಬ್ರಹ್ಮಣ್ಯ ಕಂಜರ್ಪಣೆ

ಯಾಕವರು ಒಬ್ಬರೇ ಮಾತಾಡುವರು
ಬಚ್ಚಲಲ್ಲಿ ಏಣಿಯಲ್ಲಿ ತಮ್ಮಷ್ಟಕ್ಕೆ ತಾವೇ
ಪೋಸ್ಟರು ಹರಿದ ಗೋಡೆಯೆದುರು ಪೇಟೆಯಲ್ಲಿ
ಸರಕ್ಕನೆ ಕಿರಣವೊಂದು ಜಾರಿದಂತೆ

ಹುಡುಕಿ ಒಂದು ಕಿತ್ತು ಬಿಟ್ಟರೆ ಒಂದು ಬಿಳಿ ಕೂದಲು
ಹತ್ತು ಏಳುತ್ತವೆ ಹಿಂದೆ
ಸರೀಕರು ಕೊಳ್ಳುತ್ತಾರೆ ಭೂಮಿ ಕಟ್ಟುತ್ತಾರೆ ಮನೆ
ಟ್ರಕ್ಕುಗಟ್ಟಲೆ ರೇತಿ ಮಣ್ಣು ಬೀದಿಯಲ್ಲಿ

ಅಮೃತಶಿಲೆ ಕಚೇರಿಗಳ ದೊಡ್ಡ ಕಂಬಗಳ ಹಿಂದೆ
ಮೂಕ ಬೆರಳಭಿನಯ. ಅವರಿಂದ ಹೇಳಿಸಿ. ಆಗತ್ತೆ ಕೆಲಸ.
ಅರೆ ನಿನ್ನೆಯೇ ಯಾಕೆ ಬರ್ಲಿಲ್ಲ. ಅಡ್ಮಿಶನ್ ಕೊಡಿಸ್ಬೋದಾಗಿತ್ತು.
ಯಾರವನು ಹುಡುಗ ಶಾಲೆಯ ತಿಪ್ಪೆಯ ಬಳಿ ನಿಂತವ
ಕಸ ಕಡ್ಡಿ ಕಾಗದ ಹೆಕ್ಕುತ್ತಲೇ ನೆರೆದ ಪಾಲಕರ
ಎದೆಗೂಡಿಗೆ ಕೈ ಇಕ್ಕಿ ಕಂಗೆಡಿಸಿದವ

ಕೇಳುತ್ತಿದೆ ಸಂಬಂಧದಲ್ಲಿ ರಕ್ತದ ಕಲೆ ತೊಳೆಯುವ ಸದ್ದು.
ಚಿಕ್ಕಮ್ಮನ ನಾದಿನಿಯ ತಮ್ಮ
ದೂರದ ರೈಲಿಂದಿಳಿದು ಬಂದವನೇ ಶಹರವನ್ನು ಕೇಳುವ
ಏನು ಬೇಕು ನನಗೆ ಏನು ಬೇಕು ನನಗೆ
ಪಾರ್ಕಿನಿಂದ ಮಂದಿ ಬಲೂನು ಮಕ್ಕಳೊಡನೆ ಮರಳುವಾಗ
ಸಂಜೆಯೆದುರು ಮಂಡಿಯೂರಿ ಅಂಗಲಾಚುವನು
ಏನು ಬೇಕು ನನಗೆ

ನಿದ್ದೆಯಲ್ಲಿ ಮೈಯಿಡೀ ಹರಿಯುವದು ಚೂರಿ
ರಕ್ತದ ಒಳ ಚರಂಡಿಗಳಲ್ಲಿ.
ಹಗಲಿಗೆ ಹೊಸ ಹುಡುಗಿಯನ್ನು ತಯಾರು ಮಾಡಿ
ಸಿಪ್ಪೆ ಸುಲಿದು ಕುಡಿಮೊಲೆಯ ತಿರುಪಿ ನಿಲ್ಲಿಸಿದ್ದಾರೆ ಚೌಕದಲ್ಲಿ
ಬೇಬೀ ಎಂದು ಯಾರೋ ಕೂಗಿದ ಭಾಸವೆ
ಕಿಪ್ಪೊಟ್ಟೆ ನೋವಿಗೆ ನೇವರಿಸುವ ಕೈ
ಜಾರುತ್ತಿದೆಯೆ ಲಂಗದೊಳಗೆ.

ಗಾಳಿಯ ಪಿಸು ನುಡಿಗೂ ಹಣದ ದುರ್ಗಂಧ
ತೊಳೆಯದ ಬಟ್ಟೆಗಳ ಮುಸುರೆ ಪಾತ್ರೆಗಳ ಬೆಟ್ಟ
ರಾಶಿ ಶಿಶುಗಳ ಬದಿಗೆ.
ಬರ್ಥ್ ಸರ್ಟಿಫಿಕೇಟು ತರಲೋ ಎಂಬಂತೆ ನಸುಕಿಗೇ
ಎದ್ದು ಮನೆಬಿಟ್ಟು ಹೋಗಿದ್ದಾರೆ ಮಕ್ಕಳು.
ಹಳದಿ ಗಟ್ಟದ ಮಗುವ ಎದೆಗವಚಿ ಆಯಿ ಮಳೆಯಲ್ಲಿ
ಓಡುತ್ತಿದ್ದಾಳೆ ಆಸ್ಪತ್ರೆಯಿಂದ ಆಸ್ಪತ್ರೆಗೆ

ಅವರು ಮಾತಾಡುತ್ತಲೇ ಇರುವರು ಒಬ್ಬರೇ
ಅಖಂಡ ರಾತ್ರಿಯ ಜತೆ
ಶ್ವಾಸಗಳ ಪೂರವನ್ನೆ ತರುವ ಸಮುದ್ರ ಗಾಳಿಯ ಜತೆ
ಮಣ್ಣಿನೊಳಗಿನ ಮರಗಳಂತೆ.

**ಜಯಂತ ಕಾಯ್ಕಿಣಿ**

✦

'**ಕಿ**ರಣವೊಂದು ಜಾರಿ' ಕವನ ಸಮಾಜಮುಖೀ ಕಣ್ಣಿಗೆ ಕಾಣಸುವ ಒಂಟಿತನದ, ಮೌನದ, ಏಕಾಂತದ ಗಾಢ ಅಭಿವ್ಯಕ್ತಿ. ಬೆಳಕಿನ ನಡುವೆ ಕಿರಣವೊಂದು ಜಾರುವುದನ್ನು ಕಾಣುವ ಅನುಭವ ಇದು. ಕಿರಣವೂ ಬೆಳಕೇ. ಆದರೆ ಅದನ್ನು ಪ್ರತ್ಯೇಕವಾಗಿ ಕಾಣುವುದು ಅನುಭವಕ್ಕೆ ಸೇರಿದ್ದು.

Onec to one ಅನುಭವ ಇದಲ್ಲ. ಇಲ್ಲಿ ಒಂದೇ ಚಿತ್ರವಲ್ಲ ಹತ್ತಾರು ಚಿತ್ರಗಳಿವೆ. ಇನ್ನೇನು ಒಂದು ಚಿತ್ರದ ಕುರಿತು ಮನಸ್ಸು ಕಲಕಬೇಕೆನ್ನುವಷ್ಟರಲ್ಲಿ ಇನ್ನೊಂದು ಚಿತ್ರ ಕಳೆಕಟ್ಟುತ್ತದೆ. ಇವುಗಳ ನಡುವೆ ಹರಿಯುವ ಸೂತ್ರವೆಂದರೆ ಅಂತರಂಗದ ಕುತೂಹಲ ಮತ್ತು ಅನುಕಂಪೆ.

'ಯಾಕವರು ಒಬ್ಬರೇ ಮಾತಾಡುವರು' ಎಂದು ಆರಂಭವಾಗುವ ಕವನದ ಈ ಪ್ರಶ್ನೆ ಕವನದುದ್ದಕ್ಕೂ ಈ ಪ್ರಶ್ನೆಗೆ ಉತ್ತರಿಸುವ ಗೋಜಿಗೆ ಹೋಗುವುದೇ ಇಲ್ಲ. 'ಅವರು ಮಾತನಾಡುತ್ತಲೇ ಇರುವರು ಒಬ್ಬರೇ' ಎಂಬ ಸಾಲೇ ಈ ಕವನದ ಅಂತಿಮ ನೆಲೆ. ಕೊನೆಯ ಮೂರು ಸಾಲುಗಳಲ್ಲಿ ಬರುವ —

'ಅಖಂಡ ರಾತ್ರಿಯ ಜತೆ
ಶ್ವಾಸಗಳ ಪೂರವನ್ನೇ ತರುವ ಸಮುದ್ರಗಾಳಿಯ ಜತೆ
ಮಣ್ಣಿನೊಳಗಿನ ಮರಗಳಂತೆ'

ಎಂಬ ಭಾವದಲ್ಲಿ ಈ ಮಾತುಗಳು 'ಮೂಕ ಮರ್ಮರ' ವಾಗುವ ಮತ್ತು ಇವನ್ನು ಅಲಕ್ಷಿಸಿ ಕಾಲ ಮುಂದುವರಿಯುವ ಸೂಚನೆಯಿದೆ. ಹಾಗೆಂದು ಈ ಮಾತುಗಳು ಕಾಲದೆದುರಿನ ಸವಾಲಲ್ಲ. ಅವರೆ ಅವರ ಪಾಡಿಗೆ ಅದು; ಇವರ ಪಾಡಿಗೆ ಇವರು. ಒಂದು ರೀತಿಯ ನಿಮ್ಮೋಡಿಸಿದ್ದೂ ನಿಮ್ಮಂತಾಗದ' ಸ್ಥಿತಿ.

ಒಟ್ಟು ಕವನಕ್ಕೆ ಸಾರಾಂಶವೊಂದಿದ್ದರೆ ಮತ್ತು ಓದುವ, ಕೇಳುವ ಹಾಗೂ ಅರ್ಥವಾಗುವ ದೃಷ್ಟಿಯಿಂದ ಅದನ್ನು ಹೀಗೆ ಆರೋಪಿಸಬಹುದು. ಅರಿವಿನ ಹಂತದ ಅನುಭವ ಓದುಗನಿಂದ ಓದುಗನಿಗೆ ಭಿನ್ನವಾಗಬಹುದು.

ಮನುಷ್ಯರೊಬ್ಬರು ಎಲ್ಲ ಕಡೆ ತಮ್ಮಷ್ಟಕ್ಕೆ ತಾವೇ ಮಾತಾಡುತ್ತಿದ್ದಾರೆ. ಅದು ಬಚ್ಚಲಿನಂತಹ ಖಾಸಗಿಯಲ್ಲಿ, ಏಣಿಯಂತಹ ಏರುವ/ಇಳಿಯುವ. ಪ್ರಾಸ್ತಾವಿಕ/ಮುಗಿಯುವ ಹಂತದಲ್ಲಿ ಅಥವಾ ಬಿಚ್ಚಿಕೊಂಡ ಸಾರ್ವಜನಿಕದಲ್ಲಿ ಈ ಮಾತುಗಳು 'ನಕ್ಕನೆ ಕಿರಣವೊಂದು ಜಾರಿದಂತೆ' ಎಂಬ ಆಕಸ್ಮಿಕದ ಪ್ರತಿಮೆಯಾಗುತ್ತವೆ. ನಾಕಷ್ಟು ನರೆತ ಕೂದಲಿನ ಹಿಂದೆ ಹತ್ತು ಕೂದಲು. ತನ್ನ ಸರೀಕರೆಲ್ಲ ಮಾಮೂಲು ಬದುಕಿನಲ್ಲಿ ಮುಳುಗಿದ್ದರೆ ಇವರು ಮಾತ್ರ ಹೀಗೆ. ಏನೂ ಆಗಿಲ್ಲದ ಸ್ಥಿತಿ.

ಇದಕ್ಕೆ ಪರ್ಯಾಯವಾಗಿ ಅಥವಾ ವಿರುದ್ಧವಾಗಿ ಒಬ್ಬ ಚಿಕ್ಕ ಹುಡುಗ. ಶಾಲೆಗೆ ಸೇರಲಾಗದೆ ಕಸ ಹೆಕ್ಕುವವ. ಮೇಲೆ ಹೇಳಿದ ಮುದುಕನಿಗೆ ಬದುಕು ನಿಷ್ಫಲವಾಗಿದ್ದರೆ ಈ ಚಿಕ್ಕ ಹುಡುಗನಿಗೆ ಬದುಕು ಅರಳುವುದೇ ಇಲ್ಲ.

ನಂತರದ ಭಾಗದಲ್ಲಿ ಮನುಷ್ಯ - ಮನುಷ್ಯರ ನಡುವಣ ರಕ್ತ ಸಿಕ್ತ ಸಂಬಂಧ, ವ್ಯವಹಾರದ ಸೂಕ್ಷ್ಮ ಪ್ರಸ್ತಾಪವಿದೆ. ತನಗೇನು ಬೇಕೆಂದೇ ತಿಳಿಯದ ಮಂದಿಯೂ ಬದುಕುತ್ತಿರುವ ಮತ್ತು ಬೇಕಾದ್ದಕ್ಕೆಲ್ಲ – ತನಗೇನು ಬೇಕೆಂದು ತಿಳಿಯಲು – ಹಪಹಪಿಸುವ ವ್ಯಕ್ತಿಯ ಕುರಿತ ವ್ಯಂಗ್ಯವಿದೆ. ಆತ ಕೇಳುವುದು ಶಹರವನ್ನು; ಮಂಡಿಯೂರಿ ಅಂಗಲಾಚುವುದು ನಂಜೆಯನ್ನು, ಸಮಷ್ಟಿ ಮತ್ತು ಮನುಷ್ಯನ ನಿಯಂತ್ರಣಕ್ಕೆ ಹೊರತಾದ ಸಂಗತಿಗಳಲ್ಲಿ ತಾನೇ ಮನುಷ್ಯ ಚಿಕ್ಕವನಾಗುವುದು?

ಈ ಎಲ್ಲದರೊಂದಿಗೆ ಶೋಷಣೆಯ, ಅತ್ಯಾಚಾರದ ತಣ್ಣಗಿನ ಆದರೆ ಬೆಚ್ಚಿಬೀಳಿಸುವ ಚಿತ್ರವಿದೆ. ಇನ್ನೂ ಬದುಕಿಗೆ ತಯಾರಾಗದ ಮುಗ್ಧೆಯೊಬ್ಬಳನ್ನು ಪ್ರದರ್ಶನಕ್ಕಿಟ್ಟಂತಿದೆ. ಆಕೆಯಿನ್ನೂ ದೊಡ್ಡವಳೇ ಅಲ್ಲ. ಬೆಳೆಯುವ ನೋವನ್ನು ನೇವರಿಸುವ ನೆಪದಲ್ಲಿ ಲೈಂಗಿಕ ಶೋಷಣೆ ನಡೆದಿದೆ. 'ಕುಡಿಮೂಲೆಯ ತಿರುಪಿ ನಿಲ್ಲಿಸಿದ್ದಾರೆ ಚೌಕದಲ್ಲಿ', 'ಬೇಬೀ ಎಂದು ಯಾರೋ ಕೂಗಿದ ಭಾಸವೆ' ಮತ್ತು 'ಕಿಬ್ಬೊಟ್ಟೆ ನೋವಿಗೆ ನೇವರಿಸುವ ಕೈ ಜಾರುತ್ತಿದೆಯೆ ಲಂಗದೊಳಗೆ' ಎಂಬ ಸಾಲುಗಳು ಒಂದು ಮೌನದ ದುರಂತವನ್ನು ಹೇಳುತ್ತಿವೆ. ಈ ಸಾಲುಗಳ ನಡುವೆ ಇಣುಕಿದರೆ ಬೀಭತ್ಸ ಕಥೆ ಬಿಚ್ಚಿಕೊಳ್ಳುತ್ತದೆ.

ಎಲ್ಲ ಕಡೆ ಭ್ರಷ್ಟತೆ. 'ಗಾಳಿಯ ಪಿಸುನುಡಿಗೂ ಹಣದ ದುರ್ಗಂಧ'. ಶೋಷಣೆಯ ಪ್ರತೀಕ, ಫಲಶ್ರುತಿ, ದುರಂತವಾಗಿರುವ ಶಿಶುಗಳು. ಹೀಗೆ ಹುಟ್ಟಿದ ಮಕ್ಕಳು ತಮ್ಮ ಹುಟ್ಟನ್ನು ತಾವೇ ಸಾಬೀತು ಮಾಡಬೇಕಾದ ಅಸಹನೀಯ ದುರಂತ. ಹೀಗಲ್ಲದಿದ್ದರೂ ಬದುಕಿ ಉಳಿಯಬೇಕಾದ ಅನಿವಾರ್ಯತೆಗಾಗಿ ಈ ಮಕ್ಕಳು ದಿನವಿಡೀ ಅಲೆಯಬೇಕಾಗಿದೆ. ಈ ನಡುವೆ ಬದುಕುಳಿಯಲಾಗದ ಮಗುವೊಂದನ್ನು ಉಳಿಸುವ ಸಲುವಾಗಿ ಅದು ಮಾತೃಹೃದಯದ ತಾಯಿ ಅಲೆದಾಡುತ್ತಿದ್ದಾಳೆ – 'ಆಸ್ಪತ್ರೆಯಿಂದ ಆಸ್ಪತ್ರೆಗೆ' (ಇದೇ ಕವಿಯ 'ಅಮೃತಬಳ್ಳಿ ಕಷಾಯ' ನೆನಪಾಗುತ್ತಿದೆ).

ಈ ಕವನದ ವಿನ್ಯಾಸ ಸವ್ಯದ ಆರಂಭದ್ದು. ಛಿದ್ರ ಚಿತ್ರಗಳನ್ನು ಹೊಸೆಯುತ್ತ ಬೇರೆ ಬೇರೆ ಪ್ರತಿಮೆಗಳು ಸೃಷ್ಟಿಯಾಗುತ್ತಲೂ, ಒಟ್ಟಾರೆ ಕವನ ಒಂದು ದುರಂತ ಸತ್ಯವನ್ನು ಹೇಳುವ ಕವನವಿದು.

ಇಲ್ಲಿನ 'ಕಿರಣ' ಒಂದು. ಬೆಳಕಿನ ಪ್ರತಿನಿಧಿಯಾದರೂ ಇದು ಫ್ಲ್ಯಾಶ್. ಈ ಕಿರಣದ ಬೆಳಕಿನಲ್ಲಿ ಕಾಣುವ ಬದುಕುಗಳು ನೂರಾರು. ಅವುಗಳ ವಿಷಾದವನ್ನು ಯಾರಲ್ಲಿ ಹೇಳಬೇಕು? ಕೊನೆಯಿಲ್ಲದ ಈ ಪ್ರದಕ್ಷಿಣೆಯನ್ನು ಸಾಗಿಸುವ ಕಣ್ಣುಗಳು ಏನೂ ಮಾಡಲಾರವಾದರೂ ತಮ್ಮಷ್ಟಕ್ಕೆ ತಾವೇ ಮಾತಾಡಬಹುದಲ್ಲ! ಗಾಳಿ ಬೀಸುವುದು ಅದರ ಕರ್ಮವಾದಂತೆಯೇ ಈ ಎಲ್ಲ ಕರ್ಮಗಳ ಉಸಿರನ್ನು ಅದು ಒಯ್ಯುತ್ತದೆ; ತರುತ್ತದೆ. ಈ ತರಂಗವನ್ನು ಅದೇ ಅಂತರದಲ್ಲಿ ಹಿಡಿದಿಡಲು ಸಾಧ್ಯವಾಗುವವನಿಗೆ ಅದು ಅರ್ಥವಾಗುತ್ತದೆ. ಆದರೂ ಆತ ಅಸಹಾಯಕ.

ಕೊನೆಗೆ ಆತ ಮಾಡಬಹುದಾದ್ದಾದರೂ ಏನು? ತಾನು ಆ ನಿಟ್ಟುಸಿರನ್ನು ನುಂಗಿ ಮತ್ತೆ ಬದುಕಿನ ಮೂಲಶ್ವಾಸವನ್ನು ನೀಡುವ ಮರಗಳಂತೆ ನೆಲದಲ್ಲಿ ಊರಿ ಕಾಲಕ್ಕೆ ಸಾಕ್ಷಿಯಾಗುವುದು.

ಇದೊಂದು ಶಕ್ತ ಕವನ. ಕವನದ ವಿವರಣೆಯಲ್ಲಿ ಏಕತಾನತೆಯಿಲ್ಲ. ನೀರಸತೆಯನ್ನು ಅನುಭವಿಸುವ ಪಾಡು ಓದುಗನಿಗಿಲ್ಲ. ಬದಲಾಗಿ ಹತ್ತಾರು ಹಾದಿಗಳನ್ನು ನಿರಂತರವಾಗಿ ಒಂದುಗೂಡಿಸಿ ಒಂದು ನಿಚ್ಚಳ ಲೋಕವನ್ನು ಸೃಷ್ಟಿಸುತ್ತದೆ. ತನ್ನ ಭಾವಾಭಿನಯದಿಂದ ವೈಚಾರಿಕ ಆಳಕ್ಕಿಳಿಯುತ್ತದೆ. 'ಕೊಲಾಜ್' ಮಾಡಲು ಹೊರಟು ಗೋಜಲು ಮಾಡುವ ಅನೇಕ ಕವನಗಳ ಸಂದಿಗ್ಧಗಳಿಗೆ ಈ ಕವನದಲ್ಲಿ ಕಾವ್ಯಮಾರ್ಗದ ಒಂದು ಸ್ಪಷ್ಟ ಸಮರ್ಥ ಉತ್ತರವಿದೆ. ಗೋಪಾಲಕೃಷ್ಣ ಅಡಿಗರ 'ಚಿಂತಾಮಣಿಯಲ್ಲಿ ಕಂಡ ಮುಖ' ಅಷ್ಟೊಂದು ಜನರ ನಡುವೆ ಸಹಸ್ಪಂದಿಯೊಂದಿಗೆ ನಡೆಯುವ ಏಕಾಂತ ಭಾವ ಸಂಭಾಷಣೆಯನ್ನು ಸಮರ್ಥವಾಗಿ ಹೇಳಿದರೆ, ಅದೇ ರೀತಿಯ ದೃಷ್ಟಿಯನ್ನು ಅನ್ಯರಂತೆ ಬೀರುವ, ಮಾತಿನೊಳಗೆ ಮೌನವನ್ನು ಮತ್ತು ಸದ್ದುಗದ್ದಲದೊಳಗೆ ಏಕಾಂತವನ್ನು ಕಾಣುವ ತುಡಿತ ಜಯಂತ ಕಾಯ್ಕಿಣಿಯವರ 'ಕಿರಣವೊಂದು ಜಾರಿ' ಕವನದಲ್ಲಿದೆ.



ಸಿರಿ, ಬ್ರಾಹ್ಮಿನ್ ವ್ಯಾಲಿ,
ಮಡಿಕೇರಿ, ಕೊಡಗು – ೫೭೧ ೨೦೧

# ಪರ್ವತವಾಣಿ ಕಂಡ ರಂಗಭೂಮಿ

■ ಪ್ರೊ. ಕ.ವೆಂ. ರಾಜಗೋಪಾಲ

'ಪ್ರೀತಿ ಮಾಡು ತಮಾಷೆ ನೋಡು' ಶಂಕರನಾಗ್‌ನ ಸಿನೆಮಾ ಇದು. ಸ್ವಾತಂತ್ರ್ಯಾನಂತರದ ಮಧ್ಯಮವರ್ಗಗಳ ಸ್ಥಿತಿಯನ್ನು ದಾಖಲಿಸುವ ಒಂದು ಚಿತ್ರ ಕೂಡ. ಇದರ ಭಾಷೆ ಅದೇ ಕಾಲದ ಬಾಲಣ್ಣ ಮತ್ತು ಶಂಕರನಾಗ್ ಅಂಥ ನಟರನ್ನ ನೆನಪಿಸಿದುದರಿಂದ ಈ ವಿಚಾರವನ್ನು ನನ್ನ ಪರಿಚಿತರೊಂದಿಗೆ ಹಂಚಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೇನೆ. ಪರ್ವತವಾಣಿ ಸ್ವಾತಂತ್ರ್ಯಾನಂತರ, ಕೈಲಾಸಂರನ್ನು ರಂಗಭೂಮಿಯಲ್ಲಿ ಹಿಂದಕ್ಕೆ ಹಾಕಿದ ನಟ, ನಾಟಕಕಾರ ಮತ್ತು ಮಧ್ಯಮವರ್ಗದ ಪ್ರತಿನಿಧಿ ನಟ. ಅವರ 'ವಿಪರ್ಯಾಸ' ಮತ್ತು 'ರಣಹದ್ದು' ಇವೆರಡೂ ಮಧ್ಯಮವರ್ಗದ ವಿದ್ಯಾವಂತರಿಗೆ ಒಂದು ವಾಸ್ತವ ಸೀಮಿತ ಅನುಭವವನ್ನು ದಾಖಲಿಸಿ ಪರಿಣಾಮಕಾರಿಯಾದುದು. ಇದರ ನಟರು ಸಾಮಾನ್ಯರು. ಆದರೆ 'ನಟರು'. ಕನ್ನಡ ರಂಗಭೂಮಿಯು ಶ್ರೀರಂಗರಿಂದಲ್ಲದೆ ಪರ್ವತವಾಣಿ ಮುಖ್ಯ ನಾಟಕ ಪ್ರೇಮಿಗಳೆನ್ನಬಹುದಾದ ನಾಟಕಕಾರರು (ಹಲವಾರು ಪ್ರಹಸನಕಾರರು) ಎಂಟರ್‌ಟೈನ್‌ಮೆಂಟನ್ನು ನಾಟಕ ಪ್ರಯೋಗದ ಪರಮಾರ್ಥವೆಂದರೂ ಪ್ರೇಕ್ಷಕರನ್ನೂ ಜೊತೆಗೆ ರಂಗಭೂಮಿಯನ್ನೂ ಜೀವಂತರಾಗಿಸುವಲ್ಲಿ ಯಶಸ್ವಿಯಾದವರು ಇವರ ಸವಿವರವು ಅಗತ್ಯವಾಗಿದೆ.

ಬಾಲಣ್ಣ ಮತ್ತು ಶಂಕರ್‌ನಾಗ್ ಮೂಲತಃ ನಟರಾಗಿ ಸಿನೆಮಾದಲ್ಲಿದ್ದರೂ ಕೂಡ ಯಶಸ್ವಿಯಾದ ನಟರು– ಇಂಥವರು ಬೇರೆಯೂ ಇರಬಹುದು. ಆದರಿಂದ ಮೇಲೆ ಗುರುತಿಸಿರುವ ವಿಚಾರಕ್ಕೆ ಈ ಇಬ್ಬರು ಗೆಳೆಯರು ಸಾಕಾದೀತು. ಈ ಸಮಯದಲ್ಲಿ ಕನ್ನಡ ರಂಗಭೂಮಿಯಲ್ಲಿ ಸಂಗೀತನಾಟಕ ಸಮಯವು ಮುಗಿದು ಅದರ ಥಿಯೇಟರ್ ಸ್ಪಿರಿಟ್ ಅಂದರೆ 'ಸ್ಪಂದನವು' ಉಳಿದಿರುವಂತೆ ಮಾಡಿದರು. ಆದರೆ ಅದು ಗದ್ಯ ನಾಟಕಗಳ ಸತ್ವದಿಂದ ಮತ್ತು ರೀತಿ-ನೀತಿಯಿಂದ ರೂಪಕಗಳಾಗಿ ಪರಿಣಮಿಸಿದವು.

ಪರ್ವತವಾಣಿ(ಕೈಲಾಸಂ ಸೇರಿದಂತೆ) ಅನುರೂಪಗೊಳಿಸಿದ ಇಂಗ್ಲಿಷ್ ಗದ್ಯ ನಾಟಕಗಳು ಸಮಕಾಲಿಕ ಸಿನಿಮಾಗಳಿಗೆ ಹೊಸ ಪ್ರೇರಣೆಯನ್ನು ಅಂದರೆ ರಂಗಭೂಮಿಯ ಶ್ರೇಷ್ಠ ನಟನಟಿಯರಿಗೆ ಒಳ್ಳೆಯ ಅವಕಾಶಗಳನ್ನು ಉಂಟುಮಾಡಿರುವುದು ಗಮನಿಸಬಹುದು.

ನಾನು ನೆನಪು ಮಾಡುತ್ತಿರುವ ಪರ್ವತವಾಣಿಯ ನಾಟಕಗಳು ನಟರನ್ನು ಮಾತ್ರ ಅವಲಂಬಿಸಿದ್ದವು ಕಲಿತ ವರ್ಗದ ಪ್ರೇಕ್ಷಕರು ಮತ್ತು ಒಂದು ತಲೆಮಾರಿನ ಆರ್ಥಿಕ ಕ್ರಿಯೆಯೆಂದು ಗಣಿಸಬೇಕಾದ ತರುಣ ವರ್ಗದ ಭಾವುಕತೆಯಿಂದ ಕೂಡಿರುವ ಪ್ರೀತಿ-ಪ್ರೇಮ; ಪರ್ವತವಾಣಿಗೆ ಮಧ್ಯಮವರ್ಗದ ರಂಗವನ್ನು ಉಳಿಸುವ ಹೊಣೆಗಾರಿಕೆ ಇತ್ತೆಂಬುದನ್ನು ನೆನೆಯುವುದು ಉತ್ತಮ. ನಟನಾಗಿ ನಾಟಕಕಾರನಾಗಿ ಕಡೆಗೆ ಪ್ರದರ್ಶನದ ಹೊಣೆಗಾರಿಕೆಯನ್ನೂ ಗೆಳೆಯರ ನೆರವಿನಿಂದ ಹೊತ್ತವರು ಅವರು ಹಣವಂತಿಕೆಯ ಗೀಳು ಇಲ್ಲದವರು. ಹಣವಂತಿಕೆಯ ಗೀಳು ಸಿನಿಮಾ ವರ್ಗಕ್ಕೆ ಇಂದಿಗೂ ಪ್ರಯೋಜನಕಾರಿಯಾಗಿರುವುದನ್ನು ಕಾಣುತ್ತೇವೆ. ಯಾವುದೇ ಸಿನೆಮಾದ ಯಶಸ್ಸನ್ನು ಅದು ಓಡುವ ಕಾಲವನ್ನು ಹಣದ ಅಥವಾ ಪ್ರತಿಫಲ ದೃಷ್ಟಿಕೋನದಿಂದ ನೋಡುತ್ತಾರೆ. ಅದಕ್ಕೆ ಹಣವನ್ನು ಹೂಡುವವರು ಸಿನೆಮಾದ ಕಲಾವಂತಿಕೆಯ ಸಾಮರ್ಥ್ಯವನ್ನು ವಿಮರ್ಶಿಸುವವರು ಖಂಡಿತಾ ಆಗಿರುವುದಿಲ್ಲ. ನಿರ್ದೇಶಕ ಕೂಡ ಈ ಹಣವಂತನಿಗೆ ಶರಣಾದವನು. ನಮ್ಮ ಸಿನೆಮಾ ಕಲಾತ್ಮಕತೆಗಿಂತಲೂ ಕಮರ್ಷಿಯಲ್ ಕಂಬಿಗಳ ಮೇಲೆ ಓಡುವ ರೈಲಾಗಿದೆ. ಅದರ ಪ್ರೇಕ್ಷಕರೂ ಕೂಡ ತಾತ್ಕಾಲಿಕ ಸಂತೋಷಕ್ಕೆ ಮಾರುಹೋಗುವವರು — ಅಂಥ ವಿಮರ್ಶೆಗೆ ನಾನಿಲ್ಲಿ ಪ್ರಯತ್ನಿಸುತ್ತಿಲ್ಲ.

ರಂಗಭೂಮಿಯ ವಸ್ತುವಿಗಿಂತಲೂ ನಟರು ನಟಿಯರು ಟೀವಿ ಮಾಧ್ಯಮಕ್ಕೆ ತಮ್ಮನ್ನು ಮೊದಲು ಒಪ್ಪಿಸಿಕೊಳ್ಳುತ್ತಿರುವವರೇ ಆಗಿದ್ದಾರೆ. (ಬಿ.ವಿ. ಕಾರಂತರ ಶಿಷ್ಯರು ಇಂಥದಕ್ಕೆ ಸೋತು ತಮ್ಮ 'ನಟ'ನನ್ನು ತಾವೇ ಅಲ್ಲಗಳೆಯುತ್ತಿರುವಂತೆ ಕಾಣುತ್ತಿದೆ. ಇಂದಿನ ಟೀವಿ ವಸ್ತು ಸಹ ಪರ್ವತವಾಣಿಯನ್ನು ತಿರಸ್ಕರಿಸಲು ಸಾಧ್ಯವಾಗಿಲ್ಲ) ಇದಕ್ಕೆ ಮುಖ್ಯ ಕಾರಣವೆಂದರೆ ಪರ್ವತವಾಣಿಯು ಎದುರಿಸಿದ ಬಡತನ ಮತ್ತು ರಂಗಭೂಮಿಯ ಪ್ರೀತಿಯನ್ನು ಕಟ್ಟಿಕೊಂಡ 'ನಟ'. ಆತ ಇದನ್ನು ಹೆಚ್ಚು ವಿಸ್ತರಿಸದೇ ಕನ್ನಡ ರಂಗ ಭೂಮಿಯ ಆಧುನಿಕತೆಯನ್ನು ಗಮನಿಸುತ್ತಿದ್ದೇನೆ. ಏಕೆಂದರೆ ಅಭಿನಯಕ್ಕೆ ಬೇಕಾಗುವಷ್ಟು ಒರಿಜಿನಲ್ ನಾಟಕಗಳು ಸೃಷ್ಟಿಯಾಗುತ್ತಿಲ್ಲ. ಅದು ಈಗಲೂ ಕಾದಂಬರಿಕಾರರನ್ನು ಉತ್ತೇಜಿಸುತ್ತಾ ಇರುವಂತಿದೆ. ಏಕೆಂದರೆ, ಈ ಮಾಧ್ಯಮವು ಆವಾಹಿಸಿದರೆ ಸಿನಿಮಾ ಆಗಬಲ್ಲುದು. ಕೃತಕವಾಗುವ ನಾಟಕವೂ ಆಗಬಹುದು.

ಹುಟ್ಟಿನಿಂದ ನಾಟಕವಾಗಿ ಸಾಹಿತ್ಯ ಮತ್ತು ರಂಗಪ್ರದರ್ಶನ. ಈ ಎರಡೂ ಒಂದೇ ಆಗಿರುವ ಕೃತಿಗಳು ಸಾಹಿತಿಯ ಕೈಮೀರಿದಂತೆ ತೋರುತ್ತಿದೆ. ಅಂದ ಮೇಲೆ ಬಿ.ಸಿ. ಮತ್ತು ಬಿ.ವಿ. ಕಾರಂತರಂತಹ ನಿರ್ದೇಶಕರು?? ಪ್ರಶ್ನೆಯಾಗಿಯೇ ಉಳಿಯುತ್ತಾರೆ.

ನಾಟಕವು ಸಾಹಿತ್ಯವಾಗಿರುವಲ್ಲಿ ನಾಟಕಕಾರನಲ್ಲಿ 'ಕವಿ' ಇರಬೇಕು. ಬರಿಯ ಭಾಷೆಯನ್ನು ಮೀರಿದ ಅನುಭವದ ಕೋಟೆಯ ಮೇಲೆ ಧಾಳಿ ಮಾಡಿದ್ದಲ್ಲದೇ 'ನಟ'ನನ್ನು ಅಂಥ ಕೃತಿಯು ರಂಗದರ್ಶನಕ್ಕೆ ಆಧಾರವಾಗಲಾರದು. ಮಹಾಕಾವ್ಯದ ದರ್ಶನದಂತೆ. 'ರಂಗದರ್ಶನವೂ ಗಟ್ಟಿಯಾದ ಮತ್ತು ನೇರವಾದ ಬದುಕಿನ ಅನುಭವದಂತೆ ಒದಗುವಂಥದೂ ಅದಕ್ಕೆ ನಟನೇ ಕಾರಣಕರ್ತ ಎಂಬುದನ್ನು ಮರೆಯಬಾರದು.

ನಾಟಕಕಾರನಲ್ಲಿ ನಟನಿರಬೇಕೆನ್ನುವಲ್ಲಿ ಆತನಲ್ಲಿ ಬದುಕಿನ ದರ್ಶನವನ್ನು ನೇರವಾಗಿ ಕಾಣುವಂತಹ ಕವಿ ಇರಬೇಕು. ಇದಕ್ಕೆ ಭಾಸ ಮತ್ತು ಕಾಳಿದಾಸರು ಇಂದಿಗೂ ಒಳ್ಳೆಯ ಉದಾಹರಣೆಯಾಗುತ್ತಾರೆ. ಪಾತ್ರಮಾತ್ರರಿಗೆ ಶೇಕ್ಸ್‌ಪಿಯರ್ ಇದ್ದ ಹಾಗೆ. ಏಕೆಂದರೆ, ನಾಟಕಕಾರನು 'ನಟ'ನನ್ನು ಅಧರಿಸದೇ ತನ್ನ 'ಕ್ರಿಯಾಶೀಲತೆ' (ಕ್ರಿಯೇಟಿವಿಟಿ)ಯನ್ನು ರಕ್ಷಿಸಿಕೊಳ್ಳಲಾರ. ತನ್ನ ಕಾಲದ 'ನಟ'ರು ಸಾಲದೆಂದು ಅನ್ನಿಸುತ್ತಿದ್ದರೂ ಅಷ್ಟೆ. ಶ್ರೀರಂಗರ ಸಮಸ್ಯೆಯೂ ಇದೇ ಆಗಿತ್ತೆನ್ನಬಹುದು. ಆದುದರಿಂದ ಅವರು ಬಿ.ವಿ. ಕಾರಂತರಿಗೆ ಮಾತ್ರ ತಮ್ಮ ನಾಟಕ ಪ್ರದರ್ಶನಕ್ಕೆ ಸ್ವಾತಂತ್ರ್ಯವನ್ನು ಕೊಟ್ಟಿದ್ದರಷ್ಟೆ. ಈ ನಿಟ್ಟಿನಲ್ಲಿ ಪರ್ವತವಾಣಿಯು ಸ್ಥಿತಿಗತಿಯನ್ನು ಅಳೆಯಬೇಕಾಗುತ್ತದೆ. ಒಳ್ಳೆಯ 'ನಟ'ರಾಗಿದ್ದರೆಂಬುದನ್ನು ಅವರು ಬರೆದ ನಾಟಕಗಳ ಪಾತ್ರಗಳಿಗಿಂತಲೂ ಎಂ.ಆರ್.ಶ್ರೀಯವರ 'ನಾಗರಿಕ'ದಲ್ಲಿ ಪೂಜಾರಿಯಾಗಿದ್ದು, ಹುಟ್ಟಿನಿಂದ ಆರತಿಯ

ತಟ್ಟೆಯನ್ನು ಎಸೆದ ಸಂದರ್ಭವನ್ನು ನೋಡಿದ್ದೇನೆ. (ಬೇಲೂರು ಸಾಹಿತ್ಯ ಸಮ್ಮೇಳನ) — ಹೇಗೆಂದರೆ ಅವನನ್ನು ರೂಪಿಸುವಲ್ಲಿ ತನ್ನ ಸುತ್ತಮುತ್ತಲ ಸಮಕಾಲೀನ ವಿದ್ಯಾವಂತರ ಬದುಕಿನ ಆಶಯಗಳನ್ನು ಅಭಿನಯಕ್ಕೆ ಅಳವಡಿಸಲು ಮಾಡಿದ ಪ್ರಯತ್ನಗಳಲ್ಲಿದೆ. ಅಂಥ ಕೃತಿಯಾಗಿ 'ಬಹದ್ದೂರ್ ಗಂಡ'ದಲ್ಲಿ ಬಿ.ವಿ. ನಾರಾಯಣರಾವ್ ವಿಜೃಂಭಿಸಿದ ರೀತಿ ಅದ್ವಿತೀಯವಾದುದು. ಎಂಥ ವಿಮರ್ಶಕನಿಗೂ ಕಣ್ಣಿಗೆ ಕಟ್ಟಿ ಬದುಕಿನ ಸ್ವರೂಪವನ್ನು ಬಯಲು ಮಾಡಿದಂಥದು. ಹಾಗೆಯೆ ಹಣ-ಹದ್ದು ನಾಟಕದ ಜೀವನ ದರ್ಶನ, ಅದೇ ರುಚಿಯ ಶಂಕರ್‌ನಾಗ್ ಅಭಿನಯದ 'ಪ್ರೀತಿ ಮಾಡು - ತಮಾಷೆ ನೋಡು' ಈಗಲೂ ಅದು ಟೀವಿ ಪ್ರದರ್ಶನವಾಗಿ ಬಾಲಣ್ಣ- ನರಸಿಂಹರಾಜು, ನಾರಾಯಣಸ್ವಾಮಿ ಹಾಗೂ ಮುಖ್ಯವಾಗಿ ಶಂಕರ್‌ನಾಗ್ - ನಟರನ್ನು ರಂಗಭೂಮಿಯ 'ಹುಟ್ಟು'ನಟರನ್ನಾಗಿ ಅದೂ ಪರ್ವತವಾಣಿಯವರ/ ಆಶಯವನ್ನು ಕಾಪಾಡಿದರು. — ಅದೇ ಆಶಯಗಳನ್ನು ಸಿನೆಮಾ ಮಾಡಲು ಕಾರಣಗಳು ಸ್ಪಷ್ಟವಾಗಿವೆ. ೧. ಹಣದಬಲ, ೨. ಸಮಕಾಲಿಕ ದರ್ಶನ, ೩. ರಂಗಭೂಮಿಯ ಪ್ರದರ್ಶನದಲ್ಲಿ 'ರಿಯಲಿಸಂ' ಅನುಭವಿಸುವ ಕೊರತೆಗಳನ್ನು ತುಂಬುವ ಸಾಮರ್ಥ್ಯ ಇಷ್ಟಾದರೂ ಸಿನಿಮಾ ನಟನನ್ನು ನೇರವಾಗಿ ಜೀವಂತವಾಗಿ ಪ್ರತಿಕ್ಷಣವನ್ನೂ ನಟನೆಯ ಕಲೆ ಸಾಧಿಸಬಲ್ಲ ಹಾಗೂ 'ರಂಗದರ್ಶನ'ವನ್ನು ರಮ್ಯವಾದ ರೂಪದಲ್ಲಿ ಮಾತ್ರ ತೋರಿಸಬಲ್ಲ ಮಾಧ್ಯಮ ಎಂಬ ಒಂದು ಸತ್ಯವನ್ನು ಇಲ್ಲಿ ಮರೆಯುವಂತಿಲ್ಲ. ಈಗಿನಂತೆ ಅಕಾಡೆಮಿಗಳು ನೆರವಾಗಿದ್ದಲ್ಲಿ ಶ್ರೇಷ್ಠ ನಾಟಕಗಳು 'ಕಾದಂಬರಿ' ರೂಪದಲ್ಲಿ ಅಥವಾ ಸಿನೆಮಾ ಆಗದೇ ಗಮನ ಸೆಳೆಯುತ್ತಿರಲಿಲ್ಲ. ಅಂದರೆ ನಾಟಕಕಾರನು ಉಳಿಯುತ್ತಿರಲಿಲ್ಲ. 'ನಟ'ನೆಂಬ ಕ್ರಿಯಾ ಸತ್ವವು ಎಲ್ಲ ಕಾಲದಲ್ಲೂ ನೇರವಾಗಿ ಬದುಕಿನಿಂದ ಪ್ರೇರಿತವಾಗಿ ಅದರ 'ದರ್ಶನ'ವನ್ನು ಅಭಿನಯದ ಪ್ರದರ್ಶನದ ಮೂಲಕ ಪ್ರೇಕ್ಷಕನಿಗೆ ಒದಗಿಸುವಂಥದು. ಬಾಲಣ್ಣ ಪ್ರೀತಿ ಮಾಡು ತಮಾಷೆ ನೋಡು ಚಿತ್ರದಲ್ಲಿ ಸಂಧಿಗ್ಧ ಸಂದರ್ಭವೊಂದರಲ್ಲಿ ಫೋನಿನ ಕರೆಗೆ ಮುಂದುವರೆಯುವ ರೀತಿ ಆಶ್ಚರ್ಯವನ್ನುಂಟುಮಾಡುತ್ತದೆ. ರಂಗದ ಮೇಲಾಗಿದ್ದರೆ ಇಂತಹ ಸ್ಥಿತಿಗತಿಯನ್ನು ದೃಶ್ಯದಿಂದ ಬೇರ್ಪಡಿಸಿದಂತಾಗುತ್ತಿರಲಿಲ್ಲ; ಸಂದರ್ಭವು ಸಂಪೂರ್ಣವಾಗಿ 'ಧ್ವನಿ'ಸುತ್ತಿತ್ತು. ನಾಟಕಕಾರನು ಐತಿಹಾಸಿಕವಾಗಿ ಬರುವುದೇ ರಂಗಭೂಮಿಯಲ್ಲಿ ಅಭಿನಯದ ಹಾಗೂ ದರ್ಶನದ ಸಾಧ್ಯತೆಗಳನ್ನು ಕಾಣುವಂತಾದ ನಂತರವೇ.

ಕನ್ನಡದ ಮೊದಲ ನಾಟಕವೆಂದು ಮಿತ್ರಾವಿಂದ ಗೋವಿಂದ (ಸಿಂಗಾರಾರ್ಯ) ಎಂಬ ಕೃತಿಯನ್ನು ಗುರುತಿಸುವಲ್ಲಿ ಅಂಥ ಪ್ರದರ್ಶನದ ಅವಶ್ಯಕತೆಯಲ್ಲದೇ ಸಾಧ್ಯತೆಯಿಲ್ಲದೆ ಅದರ ರಚನೆಯಾಗಿದ್ದಿರಲಾರದು. ಅದಕ್ಕೂ ಮುಂಚೆ ಚಿಕ್ಕದೇವನ ರಾಜಸಭೆಯಲ್ಲಿ ಈ ಕೃತಿಯ ರಚನೆಗೆ ಆಧಾರಗಳಿದ್ದಿರಬೇಕಾಗುತ್ತದೆ. ಏನೂ ಇಲ್ಲದೆ ಈ ಕೃತಿ ರಚನೆಯಾಗಿದ್ದಿರಲಾರದು. ಅರಮನೆಗೆ ಸಂಬಂಧಿಸಿದ್ದ ದೇವದಾಸಿಯರು ಭರತನಾಟ್ಯದಲ್ಲಾದರೂ ಒಂದು ಮಂಗಳಕ್ಕೆ ಸಂಬಂಧಿಸಿದಂತೆ ಕಾಳಿದಾಸನ ಮಾಲವಿಕಾಗ್ನಿಮಿತ್ರ, ಹರ್ಷನ 'ರತ್ನಾವಳಿ' ಕೃತಿಗಳ ಕಥನ ವಿಚಾರವಾದರೂ ಅರಿವಿಗೆ ತರುವಂಥ ಆಚರಣೆಗಳಿದ್ದಿರಬೇಕಾದೀತು. ಮಿತ್ರಾರವಿಂದ ಗೋವಿಂದವು ಸಿಂಗಾರಾರ್ಯನ ರಸಿಕತನವನ್ನೂ, ಜಾಣ್ಮೆಯನ್ನೂ ತೋರಿಸುವಂಥ ಅಂದಿಗೆ ಸಮಕಾಲೀನ ಕೃತಿಯಾಗಿದ್ದಂತೆ ಕಂಡುಬರುತ್ತದೆ. ಮೈಸೂರಿನ ಅರಮನೆಯಲ್ಲಿ ನಟರಿದ್ದಿರಲಿಲ್ಲ. ಇದ್ದವರು ಅಂತಃಪುರದ ದೇವದಾಸಿಯರು ಮತ್ತು ಮಂಗಳ ಕಾರ್ಯಗಳಲ್ಲಿ ಅವರು ಭಾಗಿಗಳಾಗುತ್ತಿದ್ದರು. ಅವರಿಗೆ ಸಂಬಳ(ಆಶ್ರಯ)ವನ್ನು ಕೊಡಲಾಗುತ್ತಿತ್ತು. ಇದೇ ರೀತಿಯಲ್ಲಿ ನಟರಿರಲಿಲ್ಲ. ಅದೇ ಕಾಲದಲ್ಲಿ ಜಾನಪದ ರಂಗಭೂಮಿಯಲ್ಲಿ ನಟರು ಮಾತ್ರ ಸ್ತ್ರೀ ಪಾತ್ರಧಾರಿಗಳಿದ್ದರು. ಗ್ರೀಕ್ ರಂಗಭೂಮಿಯಲ್ಲಾಗಲಿ, ಶೇಕ್ಸ್‌ಪಿಯರ್ ರಂಗಭೂಮಿಯಲ್ಲಾಗಲಿ ಸ್ತ್ರೀಯರು ಅಭಿನಯಿಸುತ್ತಿರಲಿಲ್ಲವೆಂಬುದನ್ನು ವಿದ್ವಾಂಸರು ಖಚಿತಪಡಿಸಿದ್ದಾರೆ. ಜೀವನವೆಂಬುದು ಬರಿಯ ಪುರುಷರಲ್ಲವೆಂಬುದನ್ನು ನಾಟಕ ರಂಗಭೂಮಿಯ ಇತಿಹಾಸವು ಖಚಿತಪಡಿಸುತ್ತದೆ.


ನಟನು ರಂಗಭೂಮಿಯ ರಚನೆಗೂ, ಬಳಕೆಗೂ ಆಧಾರವಾಗಿದ್ದವನು. ಅದನ್ನು ಅರಿತೇ ನಾಟಕಕಾರರು ಕೃತಿರಚನೆಗೆ ತೊಡಗಿದ್ದಲ್ಲದೇ ಪ್ರಯೋಗವೇ ಮುಖ್ಯವೆಂಬುದನ್ನು ಭಾಸ-ಕಾಳಿದಾಸರ ಕಾಲದಿಂದಲೂ ಗುರುತಿಸಬಹುದು. all the world a stage each one an actor ಎಂದು ಶೇಕ್ಸ್‌ಪಿಯರೂ, ನಾಟ್ಯಂಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಾರಾಧನಂ ಎಂದ ಕಾಳಿದಾಸನೂ ನಟನನ್ನು ಮುಖ್ಯವೆಂದು ಹೇಳುತ್ತಾರಷ್ಟೇ.

ಕನ್ನಡದ ರಂಗಭೂಮಿಯ ಇತಿಹಾಸಕಾರರಾದ ಹೆಚ್.ಕೆ. ರಂಗನಾಥರು ಸಂಗೀತನಾಟಕದ ಕಾಲವನ್ನು ನಟನ (ಅಭಿನಯದ) ರಂಗಭೂಮಿ ಎಂದೂ ನಂತರ ನಾಟಕಕಾರನ ಕಾಲವೆಂದೂ ಸ್ವಾತಂತ್ರ್ಯಾನಂತರದ್ದನ್ನು ಸಹಜವಾಗಿ ನಿರ್ದೇಶಕ ಕಾಲವೆಂದೂ ಹೇಳಿದ್ದುಂಟು. ಈಗಲೂ ನಾಟಕವು 'ನಟನ' ಪ್ರಾಮುಖ್ಯತೆಯನ್ನು ತಳ್ಳಿ ಹಾಕಲಾರದು. ನಾಟಕಕಾರ ಕೂಡ ಪ್ರತಿಯೊಂದು ಪಾತ್ರಕ್ಕೂ 'ನಟ'ನನ್ನು ಆಧರಿಸುವಂತಿರುತ್ತದೆ. ಪರ್ವತವಾಣಿ ಸ್ವಾತಂತ್ರ್ಯಪೂರ್ವದಲ್ಲಿ ಕೈಲಾಸಂ ನಟನಾಗಿ ಅನಂತರಕ್ಕೆ ಬರಬೇಕಾದ ಹೊಸ (ಸ್ವಾತಂತ್ರ್ಯ) ಬಗೆಯ ರಂಗಭೂಮಿಗಳಾಗಿ ಕಲಿತವರು ನೀಡುತ್ತಿದ್ದ ಉತ್ತೇಜನದಿಂದ ಕೇವಲ 'ರಂಗದರ್ಶನ'ವನ್ನು ಕಳೆದುಹೋಗದಂತೆ ರೂಪಾಂತರಗಳನ್ನು ಅಭಿನಯಿಸುತ್ತಿದ್ದು — ಶ್ರೀರಂಗ ಮೊದಲಾಗಿ ಕಾರ್ನಾಡ, ಪಿ.ಬಿ. ಜೋಶಿ, ಲಂಕೇಶ್, ಚಂಪಾ ಮೊದಲಾದವರನ್ನು ನಾಟಕಕಾರರನ್ನಾಗಿ ಕುರಿತಂತೆ ಕಂಡುಬರುತ್ತದೆ. ಈ ವೇಳೆಗೆ ನಂಸ ಕೂಡ. ಆದುದರಿಂದ ರಂಗಭೂಮಿಯ ನಾಟಿತ್ವವನ್ನು ಮಾತ್ರ ವಿಮರ್ಶಿಸುವವರು ನಾಟಕಕಾರರನ್ನು ಮಾತ್ರ ಮುಖ್ಯವೆನ್ನುವಂತೆ ನಡೆದುಕೊಳ್ಳುವುದು ವಿದ್ವತ್ತಿಗೆ ತಕ್ಕುದಾಗಲಾರದು.

ನಟನ ಪ್ರಾಮುಖ್ಯತೆಯನ್ನು ಎಲ್ಲರ ಗಮನಕ್ಕೆ ತಂದ ಮೂಕನಾಟಕಗಳನ್ನು ರಚಿಸಿದ ಶ್ರೀನಿವಾಸರಾಯು ಇದ್ದಾರೆ. ಅನುವಾದಗಳನ್ನು ಹೊಸ ರೀತಿಯಲ್ಲಿ ಅಂದರೆ ಕ್ರಿಯೇಟಿವ್ ಎಂದು ಗುರುತಿಸಬೇಕಾದಂತೆ ಕೃತಿ ರಚನೆಗೆ ತೊಡಗಿರುವವರೂ ಇದ್ದಾರೆ. ಟೀವಿ ನಾಟಕ ಕೂಡ ಇಂಥದೇ ಒಂದು ಬಗೆಯಾಗುತ್ತದೆ


ಪರ್ವತವಾಣಿ (ಮತ್ತು ಗೆಳೆಯರು) ನವ್ಯ ನಾಟಕಕಾರರಿಗಾಗಿ ಟಿಸ್ಸಲೆಯಾಗಿ ಸಂಗೀತನಾಟಕ - ರಂಗಭೂಮಿಯನ್ನು ಬಿಟ್ಟು ಸರಳವಾದ ರೀತಿಯಲ್ಲಿ ಅಂದರೆ ರಂಗಮಂಟಪವಿಲ್ಲ, ಸೆಟ್ಟು ಇಲ್ಲ, ವಿಶೇಷ ಪರಿಣಾಮವಿಲ್ಲ ಇಷ್ಟು ಸರಳವಾದ ರೀತಿನೀತಿಯಲ್ಲಿದ್ದೂ ಬಹದ್ದೂರು ಗಂಡು — ವಿನಯಾರ್ಗ ಮತ್ತು ಹಣಹದ್ದಿನಂಥ ಪರಿಣಾಮಕಾರಿ ಪ್ರಹಸನಗಳನ್ನು ರಚಿಸಿದ ಹಿರಿಮೆಗೆ ಕಾರಣರಾಗುತ್ತಾರೆ. ಸುಮಾರು ೧೯೬೦ರ ನಂತರದ ರಂಗಭೂಮಿಯನ್ನು ಮಾತ್ರ 'ಶತಮಾನದ ನಾಟಕ' ಎಂದು ಗುರುತಿಸುವುದರಲ್ಲಿ ಪಾಂಡಿತ್ಯದ ಸಾರ್ಥಕವಾದ ಲೋಪವನ್ನು ಕಾಣಬಹುದಾಗಿದೆ. ಸದ್ಯದ ಶತಮಾನ ನಾಟಕಗಳ ಸಂಕಲನದ ವಿಷಯದಲ್ಲಿ ನಮ್ಮ ಅಕಾಡೆಮಿಗಳು ಸರಿಯಾದ ಮಾರ್ಗವನ್ನು ಗುರುತಿಸಿದಂತೆ ಕಾಣುತ್ತಿಲ್ಲ. ಇದೊಂದು ವಿಷಾದದ ಸಂಗತಿಯಾಗಿರುತ್ತದೆ

(ಕನ್ನಡ ರಂಗಭೂಮಿಯ ೨೦ನೇ ಶತಮಾನದಲ್ಲೇ ಎ.ಎನ್. ಮೂರ್ತಿರಾಯರ 'ಆಷಾಢಭೂತಿ', ಪರ್ವತವಾಣಿಯವರ 'ಬಹದ್ದೂರ್ ಗಂಡ' ನಾಟಕಗಳನ್ನು ಸ್ವಾತಂತ್ರ್ಯ ಪೂರ್ವದ 'ಹೆಜ್ಜೆ ಗುರುತುಗಳೆಂದು ಗುರುತಿಸುವುದಕ್ಕೆ ಯಾವ ಅಡ್ಡಿಯೂ ಇರಲಾರದು.)



ಎಂ.ಐ.ಜಿ. ೮೧, ಕೆಂಗೇರಿ ಉಪನಗರ, ಬೆಂಗಳೂರು

# ಪುಸ್ತಕ ಪರಿಚಯ




## 'ಬಂಧವಿದ್ದೂ ಬಂಧುರವೆನ್ನಿಸುವ' ಕೃತಿ

**ನೀರು ಮತ್ತು ಪ್ರೀತಿ**
ಲೇಖಕ : ಅಗ್ರಹಾರ ಕೃಷ್ಣಮೂರ್ತಿ
ಬೆಲೆ : ರೂ. 35/-  ಪುಟ : 96
ಪ್ರಕಾಶಕ : ನೆಲಮನೆ ಪ್ರಕಾಶನ
ಶ್ರೀರಂಗಪಟ್ನ, ಮಂಡ್ಯ

ಅಗ್ರಹಾರ ಕೃಷ್ಣಮೂರ್ತಿ ಅವರ 'ನೀರು ಮತ್ತು ಪ್ರೀತಿ' ಕಿರು ಕಾದಂಬರಿ ಓದಲು ಸಿಕ್ಕಿದ್ದು ಹೀಗೇ ಆಕಸ್ಮಿಕವಾಗಿ. ಇತ್ತೀಚಿನವನ್ನು ಕುರಿತ ಹರಟೆಗಳಲ್ಲಿ ಗೆಳೆಯರು ಈ ಪುಸ್ತಕವನ್ನು ಕುರಿತು ಸಾಂದರ್ಭಿಕವಾಗಿ ಪ್ರಸ್ತಾಪಿಸಿದ್ದು ಕೇಳಿದ್ದೆ. ಆ ಪುಸ್ತಕ ಅನಿರೀಕ್ಷಿತವಾಗಿ ಮನೆಗೆ ಬಂದಾಗ ಸಹಜ ಕುತೂಹಲದಿಂದ ಓದಲು ಶ್ರೀ ಕೃಷ್ಣಮೂರ್ತಿಯವರನ್ನು ಮೊದಲನೇ ಪರಿಚಯದ ಸಲುವಾಗಿ ನಾನು ಭೇಟಿ ಮಾಡಲು ಹೋದದ್ದು. ಆಗ ಈ ಪುಸ್ತಕ ಕೈಗೆ ಸಿಕ್ಕಿದ್ದು, ನಾನು ಓದಿದ್ದು — ಈ ಎಲ್ಲ ಲೌಕಿಕಗಳ ಗರ್ಭದಿಂದ, ಪುಸ್ತಕವೊಂದರ ಜತೆ ಲೀನವಾಗುವ ಅವಕಾಶ, ಸಾಧ್ಯವಾಗುವುದು ಎಂದು ನನಗನ್ನಿಸಿರಲಿಲ್ಲ. ಇತ್ತೀಚೆಗೆ ಬರೀ ಓದುವಿಕೆ, ಶಾಸ್ತ್ರಗ್ರಂಥಗಳನ್ನೇ ಓದಿ, ಅವನ್ನೇ ಮನನ ಮಾಡಿದ್ದ ನನಗೆ ಈ ಪುಸ್ತಕದ ಓದು ಆಹ್ಲಾದಕರ ಅನುಭವ ನೀಡಿತು. ಕೃಷ್ಣಮೂರ್ತಿ ಅವರು ಡಿ.ಆರ್. ನಾಗರಾಜ್ ಅವರಿಗೆ ಈ ಪುಸ್ತಕವನ್ನು 'ಕಾಣಿಕೆ' ರೂಪದಲ್ಲಿ ಅರ್ಪಿಸಿದ್ದಾರೆ

ಇದೋ ನೀರು ಮುಟ್ಟದ ನೀರು
ಮತ್ತು ಪ್ರೀತಿ ಗೆಳೆಯಾ ಡಿ.ಆರ್.
ನಿನಗಾಗಿ ನಾನಿನ್ನೂ ಹಾಕಿಲ್ಲ ಕಣ್ಣೀರು

ಈ ಮೂರು ಸಾಲುಗಳು ಹೊರಡಿಸುವ ಅನೇಕಾರ್ಥಗಳು ಕೃಷ್ಣಮೂರ್ತಿಯವರ ಬಗ್ಗೆ ಮೆಚ್ಚುಗೆ ಮೂಡಿಸಿವೆ.

ಕಾದಂಬರಿ ಪ್ರಾರಂಭವಾಗುತ್ತಿದ್ದಂತೆ ಪರಿಚಯ ಆಗುವವಳು ಜಲಜ (ನೀರಿನಲ್ಲಿ ಹುಟ್ಟಿದವಳು!) ಮತ್ತು ಅವಳ ನೀರಿನ ಬಗೆಗಿನ ಕನಸು. ತನ್ನ ನೆಂಟರಾಗಬೇಕಾದ ವೃದ್ಧ ವಿಧವೆ ಯಮುನತ್ತೆಯ ಮನೆಯಲ್ಲಿದ್ದು, ನೀರಿಗೆ ತತ್ವಾರ ಅನುಭವಿಸುತ್ತಾ, ಕಾಲೇಜು ಓದುತ್ತಿರುವ ಹುಡುಗಿ ಅವಳು. ಸ್ನಾನಕ್ಕಾಗಿ ಪರಿತಪಿಸುವ ಜಲಜ ಗೆಳತಿ ಗೀತಾಳ ಮನೆಗೆ ಹೋಗುವುದು, ಬರುವುದು ಮಾಡುತ್ತಿರುವಾಗ, ತನ್ನ ಸಹಪಾಠಿ ಗೋಪಾಲನ ಮನೆ ದಾರಿಯಲ್ಲೇ ಇರುವುದು ಗೊತ್ತಾಗುತ್ತದೆ. ಅವನ ಮನೆಯಲ್ಲಿ ನೀರಿಗೆ ಬರವಿಲ್ಲ. ಅವನೊಡನೆ ಮಾತುಕತೆಯಾಡುವ ನೆಪದಲ್ಲಿ ಜಲಜ ತನ್ನ ನೀರಿನ ಬಯಕೆಯನ್ನು ತೀರಿಸಿಕೊಳ್ಳುತ್ತಾಳೆ. ಹೆಚ್ಚು ಕಡಿಮೆ ನೀರಿಗಾಗಿ ಎಂಬಂತೆ ತನ್ನನ್ನೇ ಕೊಟ್ಟುಕೊಳ್ಳುವ ಜಲಜಳಿಗೆ ಗೋಪಾಲನ ನಿಷ್ಠೆಯ ಬಗ್ಗೆ ಸ್ವಲ್ಪ ಅನುಮಾನವೂ ಇರುತ್ತದೆ. ಮುಂದೆ ಇದೇ ನೀರಿನ ಪ್ರೀತಿಯಿಂದಾಗಿ, ನೀರಿನ ಬಗ್ಗೆ ಪಾಠ ಮಾಡುತ್ತಿದ್ದ ಮೇಷ್ಟ್ರು ಕ್ಯಾಂಪಿಗೆ ಹೋಗಿ, ಅವರು ಇವಳೊಡನೆ ಅನುಚಿತವಾಗಿ ವರ್ತಿಸಿ, ರಾದ್ಧಾಂತವಾಗುತ್ತದೆ. ಸೇಡು ತೀರಿಸಿಕೊಳ್ಳಬಯಸುವ ಮೇಷ್ಟ್ರು ಜಲಜಳ ತಂದೆಗೆ ಸುದ್ದಿ ತಿಳಿಸಿ, ಅವರು

ಜಲಜಳ ಹತ್ತಿರ ಓಡಿ ಬಂದು, 'ಮರ್ಯಾದೆಗೆ' ಹೆದರಿ ಮನೋಹರನೆಂಬ 'ಮಟ್ಟಾ ಕೊಳಕ'ನೊಂದಿಗೆ ಇವಳ ಮದುವೆ ಮಾಡಿಯೇ ಬಿಡುತ್ತಾರೆ. ಅವನೂ ಕೊಳಕು ಅಭ್ಯಾಸಗಳಿಂದ ಬೇಸತ್ತ ಜಲಪ್ರಿಯೆ ಜಲಜಾ ಕೊನೆಗೆ ಗೋಪಾಲನ ಹತ್ತಿರ ಬಂದುಬಿಡುತ್ತಾಳೆ (ಗಂಡನನ್ನು ತೊರೆದು) ಇದರಿಂದಾಗಿ ಅವಳ ತಂದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಈ ಸರಳವಾದ ಕಥಾ ಹಂದರವನ್ನು ಇಟ್ಟುಕೊಂಡು ಕೃಷ್ಣಮೂರ್ತಿಯವರು ಚೆಲುವಾದ ಗದ್ಯದಲ್ಲಿ ಮಧುರವಾದ ಕೃತಿಯೊಂದನ್ನು ರಚಿಸಿದ್ದಾರೆ. ನಿಜ ಬದುಕನ್ನು ಸಣ್ಣ ಸಣ್ಣ ವಿವರಗಳಲ್ಲಿ ಹಿಡಿಯುವ ರೀತಿ, ನವಿರಾದ ಹಾಸ್ಯ ಪ್ರಜ್ಞೆ, ಅಂತ್ಯ ಸ್ವಲ್ಪ ಸಿನಿಮೀಯವಾದಂತೆ ಕಂಡರೂ ಒಂದಕ್ಕೊಂದು ಕೊಂಡಿಹಾಕಿಕೊಳ್ಳುತ್ತ ಹೋಗುವ ಸನ್ನಿವೇಶಗಳು, ನೀರು ಮತ್ತು ಪ್ರೀತಿ ಒಟ್ಟೊಟ್ಟಿಗೇ ಹೆಣೆದುಕೊಳ್ಳುವ ಕ್ರಮ ಇವೆಲ್ಲ ಮುದ ನೀಡುತ್ತವೆ. ಜಲಜಳ ನೀರಿನ ಗೀಳು, ಗೋಪಾಲನ ಪರೋಪಕಾರ ಆತುರ, ಮೇಷ್ಟ್ರ ಕುತ್ಸಿತ ಬುದ್ಧಿ, ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಜಗಿಯಾಗಿ ಬಂಧಿತರಾದ ಜಲಜಳ ತಂದೆಯ ಚಿಂತೆ, ಯಮುನಕ್ಕಿಯ ಬಿಗುಪಿನ ನಡವಳಿಕೆ ಎಲ್ಲವನ್ನೂ ಕಣ್ಣಿಗೆ ಕಟ್ಟುವ ಲೇಖಕರು ವಿವರಗಳನ್ನು ಸೂಕ್ಷ್ಮವಾಗಿ ಗಮನಿಸುವ ಕಲೆಗಾರಿಕೆ ಹೊಂದಿದ್ದಾರೆ.

ಒಟ್ಟಿನಲ್ಲಿ, ಸುಂದರವಾದ ಕನ್ನಡದಲ್ಲಿ ಬರೆಯಲ್ಪಟ್ಟ ಬದುಕಿನ ಒಂದು ಪುಟ್ಟ ಪಟವನ್ನು ಬಿಚ್ಚಿಡುವ ಪುಸ್ತಕ ಇದು. ಓದಿ ಬಹಳ ಕಾಲವಾದರೂ ಇದರ ಕಥಾಹಂದರ ನೆನಪಿನಲ್ಲಿ ಉಳಿಯುತ್ತದೆ. ಬದುಕಿನಲ್ಲಿ ಮೂಡುವ ಚಿತ್ರವಿಚಿತ್ರ ಗಂಟುಗಳ ಬಗ್ಗೆ, ಸಣ್ಣ ಸಣ್ಣ ಸಂಗತಿಗಳು ಸೇರುತ್ತಾ ಸೇರುತ್ತಾ ಇಡೀ ಬದುಕಿನ ವಿನ್ಯಾಸವನ್ನೇ ನಾವಂದುಕೊಂಡದ್ದಕ್ಕಿಂತ ಭಿನ್ನವಾಗಿ ಕಟ್ಟಿಬಿಡುವ ಬಗ್ಗೆ ಕುತೂಹಲ ಹುಟ್ಟಿಸುತ್ತದೆ. ಯಾವುದೇ ನೈತಿಕ ಪ್ರಶ್ನೆಗಳನ್ನು ಎತ್ತದೆ ಈ ನೊವೆಲಾ (ಕಿರುಕಾದಂಬರಿ ಎನ್ನುವುದಕ್ಕೆ ಇಂಗ್ಲಿಷಿನಲ್ಲಿ ಹೀಗನ್ನುತ್ತಾರೆಯೇನೋ? ಕೃಷ್ಣಮೂರ್ತಿಯವರು ಈ ಪದವನ್ನೇ ಬಳಸುತ್ತಾರೆ)ವನ್ನು ಓದಬೇಕು ಅನಿಸುತ್ತದೆ. ಏಕೆಂದರೆ ನೀರು ಮತ್ತು ಪ್ರೀತಿ ಯಾವ ನೈತಿಕ ಅಡ್ಡಗೋಡೆಗಳನ್ನು ಲೆಕ್ಕಿಸಿವೆ? ಅವಕ್ಕೆ! ಅವು ಸ್ವಚ್ಛಂದವಾಗಿವೆ. ಎಲ್ಲಿಕ್ಕೂ ಲೆಕ್ಕ ಹಾಕುವ ನಾವು ನೀರು, ಪ್ರೀತಿ ಎರಡರ ಬರವನ್ನೂ ಅನುಭವಿಸುತ್ತೇವೆ.

✦ ಡಾ|| ಎಲ್.ಜಿ. ಮೀರ



**ಮಂಜು ಕವಿದ ಸಂಜೆ ಮತ್ತು ಇತರ ಕತೆಗಳು**

ಲೇಖಕ : ಪಿ. ಲಂಕೇಶ್

ಬೆಲೆ : ರೂ. 85/- ಮುದ್ರಣ : 2004

ಪ್ರಕಾಶನ : ಪತ್ರಿಕೆ ಪ್ರಕಾಶನ

ಲಂಕೇಶರ ಮರಣೋತ್ತರ ಪ್ರಕಟಗೊಂಡಿರುವ ಕಥಾ ಸಂಕಲನ ಇದು. 1996ರಿಂದ ಕೊನೆಯತನಕ ಅವರು ಬರೆದ ಬಿಡಿ ಅಮೂಲ್ಯವಾದ ಕತೆಗಳು ಇಲ್ಲಿವೆ. ಲಂಕೇಶರ ಕತೆಗಳನ್ನು ಮತ್ತೊಮ್ಮೆ ಓದುವುದೇ ಒಂದು ವಿಶಿಷ್ಟ ಅನುಭವ. ಒಬ್ಬ ಹಳೆಯ ಗೆಳೆಯನ ಮರುಭೇಟಿಯ ಹಾಗೆ. ಇಲ್ಲಿರುವ ಹನ್ನೆರಡು ಕತೆಗಳು ಅವರ ಕೊನೆಯ ನಾಲ್ಕು ವರ್ಷಗಳ ಬರಹಗಳಾಗಿರುವುದರಿಂದ. ಈ

ಬರಹಗಳಿಗೆ ಮುಖ್ಯ ಅನಾರೋಗ್ಯ, ಇಂದ್ರಿಯಗಳ ಬಗೆಗೆ ದೇಹದ ಬಗೆಗಿನ ಆಸ್ಥೆ ಮುಖ್ಯವಾಗಿದೆ ಮತ್ತು ಯಾವತ್ತಿನ ಲಂಕೇಶತನವೊಂದು ಈ ಕತೆಗಳ ಒಸ್ಲೆಯಲ್ಲಿ ಢಾಳಾಗಿದೆ. ಮನುಷ್ಯನ ಸ್ವಭಾವದ ವಿಕೃತತೆ ಕ್ಷುಲ್ಲಕತನಗಳು ಗುಂಪಿನೊಳಗಿದ್ದೂ ಏಕಾಂಗಿಯಾಗುವ, ಇರುವ ಸ್ಥಿತಿಯಿಂದ ಮತ್ತೊಂದಕ್ಕೆ ಸದಾ ತುಡಿಯುವ ಮನುಷ್ಯ ಲಂಕೇಶರ ಕತೆಗಳಲ್ಲಿ ಕಾಣಬರುತ್ತಾನೆ. ಜೊತೆಗೆ ಮನುಷ್ಯನ ಸ್ವಭಾವ ವೈಚಿತ್ರ್ಯಗಳನ್ನು ನಿರುದ್ವಿಗ್ನವಾಗಿ ರೂಪಿಸುವ ಅವರ ಕಲ್ಲುಕರಗುವ ಸಮಯದ ನಂತರದ ಶೈಲಿ ಇಲ್ಲಿ ಮುಂದುವರೆದಿದೆ.

ಕೊನೆಕೊನೆಯಲ್ಲಿ ತಲೆ ಚಿಟ್ಟು ಹಿಡಿಸುತ್ತಿದ್ದ ಲಂಕೇಶರ ಪ್ರವಾದಿತನದ ಮನೋಭಾವಕ್ಕೆ ಪಾರದೆಯ ಪುಟ್ಟ ಸಾಹಸ ಮತ್ತು ಡಿಸೋಜಾನ ಯಾನ ವೃತ್ತಿ ಕತೆಗಳು ಸಾಕ್ಷಿಯಾಗುತ್ತವೆ. ಆದರೂ ಲಂಕೇಶರ ಬರವಣಿಗೆಯ ಮತ್ತೊಂದು ಒಡು ಮನಸ್ಸಿಗೆ ಮುದ ನೀಡುತ್ತವೆ. ಅವರ ಸಮಗ್ರ ಕತೆಗಳ ಜೊತೆಗೆ ಮರೆಯುವ ಮುನ್ನ ನೀಲು ಪದ್ಯಗಳು ಈಗ ಓದುಗರಿಗೆ ಅಗತ್ಯವಾಗಿ ಬೇಕೆನಿಸುತ್ತವೆ.




## ಸ್ಕಲ್ ಮಂತ್ರ

ಲೇಖಕ : ಮೂಲ : ಎಲಿಯಟ್ ಪ್ಯಾಟಿಸನ್
ಅನು : ಬೇಳೂರು ಸುದರ್ಶನ

ಬೆಲೆ : **ರೂ. 170/-** **ಮುದ್ರಣ : 2003**

ಪ್ರಕಾಶನ : ಅಂಕಿತ ಪುಸ್ತಕ

ನಮ್ಮ ಅನುವಾದಗಳು ಬಹುತೇಕ ಪಶ್ಚಿಮದಿಂದ ಇಲ್ಲಿಗೆ ಆಮದು ಆಗುತ್ತಿರುವಂಥವು ಇಂಗ್ಲಿಷ್ ಭಾಷೆಯಿಂದ. ಯುರೋಪಿನ ಸಾಹಿತ್ಯ ಕನ್ನಡಕ್ಕೆ ಅನುವಾದವಾಗಿರುವಷ್ಟು ಉಳಿದ ಭಾಷೆಯ ಪುಸ್ತಕಗಳು ಸಂಖ್ಯೆಯಲ್ಲಿ ಕಡಿಮೆಯೇ. ಅಷ್ಟೇ ಏಕೆ ನಮ್ಮ ಇತರ ಸೋದರ ಭಾರತೀಯ ಭಾಷೆಗಳ ಕೊಡುಕೊಳ್ಳುವಿಕೆಯೂ ಅಷ್ಟಕ್ಕಷ್ಟೇ. ಕೇಂದ್ರ ಸಾಹಿತ್ಯ ಅಕಾಡೆಮಿಯ ಕೆಲವು ಪ್ರಕಟಣೆಗಳು ಹೊರತು ಪಡಿಸಿದರೆ ಅವುಗಳ ಸಂಖ್ಯೆ ತೀರಾ ವಿರಳ. ನಮ್ಮ ಅಕ್ಕಪಕ್ಕದ ದೇಶಗಳಾದ ಚೈನಾ ಟಿಬೇಟ್‌ನ ಸಾಹಿತ್ಯಗಳು ನಮ್ಮಲ್ಲಿ ಅನುವಾದಗೊಂಡು ಓದಿಗೆ ದಕ್ಕಿರುವಂಥದ್ದು ಬಹಳ ಕಡಿಮೆ. ಬೇಳೂರು ಸುದರ್ಶನರ ಈ ನಿಟ್ಟಿನ ಪ್ರಯತ್ನ ಬಹಳಷ್ಟು ಗಮನೀಯವೆನ್ನಿಸುತ್ತದೆ. ಸ್ಕಲ್ ಮಂತ್ರ ಕೃತಿ ಒಂದು ಪತ್ತೇದಾರಿ ಕಾದಂಬರಿ. ಒಂದು ಕೊಲೆಯ ಸುತ್ತಲೂ ಬಿಚ್ಚಿಕೊಳ್ಳುವ ರಹಸ್ಯಗಳನ್ನು ಹೊಂದಿರುವ ಈ ಕಾದಂಬರಿ ಕನ್ನಡದ ಮಟ್ಟಿಗೆ ಎಷ್ಟರ ಮಟ್ಟಿಗೆ ಮರುಸೃಷ್ಟಿಗೊಂಡಿದೆ ಎನ್ನುವುದನ್ನು ಗಮನಿಸಿದಾಗ ನಿರಾಸೆಯಾಗುತ್ತದೆ. ಅನುವಾದಕರ ಮೂಲಕೃತಿಯ ಬಗೆಗಿನ ನಿಷ್ಠೆ ಅನುವಾದಿತ ಕಥೆಯ ಓದಿಗೆ ತುಂಬಾ ತೊಡಕಾಗುತ್ತದೆ. ಯಥಾವತ್ತು ಅನುವಾದದ ಪ್ರಯತ್ನದ ಫಲವಾಗಿ ಈ ನಾಲ್ಕು ನೂರು ಪುಟಗಳ ಕಾದಂಬರಿ ಓದುವುದು ಓದುಗರಿಗೆ ಅಪಾರ ಕಷ್ಟದ ಕೆಲಸ. ಹೊಸ ಕೃತಿಗಳು ಕನ್ನಡಕ್ಕೆ ಬರಬೇಕೆನ್ನುವುದೇನೋ ಸ್ವಾಗತಾರ್ಹ. ಅವು ಕನ್ನಡದಲ್ಲಿ ಮೈತಳೆಯದೇ ಹೋದರೆ ಅವುಗಳ ಪ್ರಯೋಜನ ಅಷ್ಟಕ್ಕಷ್ಟೆ. ಸಾಹಿತ್ಯಿಕ ದಾಖಲೆಯ ದೃಷ್ಟಿಯಿಂದ ಕನ್ನಡಕ್ಕೂ ಅನುವಾದಗೊಳ್ಳುವುದು ಸಾಧ್ಯವಾಗುವುದರ ಜೊತೆಗೆ ಕನ್ನಡದ್ದೂ ಆಗಬೇಕಾದ್ದು ಅತ್ಯಗತ್ಯ. ಈ ದೃಷ್ಟಿಯಿಂದ ರವಿ ಬೆಳಗೆರೆ ಅವರ ಗಾಡ್‌ಫಾದರ್ ಕಾದಂಬರಿಯ ಅನುವಾದ ಗಮನಿಸಿದರೆ ಅರ್ಥವಾದೀತು. ಸರಾಗವಾಗಿ ಕಾದಂಬರಿ ಓದಿಸಿಕೊಳ್ಳದಿದ್ದರೆ ವ್ಯರ್ಥ.



## ಥೈರಾಯ್ಡ್ ಮತ್ತು ಪಾಂಚಾಲಿ

ಲೇಖಕ : ಕಸ್ತೂರಿ ಬಾಯಿರಿ
ಬೆಲೆ : **ರೂ. 50/-** **ಮುದ್ರಣ : 2003**
ಪ್ರಕಾಶನ : ರವಿಕಿರಣ ಪ್ರಕಾಶನ (ರಿ) ಬಾದಾಮಿ

ಇವು ಮೆಲುದನಿಯ ಮನುಷ್ಯ ಜಗತ್ತಿನ ಬೆಚ್ಚಗಿನ ಕತೆಗಳು. ಕಸ್ತೂರಿ ಬಾಯಿರಿ ಅವರ ಕತೆಗಳ ಜಗತ್ತು ಒಂದೇ, ಅವರ ಆವರಣಗಳು ಮಾತ್ರ ಬದಲಾಗುತ್ತಿರುತ್ತವೆ.

ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳು ಹಾಯಿಲೆ, ಅಸಹಾಯಕತೆಗಳ ವಿಶಿಷ್ಟ ಜಗತ್ತು ಇಲ್ಲಿ ಅನಾವರಣಗೊಳ್ಳುತ್ತವೆ. ಕೆಲವು ಸಲ ಕತೆಯಲ್ಲಿ ತುರುಕಿಟ್ಟ ಹಾಗೇ ಕಾಣುವ ಮಾಹಿತಿಯ ವಿವರಗಳನ್ನು ಮೀರಿಯೂ ಕತೆಗಳ ಆರ್ದ್ರತೆ ತಟ್ಟುವ ಹಾಗಿವೆ.

ಮುನ್ನುಡಿಯಲ್ಲಿ ಜಯಂತ ಕಾಯ್ಕಿಣಿ ವಿವರಿಸುವ ಹಾಗೆ ಮದುವೆಯ ಹಂಗಿಲ್ಲದೆ ಬದುಕನ್ನು ಎದುರಿಸ ಹೊರಡುವ ದಿಟ್ಟ ಏಕಾಕಿ ಹೆಂಗಸರ ಬದುಕಿನ ವಿವರಗಳನ್ನು ಎಲ್ಲೂ ಎಳೆಯದೆ ಹಿಗ್ಗಿಸದೆ ಇಸ್ತ್ರಿ ಹಾಕದೆ ಲೇಖಕಿ ಅಪಾರ ಪ್ರೀತಿಯಿಂದ ಸ್ಪರ್ಶಿಸಿ ತೋರಿಸುತ್ತಾರೆ. ಜೊತೆಗೆ ಅತ್ಯಂತ ಸ್ವಾಯತ್ತವಾಗಿ ಬದುಕುವ ಇಲ್ಲಿನ ಪಾತ್ರಗಳು ತಮ್ಮ ಜಗತ್ತಿನ ಒಳಗಿದ್ದುಕೊಂಡೇ ವಿಶಾಲ ಜಗತ್ತಿನ ಜೊತೆಗೆ ಸಾಧಿಸುವ ಸಂಸಾರಿಕತೆ ಅಪ್ಪಟ ಮತ್ತು ಅಮೂಲ್ಯವಾದದ್ದು.



## ಅಗ್ನಿದಿವ್ಯ (ವೈದ್ಯಕೀಯ ಪ್ರಬಂಧಗಳು)

ಲೇಖಕ : ಡಾ॥ ಎಚ್.ಎಸ್. ವೆಂಕಟೇಶಮೂರ್ತಿ
ಬೆಲೆ : **ರೂ. 25/-** **ಮುದ್ರಣ : 2004**
ಪ್ರಕಾಶನ : ಎಸ್.ಎಸ್.ವಿ.

ಲೇಖಕರಿಗಿಂತ ಬೇರೆಯ ವೃತ್ತಿಯ ಜನ ತಮ್ಮ ಅನುಭವ ಬರೆದಾಗ ಅದರ ಸೊಗಸು ಬಗೆಯು ಬೇರೆಯದೇ ರೀತಿಯದ್ದು. ಸ್ವತಃ ವೈದ್ಯರಾದ ಡಾ॥ ಹೆಚ್. ಎಸ್. ವೆಂಕಟೇಶಮೂರ್ತಿ ಈ ಪುಟ್ಟ ಪುಸ್ತಕದಲ್ಲಿ ತಮ್ಮ ವೈದ್ಯಕೀಯ ಜಗತ್ತಿನ ಅನುಭವಗಳನ್ನು ಸರಳವಾಗಿ ಬಿಚ್ಚಿಟ್ಟಿದ್ದಾರೆ. ಕನ್ನಡಕ್ಕೆ ವೈದ್ಯ ಲೇಖಕರು ಅಪರೂಪ ಅಲ್ಲವಾದರೂ ವೆಂಕಟೇಶಮೂರ್ತಿ ಅವರ ನಿರೂಪಣೆ ಹಾಗೂ ಅದರ ಹಿಂದಿನ ಕಳಕಳಿ ಅಪೂರ್ವವಾದದ್ದು. ಅತಿ ಸುಲಭವಾಗಿ ಓದಿಸಿಕೊಂಡು ಹೋಗುವ ಈ ಪುಟ್ಟ ಐವತ್ತು ಪುಟಗಳ ಪುಸ್ತಕದಲ್ಲಿ ವೈದ್ಯರ ಜಗತ್ತಿನ ಏಕಾಂತದ ಆಗು-ಹೋಗುಗಳು ಅವರ ವೃತ್ತಿಪರತೆ ಬದ್ಧತೆಗಳು ಜೊತೆಗೆ ಅವರ ನೈತಿಕ ಜಿಜ್ಞಾಸೆಗಳು ತೆರೆದಿಡಲಾಗಿವೆ ಅದರಲ್ಲೂ ಸಾವಿನ ಬಗೆಗೆ ಇರುವ ಕೊನೆಯ ಅಧ್ಯಾಯ ಮನುಷ್ಯ ಸಾವನ್ನು ಎದುರಿಸಬಹುದಾದ ಅದಕ್ಕೆ ಪೂರಕವಾದ ವಿಚಾರಗಳನ್ನು ಚರ್ಚಿಸುತ್ತದೆ.

ಕನ್ನಡ ಮೇಷ್ಟ್ರೊಬ್ಬರು ಮಾಡಬಹುದಾದ ಮೇಲ್ಪಂಕ್ತಿಯ ಕೆಲಸವನ್ನು ಕವಿ ಹೆಚ್. ಎಸ್. ವಿ. ತಮ್ಮ ಶಿಷ್ಯ ಡಾ. ಹೆಚ್. ಎಸ್. ವೆಂಕಟೇಶಮೂರ್ತಿಯವರ ಅನುಭವಗಳ ಈ ಪುಸ್ತಕ ಪ್ರಕಟಿಸುವ ಮೂಲಕ ಮಾಡಿದ್ದಾರೆ.



**ಕವಿಗೆ ಕವಿ ಮಣಿವನ್(ವೈದ್ಯಕೀಯ ಪ್ರಬಂಧಗಳು)**

ಸಂಪಾದಕರು : ಎಂ. ಸರಸ್ವತಿ, ಎಸ್. ವತ್ಸಲಾ, ಎಂ. ರೇಣುಕಾ

ಬೆಲೆ : **ರೂ. 45/-** **ಮುದ್ರಣ : 2004**

ಪ್ರಕಾಶನ : ಕನ್ನಡ ವೇದಿಕೆ,
ಶ್ರೀ ಭಗವಾನ್ ಮಹಾವೀರ ಜೈನ್ ಕಾಲೇಜ್,




ಇದೊಂದು ವಿಶಿಷ್ಟ ಬಗೆಯ ಪುಸ್ತಕ. ಕನ್ನಡದ ನವೋದಯದ ಕವಿಗಳಾದ ಪಂಜೆಯವರಿಂದ ಆರಂಭಿಸಿ ಲಂಕೇಶ್ ತನಕ ಒಬ್ಬ ಕವಿ ಮತ್ತೊಬ್ಬ ಕವಿಯ ಕುರಿತು ಬರೆದ ಕವಿತೆಗಳನ್ನು ಒಂದು ಸಂಕಲನದಲ್ಲಿ ಕಲೆ ಹಾಕಲಾಗಿದೆ. ಕನ್ನಡದ ಎಲ್ಲ ಪ್ರಮುಖ ಕವಿಗಳು ಒಬ್ಬರು ಮತ್ತೊಬ್ಬರ ಬಗ್ಗೆ ಕಾವ್ಯಾತ್ಮಕವಾಗಿ ಪ್ರತಿಕ್ರಿಯೆ, ಸ್ಪಂದನಗಳನ್ನು ತೋರಿದ್ದಾರೆ. ಸಹಜವಾಗಿಯೇ ಆಯಾ ಕಾಲಮಾನದ ಮನೋಧರ್ಮದ ಕವಿಗಳು ತಮಗೆ ಕಂಡ ಹಾಗೆ ಮತ್ತೊಬ್ಬ ಕವಿಯ ಬಗೆಗೆ ಗೌರವದಿಂದ ಕೆಲವು ಕಡೆ ಪ್ರೀತಿಯಿಂದ, ಮತ್ತೆ ಕೆಲವು ಕಡೆ ಅಸಹನೆಯಿಂದಲೂ ತೋಡಿಕೊಂಡಿರುವಂಥದ್ದು ಕಾಣಬರುತ್ತದೆ. ಆದರೆ, ಇಲ್ಲಿನ ಕವನಗಳು ಕವಿಗಳ ಆಯ್ಕೆಯ ವಿಚಾರದಲ್ಲಿ ತೂಕ ತಪ್ಪದೇ ಒಂದು ಸಮತೋಲನ ಕಾಪಾಡಿಕೊಂಡಿರುವುದು ಕಾಣಬರುತ್ತದೆ. ಕವಿಗೆ ಕವಿ ಮಣಿವ ನೆಪದಲ್ಲಿ ಹೊಗಳುಭಟ್ಟ ಜೊಳ್ಳು ಕವಿಗಳು ಮತ್ತು ಕವಿತೆಗಳು ಜಾಗ ಪಡೆದಿಲ್ಲ. ಇಂಥದ್ದೊಂದು ಪ್ರಬುದ್ಧತೆಯನ್ನು ಈ ಪುಸ್ತಕದ ಸಂಪಾದಕರು ತೋರಿರುವುದನ್ನು ಮೆಚ್ಚಲೇಬೇಕು.

ಜೈನ ಕಾಲೇಜು ಕನ್ನಡ ವೇದಿಕೆಯ ಎರಡನೇ ಪ್ರಕಟಣೆ ಇದು. ಇಂಥದ್ದೊಂದು ಅಭಿರುಚಿ ನಿರ್ಮಾಣದ ಕೆಲಸಕ್ಕೆ ತೊಡಗಿರುವ ಜೈನ್ ಕಾಲೇಜು ಕನ್ನಡ ವೇದಿಕೆಯ ಪ್ರಯತ್ನ ಮುಂದುವರಿಯಲಿ. ಕಾಲೇಜು ಕನ್ನಡ ಕೂಟಗಳು ಕನ್ನಡಕ್ಕೆ ಕೊಟ್ಟ ಗಟ್ಟಿ ಕೊಡುಗೆಗಳಲ್ಲಿ ಇದರದ್ದೂ ಸಾಲುಗೂಡಲಿ.



✦ ಡಿ.ವಿ. ಪ್ರಹ್ಲಾದ್








# ಸಂಚಯದ ಪ್ರಕಟಣೆಗಳು


| | | | |
|---|---|---|---|
| 1) | ಗಾಜು (ಕವಿತೆಗಳು) | ವಿವಿಧ ಕವಿಗಳು | ರೂ. 8-00* |
| 2) | ಎ.ಕೆ. ರಾಮಾನುಜನ್ ಹೆಜ್ಜೆ ಗುರುತು | ವಿವಿಧ ಲೇಖಕರು | ರೂ. 1500* |
| 3) | ಸಿಕಾಡ (ಕವನ ಸಂಕಲನ) | ಜಿ. ಕೆ. ರವೀಂದ್ರಕುಮಾರ್ | ರೂ. 35-00 |
| 4) | ಡ್ರೀಮರ್ (ಕವಿತೆಗಳು) | ಡಿ. ವಿ. ಪ್ರಹ್ಲಾದ್ | ರೂ. 18-00 |
| 5) | ಅಭಿಮುಖ (ಲೇಖನಗಳು) | ಎನ್.ಎಸ್. ಶ್ರೀಧರಮೂರ್ತಿ | ರೂ. 20-00 |
| 6) | ಬಗೆ ತೆರೆದ ಬಾನು (ಸಾಹಿತಿಗಳ ಸಂದರ್ಶನಗಳು) | ಸಂ. ಡಿ. ವಿ. ಪ್ರಹ್ಲಾದ್ | ರೂ. 60-00 |
| 7) | ಚೌಕಟ್ಟು (ಸಮಕಾಲೀನ ದೃಶ್ಯಕಲೆ ಕುರಿತು) | ಸಂ. ಎಚ್.ಎ.ಅನಿಲ್‌ಕುಮಾರ್ | ರೂ. 25-00 |
| 8) | ಮೌನದ ಹೊತ್ತು (ಅನುವಾದಿತ ಕವಿತೆಗಳು) | ಸು. ರಂ. ಎಕ್ಕುಂಡಿ | ರೂ. 20-00 |
| 9) | ಕನಸು ಕೋಳಿಯ ಕತ್ತು (ಕವನಗಳು) | ಗೋವಿಂದ ಹೆಗಡೆ | ರೂ. 30-00 |
| 10) | ನಾಟಕ ಅಂತರಂಗ | ಎ.ಆರ್. ನಾಗಭೂಷಣ | ರೂ. 40-00 |
| 11) | ಮುಕ್ತಚಂದ | ಶಾಂತಿನಾಥ ದೇಸಾಯಿ ನೆನಪಿನ ಸಂಪುಟ | ರೂ. 85-00 |
| 12) | ಕಂಬಾರರ ನಾಟಕಗಳು | ಸಂ. ವಿಕ್ರಮ ವಿಸಾಜಿ | ರೂ. 45-00 |
| 13) | ಅವಧೂತನೊಬ್ಬನ ರೂಪಾಂತರ | ಕಥಾ ಸಂಕಲನ | ರೂ. 30-00 |
| 14) | ಮರೆತ ಮಾತು (ಕವಿತೆಗಳು) | ಡಿ.ಎಸ್. ರಾಮಸ್ವಾಮಿ | ರೂ. 45-00 |
| 15) | ಎರಡು ಏಕಾಂಕಗಳು | ಟಿ. ಶ್ರೀನಿವಾಸರಾಜು | ರೂ. 20-00 |





*ಪ್ರತಿಗಳು ಮುಗಿದಿವೆ.

# ಪ್ರತಿಕ್ರಿಯೆ



✦

'ಸಂಚಯ'-೬೩ನ್ನು ತುಮಕೂರು ಜಿಲ್ಲಾ ವಿಶೇಷಾಂಕ ಎಂದರೂ ಸರಿಯಾಗುತ್ತಿತ್ತು. ಅಷ್ಟೊಂದು ಪುಟಗಳನ್ನು 'ನಾವು ತುಮಕೂರಿನವರು' ಆಕ್ರಮಿಸಿಬಿಟ್ಟಿದ್ದೀವಿ. ಸಂಕಿರಣ - ೪ರಲ್ಲಿ ಶ್ರೀ ಎಸ್.ಜಿ. ಸಿದ್ಧರಾಮಯ್ಯನವರ ಕಾವ್ಯ ಕುರಿತು ಬರೆದಿರುವ ಚಂದ್ರಮಾಗಡಿ/ಉಗಮಶ್ರೀನಿವಾಸರ ಲೇಖನಗಳು ನಡುದಾರಿಯಲ್ಲಿ ನಿಲ್ಲಿಸಿ ಕೈಬಿಟ್ಟಂತಿದೆ. ಎಸ್.ಜಿ.ಎಸ್.ರವರ ಕಾವ್ಯದ ಬಹುದೊಡ್ಡ ಶಕ್ತಿಯೂ ಮತ್ತು ಅದೇ ಸಮಯದಲ್ಲಿ ಓದುಗನಿಗೆ ಬೆಟ್ಟದಂಥ ಸವಾಲೂ ಆಗಿರುವ ಅಪ್ಪಟ 'ದೇಸೀ' ಭಾಷೆಯ ಬಳಕೆ ಕುರಿತಾಗಿ ಸ್ವತಃ ಎಸ್.ಜಿ.ಎಸ್.ರವರೇ ಬರೆದಿರುವ ಲೇಖನ 'ದೇಸೀ ಎಂಬ ಅಪ್ರಮಾಣು' ಅವರ ಕಾವ್ಯಲೋಕಕ್ಕೆ ಉತ್ತಮ ಭಾಷ್ಯ. ಇಲ್ಲಿ ಬಹುಮುಖ್ಯ ಪ್ರಶ್ನೆಯೊಂದಿದೆ. ಎಸ್.ಜಿ.ಎಸ್. ಮತ್ತು ಬಹುತೇಕ ಅವರೊಂದಿಗೆ ದೇಸೀ ನೆಲೆಗಟ್ಟಲ್ಲೇ ಕಾವ್ಯ ಕೃಷಿ ಮಾಡುವ ಎಲ್ಲರನ್ನೂ ಕುರಿತು – ಅನುಭಾವವನ್ನು ಇಂದಿನ ತಲ್ಲಣಗಳ 'ಧ್ವನಿ'ಯಾಗಿ ಯಶಸ್ವಿಯಾಗಿ ಬಳಸಲು ಎಲ್ಲೋ ಒಂದು ಕಡೆ ಕೊರತೆಯಿದೆಯೆಂದೆನಿಸುತ್ತಿಲ್ಲವೆ? ಇದು ಖಚಿತಗೊಳ್ಳಬೇಕಾದ ಮತ್ತು ಚರ್ಚೆಯಲ್ಲೇ ನಿಲ್ಲದೆ ಕನ್ನಡಕ್ಕೆ ಒಂದು ಹೊಚ್ಚ ಹೊಸ ಮುಖವನ್ನು ತಿದ್ದಿಕೊಡಬಲ್ಲ ತೀರ್ಮಾನಕ್ಕೂ ಕಾರಣವಾದ ವಿಷಯವಾಗಿದೆಯೆಂದು ನನ್ನ ಅನಿಸಿಕೆ. ಇಂತಹ ಚಿಂತನೆಗೆ ತೊಡಗಿಸುವ ಈ ಸಂಕಿರಣ ಅತಿ ಪ್ರಸ್ತುತ. ಬಹುಶಃ ಕನ್ನಡ ಕಾವ್ಯವು ತನ್ನ ಹರಿವಿನಲ್ಲಿ ಒಳಗೊಳ್ಳಲೇಬೇಕಾದ ಗಟ್ಟಿದನಿಯಾದ ಎಸ್.ಜಿ.ಎಸ್.ರವರನ್ನು ಸಂಕಿರಣಕ್ಕೆ ಒಳಪಡಿಸಿದ್ದು ತುಂಬಾ ಔಚಿತ್ಯಪೂರ್ಣವಾದುದು ಹಾಗೂ ಸಕಾಲಿಕವಾದುದು. ಶ್ರೀಯುತ ರಾಮಲಿಂಗಪ್ಪ ಬೇಗೂರರ ಲೇಖನ ಕುತೂಹಲಕಾರಿಯಾದದ್ದು ಕೊನೆಯಲ್ಲಿ ಲೇಖಕರು ಹೇಳಿದ್ದಾರಲ್ಲ ಒಂದು ಮಾತು 'ರಾಜಕೀಯ ವಿರೋಧಪಕ್ಷದವನ ಥರಾ ಓದಿಬಿಟ್ಟೆನಾ – ಈ ಥರಾ ನಮಗೂ ಅನ್ನಿಸಿಬಿಡುತ್ತೆ ಒಂದೊಂದು ಸಾರಿ!' ಒಟ್ಟಿನಲ್ಲಿ 'ಸಂಚಯ' ಸಾಕಷ್ಟು ಗ್ರಾಸ ನೀಡುತ್ತದೆ.

**ಲಲಿತಾ ಸಿದ್ದಬಸವಯ್ಯ, ತುಮಕೂರು**

✦

... ಹೊಸ ರೂಪದಲ್ಲಿ ಹೆಚ್ಚು ಪುಟಗಳ ಜೊತೆಗೆ ಸೃಜನ್ ಅವರ ರೇಖಾ ಚಿತ್ರಗಳು ರಕ್ಷಾಪುಟಗಳ 'ಸಂಚಯ ಗ್ಯಾಲರಿ' ಒಳಗಿನ ಲೇಖನಗಳು ಎಲ್ಲವೂ ಚೆನ್ನಾಗಿವೆ. ಉಗಮಶ್ರೀನಿವಾಸ್ ಅವರು ಎಸ್.ಜಿ. ಸಿದ್ಧರಾಮಯ್ಯನವರ 'ಕರೆಬಳಗ' ಕುರಿತು ಬರೆದಿರುವುದು ಚೆನ್ನಾಗಿದೆ.


**ಡಾ. ಎಲ್.ಸಿ. ಸುಮಿತ್ರಾ, ತೀರ್ಥಹಳ್ಳಿ.**

✦

ಸಂಚಯ ಯಥಾ ಪ್ರಕಾರ ಚೆನ್ನಾಗಿ ಬಂದಿದೆ. ಒಂದೊಂದು ಸಂಚಿಕೆಯಲ್ಲೂ ಒಬ್ಬೊಬ್ಬ ಸಾಹಿತಿಯನ್ನು ಹೀಗೆ ಸಂಚಯಿಸುವ ಮೂಲಕ ಸ್ವಲ್ಪವಾದರೂ ಗಮನ ಅವರ ಕಡೆ ಹರಿದೀತು? ಸಾಹಿತ್ಯೇತರ ಕಾರಣಗಳಿಗಾಗಿ ಗಮನ ಸೆಳೆಯುವ ಸಾಹಿತಿಗಳ ಕುರಿತು Myth ಸೃಷ್ಟಿಸುವವರ ನಡುವೆ ನಿಮ್ಮ ಈ ಪ್ರಯತ್ನ ಅಭಿನಂದನೀಯ. ಹಾಗೆಯೇ ಈ ವರ್ಷ ಶತಮಾನೋತ್ಸವ ಆಚರಿಸುವ ಕುವೆಂಪು, ಶ್ರೀರಂಗ, ಕಡೆಂಗೋಡ್ಲು ಮುಂತಾದ ಹಿರಿಯರ ಕುರಿತೂ ಒಂದಿಷ್ಟು ನೆನಪು ನಿನಾದ ಇದ್ದರೆ ಒಳಿತೇನೋ? ಮುನ್ನಾಭಾಯಿ ಎಂ.ಬಿ.ಬಿ.ಎಸ್. ಸಿನಿಮಾ ಇನ್ನೊಂದು ಅಂಶವನ್ನೂ ಹೇಳಿದಂತಿದೆ. ಶಾಲಾಕಾಲೇಜುಗಳ ಒಳಗಿನ ಶಿಕ್ಷಣಕ್ಕಿಂತ ಹೊರಗಿನ ಶಿಕ್ಷಣವೇ ಹೆಚ್ಚೆಂಬ ಮಾದರಿ ಅದು. ನಮ್ಮ ಸಾರಸ್ವತ ಪ್ರಪಂಚದಲ್ಲಿ ಇನ್ನೂ ಡಾ॥ ಪ್ರೊ॥ ಮೊದಲಾದ ಎಕ್ಸ್ ಅಫಿಷಿಯೋ ಸ್ಥಾನಗೌರವಗಳನ್ನು ಕಂಡಾಗ ಈ ಸಿನಿಮಾ ನೆನಪಾಗಬೇಕು. ಸದಾಕಾಲ ಸರಕಾರದ ಖರ್ಚಿನಲ್ಲೂ ಕೃಪೆಯಲ್ಲೂ ಇರುವ ನಮ್ಮ ಅಕಾಡೆಮಿಗಳು, ಪ್ರಾಧಿಕಾರಗಳು ಇಲ್ಲೆಲ್ಲ ಮುಗಿಬೀಳುವವರನ್ನು ಕಾಣುವಾಗ ಅಸಹ್ಯ ಎನ್ನಿಸುವುದಿಲ್ಲವೇ? ಅವರೆಲ್ಲರೂ ಅ(ಪಾರ)ವಿದ್ಯಾವಂತರೇ.

**ಬಾಲಸುಬ್ರಹ್ಮಣ್ಯ ಕಂಜರ್ಪಣೆ, ಮಡಿಕೇರಿ.**

# ಸಂಚಯ ಗ್ಯಾಲರಿ



*ಕಲಾವಿದರು :*
ರೋರಿಚ್



*ಕೃತಿ :*
ಅಷಗರಿ ಖಾದಿರ್,
ಟೆಂಪೆರ



*ಕೃತಿ :*
ಶಿಲುಬೆಗೆ ಏರಿಸಿದ
ನಂತರ,
ಒಂದು ರೇಖಾ ಚಿತ್ರ



**SANCHAYA (quarterly)**
MAG (2) PRB-DECL : 309/94-95

EDITED, PRINTED & PUBLISHED BY
D.V. PRAHALAD
NO. 100, 2ND MAIN, 6TH BLOCK
3RD STAGE, 3RD PHASE,
BANASHANKARI, BANGALORE - 560 085
PH : 080-2679 1925